STATES REORGANISATION COMMISSION REPORT.

(Discussion continued.)

Mr. SPEAKER.—On the 19th November Hon'ble Member Sri A. Bheemappa Naik made some observations in respect of another Hon'ble Member. Serious objection was taken to use of that expression. I was also of the view that it was not a proper expression to use and I called upon Sri Bheemappa Naik to order and wanted that he should withdraw his remarks. Sri Bheemappa Naik immediately withdrew that expression. Sri D. Devaraj Urs who objected to the use of the expression that day and wanted Sri Bheemappa Naik to withdraw and apologise, has again raised this question yesterday and wanted to know whether Sri Bheemappa Naik would be asked to apologise.

When an improper expression is used in the House, the normal practice is to ask the Hon'ble Member who used the expression to withdraw the same and once he does so, no further action is called for. It is only where a Member refuses to withdraw the objectionable words when he is called upon to do so, that the matter requires to be pursued. In the present case Sri Bheemappa Naik has withdrawn the expression as soon as I called upon him to do so and no further action is called for.

Now Sri Pattabhiraman can speak.

Sri K. PATTABHIRAMAN (Kolar).—Sir, while asking for your indulgence for a few minutes more, I would like to make one or two more observations and try to be as short as I could.

At the very outset, I would like to have a clarification from the Chief Minister. From the Press report that has been read by me, I find that during the proceedings of the Mysore Pradesh Congress Committee, a question seems to have been addressed to the Chief Minister who was present there in respect of the resolution released by what is now come to be known as the 'High Power Committee appointed by the Congress Working Committee' and there is a particular expression, *viz.*, Kannada-speaking areas of the State, a phrase which has disturbed the minds of some persons and about it very rightly a clarification was asked. If I remember aright and if my memory has not fallen short, the Chief Minister has stated that he had a telephone call to the Prime Minister Sri Jawaharlal Nehru and from such clarification as he has received, he made it abundantly clear to them about the phrase Kannada-speaking areas. Does it mean, all Kannada-speaking areas excluding the district where I come from ? As I am directly interested, I thought that that clarification was necessary. And what is more my object in seeking was also for another aspect of it, and that is, I would like to know if otherwise the Chief Minister would not claim any kind of privilege in disclosing that document, if the document could be placed before us and share it with this House as that will have a very important and far-reaching effect in so far as its contents are concerned. If a clarification could be given on that, I will address a few words. I request through you the Chief Minister if he could share that letter with us and then I will proceed after hearing the clarification. Can I have an answer ?

Sri K. HANUMANTHAIYA (Chief Minister).—When I move the amendment, as I have said, I will give the clarification.

Sri K. PATTABHIRAMAN.—I leave the matter there. My own feeling is, this expression 'the Kannada regions of the State of Mysore,' as has been reported in the press, has been unfortunate or unhappy. On this question of Bellary which seems to be engrossing the attention of many people here, and which has really exercised the mind of very many people I find so far as this House is concerned, there is unanimous opinion. That there is no case made out for the retransfer of those three taluks for any of the reasons suggested, which have been answered in a way by the Chief Minister. A clarification might have been received. I would like to have that clarification.

There are two other aspects which I would like to refer to before I conclude my observations on this Report. One

(SRI K. PATTABHIRAMAN.)
is particularly about that Chapter of the Report which deals with the rights and privileges of the several minorities who must necessarily come into the picture as a result of the territorial redistribution of the Srates. So far as this question is concerned, what are the linguistic minorities ? There are minorities who are educationally backward, there are minorities who are economically backward, there are minorities of various kinds. In respect of them, certain concrete suggestions have been made in this Report and I would like to see that they are embodied in the Bill, that is going to be sponsored and I want it to be clearly made known to the Central Government that so far as this House is concerned, we are in union with regard to the recommendations made as regards guarantees and privileges that are guaranteed under that Chapter in regard to minorities. They have also pointed out that that might need in certain respects the amendment of the Constitution ; even that they should not hesitate to do. For instance, as regards linguistic minorities. I come from a district which has predominantly Telugu-speaking population. It must be clearly understood so far as our reforms are concerned—educational reforms and in several Acts and Government Orders that have been passed—here and elsewhere latterly there is a general feeling and it has also been conceded, that primary education must be given in the mother tongue. Whereas that resolution is there, and even the Central Board of Education has accepted that principle, but still so long as there is not that Constitutional guarantee so that it might become incumbent, it might become absolutely imperative on the part of a State Government to give primary education in the mother tongue. So far as that Constitutional guarantee is lacking—it is under the Directive Principles of the Indian Constitution—it is left to the sweet will and mercy of the particular State to provide for that. All the State Governments including the Central Government must agree that there must be a Constitutional guarantee that so far as primary education is concerned, it must be through the mother-tongue. This is very important because when we speak of the new State, we are not speaking of a unilingual language State. All are agreed on this proposition. We are all agreed that a Constitutional amendment is necessary endorsing what has been suggested in the Report I say that even the Constitutional amendment must be thought of in the Bill that is going to be sponsored somewhere in May next in the Central Parliament. Adequate provision has to be made. There are other guarantees and those guarantees are also of vital character. In order to maintain the all-India character of the State, the idea of common Indian citizenship, the broader perspective upon which I have tried to express myself for about sixty minutes last evening—in order to emphasise that, are made certain suggestions. For instance, some Judges being imported, some of the State Maining guaranteed to some from outside the State so that the all-India character may always be emphasised. I am in agreement with that view. I want that also to be endorsed. During the debate, we have not had the occasion when we could positively apply our mind to this aspect and bring it into the proceedings. As the entire proceedings are going to be translated, and sent to the Central Government it must be apparent that this House has applied its mind to this Chapter in the Report so that that thing also could be considered. There are other considerations which have been there in order to emphasise the all-India character. For instance, in regard to services, the guarantees that are to be given—even that Chapter merits a great deal of attention. Irrespective of territorial redistribution that we have got to think of,—in my opinion it becomes almost inevitable and cannot be postponed for any longer —these guarantees will be important and it will give the natural stimulus. It will give satisfaction to the various minorities. Another claim that I would like to make on behalf of this Report is, here is a case where they have thought of the all India picture;

to which they have always tried to integrate sectional or provincial interests. Therefore that Chapter also is a matter on which I would like this House to express itself so that it may become our unanimous opinion about these guarantees are there.

I do not like to anticipate the resolution that is going to be sponsored by the Chief Minister to-day or to-morrow. There are certain suggestions made. For instance, the suggestion that some of the areas which lie very close to Mysore desire to join Mysore. I am saying that not because of linguistic affinity. But there are certain areas—a place like Madakasira, a place like Hosur, a place like Talwadi, a place like Akalkote-they are all regions which want to join Mysore. Even according to the resolution released by the Working Committee and by the High Power Committee, when they say 'subject to adjustment', my own feeling is that that particular phrase envisages all these things. I would like that also to be emphasised.

There is one important circumstance which I would like to refer to before I conclude. This is an appeal I would like to make to every member through you; I do that with very great humility and I do that in spite of the fact that a feeling is there generated by some speeches that it is not possible to convert or reconvert anybody in this House; I tried and struggled hard till the last moment to consider if it were not possible for us, even on a question of this kind which has exercised long our mind, to be unanimous in outlook, in approach, in thought and on a question which after all concerns brothers and brothers ? Absolutely no other attitude I would import into that consideration. With that end in view, I am making this suggestion. When we look at the Report, we find that they want a stable and strong Central India. I am one of those who have also sworn by the federal India. On this occasion I am trying to compromise myself, compromise my ideal as it were when I subscribe to the scheme that has been emphasised herein and tried to be developed. They want to build up a strong and stable Centre or India. That is one aspect that we can see. Therefore, the federal idea that we have thought of, that we place before ourselves all these years for a good reason or for some other reasons, has been sought to be postponed as a result of this. There are supreme and overriding considerations which must have weighed with the Commission. Therefore if you look at the Report from page to cover, one supreme idea which seems to be ringing through, that is, they want to build up a strong string of States throughout India. But we are not carving out sovereign States; we only are re-distributing the States. The object of this Report is merely to re-distribute the States, not to carve out independent or sovereign States. There is only one sovereign State. That is the Democratic Republic of India. Let us agree with these three statesmen. They have got this great ideal in view. I make his last appeal. Whatever may be our differences, sink them, and let us be unanimous. I appreciate the feeling of Sri Veeranna Gowdh when he said that the directive from the Working Committee was rather unfortunate. But I feel that the directive might have been issued in order to see that the differences that could otherwise become apparent were cemented. I know Sri Veeranna Gowdh. There are memories of days which we have spent together. We have spent those days in jail and out of jail for months and years. I know his mind. For 25 years and even more, he worked for the freedom of this country. I remember those days when he accompanied by his wife went about every village in the State of Mysore and carried the torch of the Congress, the torch of Freedom. I know his feelings. But nevertheless there are larger aspects. This is a problem upon which we cannot say that it was something cutting into the very soul. I do not think it is a problem like that. One of the very distinguished members from my district, for whom I have the greatest regard, was speaking on another occasion in another place—I am told it was in the M. P. C. C. meeting, subject to correction. But let me tell him that

(SRI K. PATTABHIRAMAN.)

these are days of telepathy; these are days when hearts speak. There is a tongue which can express itself. That is the most effective tongue. Look at the dumb animal. When it goes about it does not speak. You know it is a poem of pity, it is a poem of sympathy. You know its mind. We know the mute language. If an Indian does not know it, who else could ?

Therefore in that mute language of the heart I have this communication that a distinguished member of my District said that in spite of his opposition to this view, he was sincerely led to believe to this that it is in the interest of the country. When those who have battled hard for the independence of the country, and received many wounds in the battles of freedom which they waged for years and years, say that Karnataka unification is in the best interests of the country, when the Members of the High Command and the Special Committee of the High Command say that the formation of the Karnataka State was in the interest of Mysore and in the interest of the country as a whole, I appeal to the distinguished friend of mine from my District and to all patriots: let every one of us without any murmur, without any dissent, but in *nem con* pass this resolution. I am proud of him and I am proud of the District from which he comes, I am told that it is the most distinguished member Sri N. C. Nagiah Reddy.

Sri N. C. NAGIAH REDDY (Gauribidanur).—It was done *in camera*.

Sri K. PATTABHIRAMAN.—As a lawyer I know it.

Sri K. HANUMANTHAIYA.—He said it has been done only *in camera*.

Sri K. PATTABHIRAMAN.—That is exactly what I am trying to comment on The Chief Minister might appreciate, he has left the bar and I am still in it. Though it is done *in camera* it is done however, I may say this. This precious information should not be kept from the millions who inhabit this State, and of the new State which is going to be.

I will make this last appeal to this House, so far as this issue is concerned. It is a vital matter. Let us forget our differences and unitedly say that a dream is going to be a reality and let us rise and not lag behind now.

After all is said and done, it is not Mysore alone that is affected. In fact, a suggestion has been made : "Why don't you face an election, why don't you risk bye-election." I know parliamentary procedure. But sometimes it happens that we have to protect people against themselves. This is one such issue. I have received information through telepathy and it is with regard to the advise that was given by one who has got a very great and very important role to play in the public life of the country, I mean, Mr. Dhebar, the President of the Indian National Congress. He seems to have given expression in one of his speeches somewhere in the State that this was a matter which cannot be taken to the market place, which cannot be taken to every man. After all is said and done, let us remember, it is the politicians who are divided on this issue. The man in the street is not worried. He is prepared to live with any person and good neighbourliness is one of the great qualities of the Indian which has been our pride and we have the pride of place for it throughout the world. We are prepared to live with anybody. In fact, when Pancha Shila was suggested, when co-existence among nations was suggested, it was said that Pandit Jawaharlal Nehru had given the Gandhian touch to relations amongst different countries in the world. Such being the case, can we not welcome and live with a neighbour for whose freedom we fought for over 25 years. I do not want to say much about it because it raises some emotion. I hope I won't be mistaken, because I have an object; as I said yesterday, I want to give a soothing effect if I can. At any rate, I will try and in the very trial, I get some kind of satisfaction. Therefore, I appeal to this House:

Let us look at this problem from a broader perspective of the new India that is going to be formed.

I am sure, Karnataka is going to be a very great State; its furture is great.

Let us all be clear in our mind that so far as the first Five-Year Plan is concerned, and even so far as the Second Five-Year Plan is concerned, it has almost become the budget of the Central Government. The whole budget of the aountry is going to be decided indirectly by the Centre. That is what we have arrived at in so far as these plans are concerned. Therefore, if one part of the country lags behind, it is the responsibility of every one of us to improve it. Therefore, thsse financial considerations need not weigh with us. After all, this is a matter which can be looked to. Therefore. I appeal to this House to pass a unaninus resolution in this matter, even as you have passed a resolution in the M.P.C.C. Mysore has always had a pride of place for sobriety and sanity. Let us all remember that we were the first among the Indian States to join the freedom struggle at a time when it was confined to British India. It was Mysore that took the lead. I remember in those days when I had something to do with the Congress Organisation, in my own humble way. Let us not belie our past; we have got something as a state for us. We have got to maintain and build up our reputation. In fact, there was a time when decisions by the Congress Committee of Mysore were put alongside the resolutions passed by the Indian National Congress and often times then compared favourably. That is the kind of sobriety, that is the kind of statesmanship we have to show now. We have made a name every where and even in the freedom struggle, our contribution is of no mean order. This is not an issue which has risen only yesterday. Sometimes I feel: how do we really reconcile ourselves to ideas like Lingayet community coming to prominence and the Vokkaliga Community losing prominence? This idea never occurs to the common man in the street. The common man thinks about the exploited and the exploiters. They are the persons, the exploited, who are going to decide the future of the country. In future, all of us will be forgotten; all of us will have to give way; vested interests will have to smither away. The man who is going to take the field is the exploited man. So long as his exploitation does not stop, till then, the exploited will have a grievance. After all, the exploited of Mysore and the exploited of Karnataka are all one and they want to come together. Let us forget these narrow issues and take a proper perspective of this question. Therefore I appeal to this House, and through you to every Hon'ble Member of the House, that by tomorrow when we take a vote on this resolution, let it not be said that there was any dissentient voice; let us be the harbingers of new Karnataka so that we may all live with hope and confidence like blood-brothers coming together. We had never been separated. We shall always be bound together under one beautiful edifice of one mighty India, stable India, and in order to build that, let each one of us play our worthy part. In that view, I appeal to the House to welcome the proposed Karnataka and I wholeheartedly endorse generally, the recommendations of the Fazl Ali Commission.

Mr. SPEAKER.—I want to bring to the notice of the House that we have gos only two days for discussion *i.e.*, today and tomorrow. Therefore, I would request the Hon'ble Members who have sent in amendments to move the amendments so that the Report as well as the amendments can be discussed together. In the first instance, I call upon the Leader of the House, Sri K. Hanumanthaiya to move his amendment, because so many other amendments depend upon the amendment that is going to be moved by the Chief Minister. I, therefore, give preference to that amendment and I call upon the Leader of the House to move his amendment.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ನನ್ನ ತಿದ್ದುಪಡಿ ಈ ರೀತಿಯಿದೆ:—

"ರಾಜ್ಯಗಳ ಪುನರ್ವಿಂಗಡಣೆಯ ಕಮಿಷನ್ ಅವರು ಒಪ್ಪಿಸಿರತಕ್ಕ ವರದಿಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ" ಎಂಬ ಪದಗಳಾದ ನಂತರ ಈ ಕೆಳಗೆ ಕಾಣಿಸಿರುವ ಅಂಶಗಳನ್ನು ಸೇರಿಸಿಕೊಳ್ಳತಕ್ಕದ್ದು. ಅವು ಯಾವುವೆಂದರೆ:—

"ಮತ್ತು ಕರ್ನಾಟಕ ರಾಜ್ಯವೊಂದನ್ನು ರಚಿಸುವ ವಿಷಯದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಕಮಿಷನ್

(ಶ್ರೀ ಕೆ. ಹನುಮಂತಯ್ಯ).

ಅವರು ಕೊಟ್ಟಿರುವ ಸಲಹೆಗಳನ್ನು ಪರ್ಯಾಲೋಚಿಸಿದ ಮೇಲೆ ಮುಂದೆ ಏರ್ಪಡುವುದಾಗಿರುವ ರಾಜ್ಯದಲ್ಲಿ ಈ ಕೆಳಗೆ ಕಂಡ ಪ್ರದೇಶಗಳು ಸೇರಿರಬೇಕೆಂದ ವಿಧಾನ ಸಭೆಯವರು ಅಭಿಪ್ರಾಯಪಡುತ್ತಾರೆ:—

(ಎ) ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿರುವ ಯಾವ ಭಾಗವನ್ನೂ ಬಿಡದೆ ಈಗಿರತಕ್ಕ ಮೈಸೂರು ರಾಜ್ಯ;

(ಬಿ) ಬೊಂಬಾಯಿ ರಾಜ್ಯದ ಬಿಜಾಪುರ, ಧಾರವಾಡ, ಉತ್ತರ ಕನ್ನಡ ಡಿಸ್ಟ್ರಿಕ್ಟುಗಳು ಮತ್ತು ಚಂದಘಡ ತಾಲ್ಲೂಕನ್ನು ಬಿಟ್ಟು ಬೆಳಗಾಂ ಡಿಸ್ಟ್ರಿಕ್ಟು;

(ಸಿ) ಹೈದರಾಬಾದು ರಾಜ್ಯದ ರಾಯಚೂರು ಮತ್ತು ಗುಲ್ಬರ್ಗ ಡಿಸ್ಟ್ರಿಕ್ಟುಗಳು ಮತ್ತು ಬಿದರೆ ಡಿಸ್ಟ್ರಿಕ್ಟಿನ ಅಕ್ಕಪಕ್ಕದ ನಾಲ್ಕು ತಾಲ್ಲೂಕುಗಳು;

(ಡಿ) ಮದರಾಸು ರಾಜ್ಯದಲ್ಲಿ ಕನ್ನಡ ಡಿಸ್ಟ್ರಿಕ್ಟಿನ ಕಾಸರಗೋಡು ತಾಲ್ಲೂಕಿನಲ್ಲಿ ಚಂದ್ರಗಿರಿ ನದಿಯ ದಕ್ಷಿಣಕ್ಕಿರುವ ಭಾಗವನ್ನು ಬಿಟ್ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟಿನ ಇತರ ಭಾಗಗಳು; ಮತ್ತು ಕೊಯಮತ್ತೂರು ಡಿಸ್ಟ್ರಿಕ್ಟಿನ ಕೊಳ್ಳೇಗಾಲ ತಾಲ್ಲೂಕು;

(ಇ) ಕೊಡಗು ರಾಜ್ಯ; ಮತ್ತು

(ಎಫ್) ಅಕ್ಕಪಕ್ಕದಲ್ಲಿರುವ ಯಾವ ಯಾವ ಪ್ರದೇಶಗಳ ಜನರು ಈ ಹೊಸ ರಾಜ್ಯದ ಜೊತೆಗೆ ಸೇರಬೇಕೆಂದು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾರೋ ಆ ಪ್ರದೇಶಗಳು.''

(2) ಅಲ್ಲದೆ, ಈಗ ಹೊಸದಾಗಿ ಏರ್ಪಡಲಿರುವ ರಾಜ್ಯದ ಸಂಮಿಶ್ರಸ್ವಭಾವವನ್ನು ಉಳಿಸಿಕೊಂಡು ಬರುವುದಕ್ಕಾಗಿ ಈ ಹೊಸ ರಾಜ್ಯವನ್ನು "ಮೈಸೂರು ರಾಜ್ಯ''ವೆಂದು ಕರೆಯಬೇಕೆಂಬುದಾಗಿಯೂ ಸಹ ಈ ವಿಧಾನಸಭೆಯು ಅಭಿಪ್ರಾಯಪಡುತ್ತದೆ.

ಸ್ವಾಮಿ, ಹಿಂದೆ ಭಾಷಣಮಾಡಿದ ಅನೇಕ ಮಹನೀಯರ ವಾದಗಳನ್ನು ಕೇಳಿದ್ದೇನೆ. ಆಪಾದನೆಗಳನ್ನು ಶಾಂತರೀತಿಯಿಂದ ಸ್ವಾಗತಿಸಿದ್ದೇನೆ. ಒಂದು ಆಪಾದನೆ, ನನಗೆ ನಾಲ್ಕು ನಾಲಗೆಗಳಿವೆಯೆಂದು. ಈ ದಿವಸ ಈ ಆರೋಪಣೆಗೆ ಪ್ರತಿ ಆರೋಪಣೆ ಮಾಡತಕ್ಕ ಕಾರ್ಯಕ್ಕೆ ನಾನಾದರೂ ತೊಡಗುವುದಿಲ್ಲ. ನಾನು ಪ್ರಾರ್ಥಿಸತಕ್ಕದ್ದೇನೆಂದರೆ, ಈ ವಾದಗಳು ಕಡಮೆಯಾಗಬೇಕು, ಸಾಮರಸ್ಯದಲ್ಲಿ ಮುಗಿಯಬೇಕು, ಇರತಕ್ಕ ಕೋಪ ಶಮನವಾಗಿ, ಸುಮಧುರವಾದ ವಾತಾವರಣ ಉಂಟಾಗಬೇಕು ಎನ್ನುವುದು. ಒಬ್ಬರು ಮಾನ್ಯ ಸದಸ್ಯರು ನನಗೆ ನಾಲ್ಕು ನಾಲಗೆಗಳು ಇವೆ ಎಂದು ಹೇಳಿದರು. ಆದರೆ, ಐದು ನಾಲಗೆಗಳು ಇವೆಯೆಂದು ಅವರು ಹೇಳಬೇಕಾಗಿತ್ತು. ಅದು ಹೇಗೆಂದರೆ: ಮೊದಲನೆಯದು, ನನ್ನ ವ್ಯಕ್ತಿತ್ವಕ್ಕೆ ಸಂಬಂಧಪಟ್ಟದು. ಅನಂತರ, ನಾನು ತಮ್ಮೆಲ್ಲರ ಕೃಪೆಯಿಂದ ಈ ಸಭಾನಾಯಕನೂ ಹೌದು; ಕಾಂಗ್ರೆಸ್ ಪಾರ್ಟಿಯ ನಾಯಕನೂ ಹೌದು; ಮುಖ್ಯ ಮಂತ್ರಿಯೂ ಹೌದು; ಅದರ ಜೊತೆಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯನೂ ಹೌದ,—ಈ ಐದು ಮುಖಗಳಲ್ಲಿ ಒಂದು ಸಾಮರಸ್ಯವನ್ನುಂಟುಮಾಡತಕ್ಕ ಸಮಸ್ಯೆ ನನ್ನನ್ನೇ ಅಲ್ಲ, ಇಲ್ಲರತಕ್ಕ ಸರ್ವ ಸದಸ್ಯರನ್ನೂ ಕಾಡುತ್ತಾ ಇದೆ. ಈ ಐದು ಮುಖಗಳನ್ನೂ ಸಮಜೋಡಿಸಿ ಒಂದೇ ವಾಕ್ಕಿನಿಂದ ಒಂದು ನಿರ್ಣಯವನ್ನು ಈ ಸಭೆಯ ಮುಂದಿಡುವುದಕ್ಕೆ ಹಿಂದೆ ನನಗೆ ಶಕ್ತಿಯಿರಲಿಲ್ಲ, ಅವಕಾಶವಿರಲಿಲ್ಲ. ಏಕೆಂದರೆ, ನಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯವಿತ್ತು. ಹೀಗೆ ನಾನು ಕೆಲಸ ಮಾಡುವ ಈ ಐದು ಕ್ಷೇತ್ರಗಳಲ್ಲಿ ಭಿನ್ನಾಭಿಪ್ರಾಯವಿದ್ದುದರಿಂದ ನನಗಾಗಲಿ, ಮಾನ್ಯ ಸದಸ್ಯರಿಗಾಗಲಿ, ಎಲ್ಲ ಅಭಿಪ್ರಾಯಗಳನ್ನೂ ಸಮಜೋಡಿಸಿ ಸಾಮರಸ್ಯದಿಂದ ತಮ್ಮ ಮುಂದಿಡುವುದಕ್ಕೆ ಅವಕಾಶವಾಗಲಿಲ್ಲ. ಆದುದರಿಂದಲೇ ಹಿಂದೆ ನಾನು ಅನೇಕವೇಳೆ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿದೆ. ಆಲೋಚನೆಗಳು ಮೊದಲು ಮನಸ್ಸಿನಲ್ಲಿ ಹುಟ್ಟುತ್ತವೆ; ಆಮೇಲೆ ಅವು ಮಾತಿನ ಸ್ವರೂಪ ಹೊಂದುತ್ತವೆ; ಅನಂತರ ಶಾಸನಗಳಾಗಿ ಕಾರ್ಯರೂಪಕ್ಕೆ ಬಂದು ದೇಶಕ್ಕೆ ಅನ್ವಯಿಸುತ್ತವೆ. ಹೀಗಿದೆ ಪ್ರಜಾಪ್ರಭುತ್ವದ ನಿಯಮ. ಆದರೆ ಹಾಗೆ ನಮ್ಮ ನಿಮ್ಮ ಮನಸ್ಸಿನಲ್ಲಿ ಹೊಳೆದ ಎಲ್ಲ ಯೋಚನೆಗಳೂ ಶಾಸನವಾಗುವುದಿಲ್ಲ; ದೇಶವು ಅದನ್ನು ಒಪ್ಪುವುದಿಲ್ಲ. ಮೊದಲು ಮನಸ್ಸಿನಲ್ಲಿ ಆಲೋಚನೆ ಹೊಳೆದಮೇಲೆ ಅದಕ್ಕೆ ಬಾಯಲ್ಲಿ ವಾಕ್ ಸ್ವರೂಪ ಬರುತ್ತದೆ; ಅನಂತರ ಅದು ಪಕ್ಷದಲ್ಲಿ ನಿರ್ಣಯ ಸ್ವರೂಪವನ್ನು ತಾಳುತ್ತದೆ; ಆಮೇಲೆ ವ ಸೂದೆಯಾಗುತ್ತದೆ; ಅದು ಶಾಸನಸಭೆಯಲ್ಲಿ ಅಂಗೀಕಾರವಾದ ಮೇಲೆ ಶಾಸನವಾಗುತ್ತದೆ. ಈ ರೀತಿ ಐದು ಹಂತಗಳನ್ನೂ ಸಮನ್ವಯಮಾಡುವುದಕ್ಕೆ ತಮ್ಮ ಕೃಪೆ ಬೇಕಾಗುತ್ತದೆ. ಈ ದಿವಸ ತಮ್ಮ ಕೃಪೆಯಿಂದ ಈ ಐದಕ್ಕೂ ಸಾಮರಸ್ಯವನ್ನುಂಟುಮಾಡಿ ಒಂದು ನಿರ್ಣಯವನ್ನು ತಮ್ಮ ಮುಂದಿಡುವುದಕ್ಕೆ ಅವಕಾಶವಾಗಿದೆ; ಸಂತೋಷ. ಈ ಐದು ಮುಖಗಳಿಂದಲೂ ನಾನು ಪ್ರಾರ್ಥನೆ ಮಾಡುತ್ತೇನೆ, ಮುಖ್ಯ ಮಂತ್ರಿಯಾಗಿ, ಕಾಂಗ್ರೆಸ್ ಪಕ್ಷದ ನಾಯಕನಾಗಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಮತ್ತು ಎಲ್ಲಕ್ಕೂ ಹೆಚ್ಚಾಗಿ ಈ ಸಭೆಯ ನಾಯಕನಾಗಿ ಪ್ರಾರ್ಥಿಸುತ್ತೇನೆ: ತಮ್ಮ ಮುಂದಿಟ್ಟಿರತಕ್ಕ ತಿದ್ದುಪಡಿಯನ್ನು ತಾವು ಕೃಪೆಮಾಡಿ, ಸೌಹಾರ್ದದಿಂದಲೂ ಸದ್ಭಾವನೆಯಿಂದಲೂ ಒಪ್ಪಬೇಕು. ಶ್ರೀಮಾನ್ ವೀರಣ್ಣಗೌಡರೂ, ಶ್ರೀಮಾನ್ ವೆಂಕಟಪ್ಪನವರೂ ಭಾಷಣಮಾಡಿದುದನ್ನು ಕೇಳಿದ್ದೇನೆ. ಅವರ ಭಾಷಣಗಳಲ್ಲಿ ತಪ್ಪಿದೆ ಎಂದು ನಾನು ಹೇಳುವುದಕ್ಕೆ ಹುಡುಕಿದರೂ ಸಿಕ್ಕುವುದಿಲ್ಲ. ಅಭಿಪ್ರಾಯ ಭೇದವಿದೆಯೇ ಹೊರತು ಯಾವ ತಪ್ಪನ್ನು ಆರೋಪಣೆಮಾಡುವುದಕ್ಕೂ ಅವಕಾಶವಿಲ್ಲ. ವಿವರಿಸಿ ಹೇಳಿದರೆ ತಾವು ಸ್ವಲ್ಪ ಮನಸ್ಸನ್ನು ಬದಲಾವಣೆ ಮಾಡಿಕೊಳ್ಳುತ್ತೀರೆಂಬ ಭಾವನೆಯಿಂದ ಹೇಳುತ್ತೇನೆ. ಭಿನ್ನಾಭಿಪ್ರಾಯ ಬಂದಾಗ ಯಾವುದಾದರೊಂದು ಪುಸ್ತಕವನ್ನು ತೋರಿಸಿಯೋ, ಅಥವಾ ಅಭಿಪ್ರಾಯವನ್ನು ನಿರ್ದೇಶಿಸಿಯೋ ನಮ್ಮ ವಾದವನ್ನು ಸಮರ್ಥಿಸಿ ಮಾತನಾಡುವುದು ಸಾಮಾನ್ಯ. ಒಂದು ಮೊಕದ್ದಮೆಯಲ್ಲಿ ಇಬ್ಬರು ಲಾಯರುಗಳು ವಾದಿಸುವಾಗ ಏನಾದರೂ ಜಿಜ್ಞಾಸೆ ಬಂದರೆ, ಪುಸ್ತಕಗಳ ಮತ್ತು 'ಕೇಸ್ ಲಾ'ಗಳ ಸಹಾಯವನ್ನು ಕೋರುತ್ತಾರೆ. ಹಾಗೆಯೇ ಮತ ಸಂಬಂಧವಾದ ವಿಷಯಗಳಲ್ಲಿ ಜಿಜ್ಞಾಸೆ ಬಂದರೆ, ಹಿಂದುಗಳು ವೇದದಿಂದ, ಮುಸ್ಲಿಮರು ಕುರಾನಿನಿಂದ, ಕ್ರಿಶ್ಚಿಯನ್ನರು ಬೈಬಲಿನಿಂದ ವಾಕ್ಯಗಳನ್ನು ಎತ್ತಿ ಹೇಳುತ್ತಾರೆ. ಹೀಗೇಯೇ ರಾಜಕೀಯದಲ್ಲಿರುವವರಿಗೆ ಬೈಬಲ್ ಯಾವುದೆಂದರೆ, ಸಂವಿಧಾನ (Constitution). ನಮ್ಮಲ್ಲಿ ಭಿನ್ನಾಭಿಪ್ರಾಯ ಬಂದರೆ ಈ ಭಿನ್ನಾಭಿಪ್ರಾಯ ಸಂವಿಧಾನದಲ್ಲಿ ಅಡಕವಾಗಿರುವ ತತ್ವಗಳಿಗನುಗುಣವಾಗಿದೆಯೇ, ಅವುಕ್ಕೆ ಅನ್ವಯಿಸುತ್ತದೆಯೇ ಇಲ್ಲವೇ ಎಂಬುದನ್ನು ನಿಷ್ಪಕ್ಷಪಾತವಾದ ಮನಸ್ಸಿನಿಂದ ನೋಡಿದರೆ, ಯಾವುದು ಸರಿಯಾದುದು, ಯಾವುದನ್ನು ಅಂಗಿಕಾರ ಮಾಡಬೇಕು ಎಂಬುದು ತನ್ನಷ್ಟಕ್ಕೆ ತಾನೇ ಹೊಳೆಯುತ್ತದೆ.

ಮೊದಲನೆಯದಾಗಿ, ಶ್ರೀಮಾನ್ ವೆಂಕಟಪ್ಪನವರು ರಾಜಪ್ರಮುಖರ ವಿಚಾರವನ್ನು ಬಹಳಮಟ್ಟಿಗೆ

ಪ್ರಸ್ತಾಪ ಮಾಡಿದರು. ಇನ್ನೂ ಅನೇಕ ಸದಸ್ಯರೂ ಈ ವಿಷಯವನ್ನು ಕುರಿತು ಮಾತನಾಡಿದರು. ಸಂವಿಧಾನದ ಪ್ರಸ್ತಾವನೆಯಲ್ಲಿ (Preamble) ಹೇಳತಕ್ಕ ಮಾತನ್ನು ತಮ್ಮ ಅವಗಾಹನೆಗೆ ತರುವುದಕ್ಕೆ ಮತ್ತೊಂದಾವರ್ತಿ ಅದನ್ನು ಓದುತ್ತೇನೆ :—

"We the people of India having solemnly resolved to constitute India into a Sovereign Democratic Republic and to secure to all its citizens justice, social, economic and political . . . ." ಎಂದು ಹೇಳಿದೆ. ಇದೇ ಉದಾತ್ತ ಧ್ಯೇಯವನ್ನು ರಾಜನೀತಿ ನಿರ್ದೇಶನ ತತ್ತ್ವಗಳು (Directive Principles of State Policy) ಎಂಬ ಶೀರ್ಷಿಕೆಯ ಕೆಳಗೆ ಬರುವ 38ನೆಯ ಅನುಚ್ಛೇದದಲ್ಲಿ ಹೇಳಿದೆ. ಈಗ ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು, "Democratic Republic, Justice, Social, Economic and Political" (ಲೋಕ ತಂತ್ರಾತ್ಮಕ ಗಣರಾಜ್ಯ, ಸಾಮಾಜಿಕ, ಅರ್ಥಿಕ ಮತ್ತು ರಾಜಕೀಯ ನ್ಯಾಯ) ಎಂಬ ಪದಗಳ ಜೋಡಣೆಯನ್ನು. ನಮ್ಮದು ಪ್ರಜಾಪ್ರಭುತ್ವವೂ ಹೌದು ; ರಿಪಬ್ಲಿಕ್ಕೂ (ಗಣರಾಜ್ಯ) ಹೌದು. ರಿಪಬ್ಲಿಕ್ಕಿನಲ್ಲಿ ರಾಜರಿಗೆ ಸ್ಥಾನವಿಲ್ಲ ; ಜೊತೆಗೆ "Social, economic and political justice" ಎನ್ನುವುದನ್ನೂ ನಾವು ಅರ್ಥ ಮಾಡಿಕೊಂಡರೆ, ಸಮಾಜದಲ್ಲಿ ಒಬ್ಬ ವ್ಯಕ್ತಿಗೂ ಮತ್ತೊಬ್ಬ ವ್ಯಕ್ತಿಗೂ ಐಶ್ವರ್ಯದ ದೃಷ್ಟಿಯಿಂದಲೂ, ಸ್ಥಾನಮಾನದ ದೃಷ್ಟಿಯಿಂದಲೂ ಅಜಗಜ ಎಂದು ಹೇಳುವಹಾಗೆ ವ್ಯತ್ಯಾಸವಿರಬಾರದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ) —On a point of order, Sir, ಈಗ ಮುಖ್ಯಮಂತ್ರಿಗಳು ಇಲ್ಲಿಯವರೆಗೂ ನಡೆದಿರುವ ಚರ್ಚೆಗೆ ಉತ್ತರಕೊಡುತ್ತಿದ್ದಾರೋ ಅಥವಾ ತಿದ್ದುಪಡಿಯನ್ನು ಸೂಚಿಸುತ್ತಿದ್ದಾರೋ ಎಂಬುದನ್ನು ವಿಶದಪಡಿಸಬೇಕು. ಇದು ಉತ್ತರ ಕೊಡುವುದಕ್ಕೆ ಸರಿಯಾದ ಕಾಲವಲ್ಲವೆಂದು ಕಾಣುತ್ತದೆ. ತಿದ್ದುಪಡಿಯನ್ನು ಈಗ ಸಭೆಯ ಮುಂದಿಡಬೇಕೆಂದು ಹೇಳಿದ್ದಾರೆ. ಉತ್ತರಕೊಡುವುದಕ್ಕೆ ಈಗ ಅವಕಾಶವಿಲ್ಲವೆಂದು ನನ್ನ ಭಾವನೆ.

Mr. SPEAKER.—Though it is not a point of order, the Hon'ble Member is correct. The Leader of the House will be called upon to reply at the end.

ಶ್ರೀ ಕೆ. ಹನುಮಂತಯ್ಯ.—ಈಗ ನಾನು ಮಾಡುತ್ತಿರುವುದು, ಈ ತಿದ್ದುಪಡಿಗೆ ಸಮರ್ಥನೆಯಾಗಿ ವಾದವನ್ನು ಹೂಡುತ್ತಿದ್ದೇನೆ (ನಗು !) ನಮಗೆ ರಿಪಬ್ಲಿಕ್‌ನಲ್ಲಿ ರಾಜರಿಗೆ ಸ್ಥಾನವಿಲ್ಲ ; ಮತ್ತು Social, Economic and Political justice......

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ನಮಗೆ, ರಾಜರಿಗೆ ಎಂದು ಹೇಳಿದರು, ನಮಗೆ ಭಯವಾಯಿತು ! (ನಗು !)

ಶ್ರೀ ಕೆ. ಹನುಮಂತಯ್ಯ.—ಎಂ.ಪಿ.ಸಿ.ಸಿ. ಅಧಿವೇಶನವಾದ ಮೇಲೆ ಅವರಿಗೆ ಭಯವಿಲ್ಲವೆಂದು ನಾನು ತಿಳಿದುಕೊಂಡಿದ್ದೆ. (ನಗು !) "Democratic Republic" (ಲೋಕತಂತ್ರಾತ್ಮಕ ಗಣರಾಜ್ಯ) ಮತ್ತು Social, economic and political justice" (ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ) ಎನ್ನುವ ಯಾವ ಒಂದು ತತ್ತ್ವ, ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕವಾಗಿದೆಯೋ ಅದಕ್ಕನುಗುಣವಾಗಿ ಭಾರತದಲ್ಲಿ ರಾಜರಿಗೆ ಸ್ಥಾನವಿಲ್ಲ ಎಂಬುದನ್ನು ನಿವೇದನೆ ಮಾಡಿಕೊಳ್ಳುತ್ತೇನೆ. ಹಾಗಾದರೆ ಕೇಳಬಹುದು, ಸಂವಿಧಾನದಲ್ಲಿ ರಾಜಪ್ರಮುಖರ ವಿಚಾರವನ್ನು ಏಕೆ ಬರೆದಿದೆ ಎಂದು. ಇದು ಸ್ವಾಭಾವಿಕವಾಗಿ ಹುಟ್ಟುವ ಪ್ರಶ್ನೆ. ನಿರ್ದೇಶಕ ತತ್ತ್ವಗಳಲ್ಲಿ ಅಡಕವಾಗಿರುವ ನಿಯಮಗಳನ್ನು ಆಚರಣೆಗೆ ತರಬೇಕಾದರೆ ಸ್ವಲ್ಪ ಕಾಲ ಬೇಕೆಂಬುದು ತಮಗೆ ಗೊತ್ತಿದೆ. ಇದರಲ್ಲಿ ವಿದ್ಯಾಭ್ಯಾಸ, ಹರಿಜನರ ವಿಷಯ, ಹಿಂದುಳಿದ ಪಂಗಡಗಳ ವಿಷಯ—ಹೀಗೆ ಅನೇಕ ವಿಷಯಗಳಿಗೆ ಸಂಬಂಧಪಟ್ಟ ತತ್ತ್ವಗಳನ್ನು ಅಡಕಮಾಡಿದ್ದರೂ ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಕಾಲ ಬೇಕೆಂದು ಕೆಲವಕ್ಕೆ ಹತ್ತು ವರ್ಷ ಕಾಲ ತೆಗೆದುಕೊಂಡಿದ್ದಾರೆ.

Sri B. V. NARAYANA REDDY (Bagepalli-Gudibande).—I wish to rise a point of order. I wish the Chief Minister addresses the Chair and not the House this side.

Sri K. HANUMANTHAIYA.—I am so fond of the face of my friend Sri Narayana Reddy that he always attracts me. [*laughter* !]

Sri B. V. NARAYANA REDDY.—He never looked at me even once. [*laughter* !]

ಶ್ರೀ ಕೆ. ಹನುಮಂತಯ್ಯ.—ಹೀಗೆ ನಿರ್ದೇಶಕ ತತ್ತ್ವಗಳಲ್ಲಿ ಅಡಕವಾಗಿರುವ ನಿಯಮಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಕಾಲ ಬೇಕಾಗುವುದರಿಂದ, ಇದಕ್ಕನುಗುಣವಾಗಿ ಯಾವ ಕಾಂಗ್ರೆಸ್ ಸಂಸ್ಥೆ ಈ ಸಂವಿಧಾನವನ್ನು ರೂಪಿಸತಕ್ಕದ್ದರಲ್ಲಿ ಬಹುಭಾಗದ ಜವಾಬ್ದಾರಿಯನ್ನು ಹೊತ್ತಿತ್ತೋ ಆ ಸಂಸ್ಥೆ ಕಾಲ ಕಾಲಕ್ಕೆ ತಕ್ಕ ನಿರ್ಣಯಗಳನ್ನು ಕೈಗೊಂಡು ಲೋಕತಂತ್ರಾತ್ಮಕ ಗಣರಾಜ್ಯ (Democratic Republic) ವನ್ನು ಸಂಪೂರ್ಣವಾಗಿ ಸ್ಥಾಪಿಸಬೇಕೆಂಬ ಶಪಥವನ್ನು ಮಾಡಿದೆ. ಹಾಗೆಯೇ ರಾಜಕೀಯ, ಸಾಮಾಜಿಕ, ಆರ್ಥಿಕ ನ್ಯಾಯ ಉಂಟಾಗಬೇಕೆಂದು ಆವಡಿ ಕಾಂಗ್ರೆಸ್ ಅಧಿವೇಶನದಲ್ಲಿ ಸಮತಾ ಸಮಾಜ ಸಿದ್ಧಾಂತ (Socialistic Pattern of Society) ವನ್ನೂ ಒಪ್ಪಿದ್ದಾಗಿದೆ. ಆದುದರಿಂದ ಇಂಡಿಯಾ ದೇಶದಲ್ಲಿ ಮಹಾರಾಜರ ಅಥವಾ ರಾಜಪ್ರಮುಖರ ಸ್ಥಾನ ರದ್ದಾಗಬೇಕೆಂಬ ಸಲಹೆ ಏನಿದೆಯೋ ಅದು ಸಂವಿಧಾನಕ್ಕೂ, ನಮ್ಮ ಧ್ಯೇಯಗಳಿಗೂ ಅನುಗುಣವಾಗಿದೆ ಎಂದು ಹೇಳುತ್ತೇನೆ.

ಮೊದಲನೆಯದಾಗಿ, ನನ್ನ ತಿದ್ದುಪಡಿಯಲ್ಲಿ 'ಕನ್ನಡ' ಎಂಬ ಪದವನ್ನು ಬಿಟ್ಟುಬಿಟ್ಟಿದೆ. ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯಲ್ಲಿ ಈ ವಿಧವಾದ ಪದಗಳನ್ನುಪಯೋಗಿಸಿದ್ದರೂ ಕೂಡ ನಾನು ಈ ಸಭೆಯ ಮುಂದೆ ತಂದಿರುವ ಈ ತಿದ್ದುಪಡಿಯಲ್ಲಿ ಉದ್ದೇಶಪೂರ್ವಕವಾಗಿ ಆ ಅರ್ಥ ಬಾರದೆ ಇರುವ ಹಾಗೆ ಪದಜೋಡಣೆಯನ್ನು ಉಪಯೋಗಿಸಿದ್ದೇನೆ. ಆದುದರಿಂದಲೇ ಈಗ ಹೊಸದಾಗಿ ಏರ್ಪಡಿಸಲಿರುವ ರಾಜ್ಯದಲ್ಲಿ ಈಗ ನಮ್ಮಲ್ಲಿರುವ ಸಂಮಿಶ್ರ ಸ್ವಭಾವವನ್ನು ಉಳಿಸಿಕೊಂಡು ಬರುವುದಕ್ಕಾಗಿ ಈ ಹೊಸ ರಾಜ್ಯವನ್ನು "ಮೈಸೂರು ರಾಜ್ಯ"ವೆಂದು ಕರೆಯಬೇಕೆಂಬ ಸಲಹೆಯನ್ನು ಸಭೆಯ ಮುಂದಿಟ್ಟಿದ್ದೇನೆ. ಈ ಮೈಸೂರು ಸಂಸ್ಥಾನ ಸಂಮಿಶ್ರ ಸಂಸ್ಥಾನವೆಂಬುದನ್ನು ನಾನು ಮೊದಲು ಭಾಷಣ ಮಾಡಿದ ಕಾಲ

(ಶ್ರೀ ಕೆ. ಹನುಮಂತಯ್ಯ.)

ದಲ್ಲಿಯೇ ಸಂಪೂರ್ಣವಾಗಿ, ಚಾರಿತ್ರಿಕ ದೃಷ್ಟಿಯಿಂದ ವಿವರಿಸಿಕೊಂಡು ಬಂದಿದ್ದೇನೆ. ಈ ದಿವಸ "ಮೈಸೂರು ರಾಜ್ಯ" ಎನ್ನುವ ಹೆಸರು ಇರಬೇಕೆಂದು ಹೇಳಿದರೆ ಅದು ಕೇವಲ ಹೆಸರು ಮಾತ್ರಕ್ಕಲ್ಲವೆಂದು ಹೇಳುತ್ತೇನೆ. ಏನೋ ಮೈಸೂರು ರಾಜ್ಯವೆಂದು ಹೇಳಿ ಹೆಸರಿನಿಂದ ಸಂತೋಷಪಡಿಸಬೇಕೆಂಬ ಉಪಾಯದಿಂದಲ್ಲ. ಹೆಸರು ಮನುಷ್ಯನ ಜಾತಿಯನ್ನಾಗಲಿ, ಮತವನ್ನಾಗಲಿ, ದೇಶವನ್ನಾಗಲಿ, ಯಾವ ರೀತಿ ಸ್ಥೂಲವಾಗಿ ತೋರಿಸುತ್ತದೆಯೋ ಅದೇ ರೀತಿ ಈ ಹೆಸರೂ ಕೂಡ ಇನ್ನುಮುಂದೆ ಈ ದೇಶ ಯಾವ ದಾರಿಯಲ್ಲಿ ಹೋಗಬೇಕೆಂಬ ಮಾರ್ಗ ಅಥವಾ ಆದರ್ಶವನ್ನು ಸೂಚಿಸುತ್ತದೆಂದು ಹೇಳುತ್ತೇನೆ. ಮೈಸೂರು ರಾಜ್ಯ ಕೇವಲ ಕನ್ನಡಿಗರದಲ್ಲ, ತಮಿಳರದಲ್ಲ, ತೆಲುಗರದಲ್ಲ, ಹಿಂದೀ, ಉರ್ದು ಮಾತನಾಡುವವರದೂ, ಅಲ್ಲ, ಎಲ್ಲರಿಗೂ ಸೇರಿದ ಸಂಮಿಶ್ರ ರಾಜ್ಯ ಎಂಬುದನ್ನು ಒಪ್ಪಿಕೊಂಡರೆ, ಶ್ರೀಮಾನ್ ಪಟ್ಟಾಭಿರಾಮನ್ ಅವರು ಏನು ಸಲಹೆ ಕೊಟ್ಟರೋ ಅದು ತನ್ನಷ್ಟಕ್ಕೆ ತಾನೇ ಕಾರ್ಯರೂಪಕ್ಕೆ ಬರುತ್ತದೆ. ತೆಲುಗು ಮಾತನಾಡತಕ್ಕ ಜನರು ತೆಲುಗು ಸ್ಕೂಲುಗಳು ಬೇಕೆಂದು ಅಪೇಕ್ಷೆಯನ್ನು ವ್ಯಕ್ತಪಡಿಸಿದರೆ, ಈ ಸಂಮ್ಮಿಶ್ರ ರಾಜ್ಯವನ್ನು ಪ್ರತಿನಿಧಿಸತಕ್ಕ ಸರ್ಕಾರ ಆ ಬೇಡಿಕೆಯನ್ನು ಈಡೇರಿಸಲೇಬೇಕಾಗುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಮತ್ತೇಕೆ ತಾವಿನ್ನೂ ಮಾಡಿಲ್ಲ.

ಶ್ರೀ ಕೆ. ಹನುಮಂತಯ್ಯ.—ನೀವು ಕೇಳಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈಗತಾನೆ ಮಾನ್ಯ ಮಂತ್ರಿಗಳು ಸುಳ್ಳು ಹೇಳುವುದಿಲ್ಲವೆಂದು ಹೇಳುತ್ತಾ ಹೇಳುತ್ತಾ ಸುಳ್ಳು ಹೇಳುತ್ತಾರಲ್ಲಾ ಇದೇ ಅಸೆಂಬ್ಲಿಯಲ್ಲಿ ನಾನು ಸಾವಿರ ಸಾರಿ ಕೇಳಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಅದಕ್ಕೂ ಒಂದು ಕ್ರಮವಿದೆ ಆದ್ದರಿಂದ ಈ ಹೊಸ ರಾಜ್ಯದಲ್ಲಿ, ಈಗ ಮೈಸೂರು ರಾಜ್ಯದಲ್ಲಿರತಕ್ಕಂಥ ಸಂಮಿಶ್ರ ಸ್ವಭಾವ ಎಲ್ಲ ಕಾರ್ಯಕ್ರಮಗಳಲ್ಲೂ ಕೂಡ ಮುಂದುವರಿಯುತ್ತದೆ ಎಂಬ ಭರವಸೆಯನ್ನು ನಾನು ಈ ದಿವಸ ಕೊಡುತ್ತೇನೆ. ಶ್ರೀ ಮುಲ್ಕ ಗೋವಿಂದರೆಡ್ಡಿಯವರೂ ಮತ್ತು ನಾರಾಯಣರೆಡ್ಡಿಯವರೂ ಅಲ್ಪ ಸಂಖ್ಯಾತರಿಗೆ ಶಾಲೆಗಳನ್ನು ಏರ್ಪಡಿಸುವ ವಿಚಾರವನ್ನು ಕುರಿತು ಪದೇ ಪದೇ ಹೇಳುತ್ತಿದ್ದಾರೆ, ಆದರೆ, ಅವರು ಯಾವ ಸ್ಥಳಗಳ ವಿಚಾರವನ್ನು ಹೇಳುತ್ತಿದ್ದಾರೋ ಆ ಸ್ಥಳಗಳವರಿಂದ ಇದುವರೆಗೂ ಯಾವ ರೀತಿಯ ಅರ್ಜಿಗಳೂ ಬಂದಹಾಗೆ ಕಾಣುವುದಿಲ್ಲ. ಅವರು ಹೇಳಿವಂತೆ ಜನಗಳು ಯಾವ ಊರಿನಲ್ಲಿ ಯಾವ ಸ್ಕೂಲುಗಳನ್ನು ಬೇಕೆಂದು ಕೇಳುತ್ತಾರೋ ಅದರಂತೆ ಪರಿಶೀಲನೆಮಾಡಿ ಕಾರ್ಯಕ್ರಮ ತೆಗೆದುಕೊಳ್ಳೋಣ. ಫಸಲಾಲಿ ಕಮಿಷನ್ನಿನಲ್ಲ ಲಿಂಗ್ವಿಸ್ಟಿಕ್ ಮೈನಾರಿಟಿಗಳವರ (ಬೇರೆ ಭಾಷೆ ಮಾತನಾಡುವ ಅಲ್ಪ ಸಂಖ್ಯಾತರ) ಬಗ್ಗೆ ಏನೇನು ರಕ್ಷಣೆಗಳಿರಬೇಕೆಂದು ಸಲಹೆ ಮಾಡಿದ್ದಾರೋ ಆ ಸಲಹೆಗಳೆಲ್ಲಾ ಚರ್ಚೆಯಾಗಿವೆ. ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿಯೂ ಅದರ ಬಗ್ಗೆ ಪ್ರತಿಯೊಂದು ವಿವರವೂ ಚರ್ಚೆಗೆ ಬಂದು ಅನೇಕ ನಿರ್ಧಾರಗಳನ್ನು ಒಪ್ಪಿಕೊಂಡಿದ್ದೇವೆ. ಮಿಕ್ಕಿರುವ ಕೆಲವು ಸಲಹೆಗಳ ಬಗ್ಗೆ ಮತ್ತೊಂದು ಸಲ ಸಭೆ ಸೇರಿ ಚರ್ಚೆಮಾಡಿ ನಿರ್ಧಾರ ತೆಗೆದುಕೊಳ್ಳುವವರಾಗಿದ್ದೇವೆ. ಉತ್ತರೋತ್ತರ ಆ ಸಲಹೆಗಳಲ್ಲಿ ಯಾವವು ಸರಿಯಾಗಿವೆಯೋ ಅವು ಕಾನೂನಾಗಿ ಪರಿಣಮಿಸುತ್ತವೆ. ಸದ್ಯಕ್ಕೆ ತತ್ವಗಳನ್ನೆಲ್ಲಾ ಎಲ್ಲ ಮಂತ್ರಿಗಳೂ ಒಪ್ಪಿಕೊಂಡಿದ್ದೇವೆ. ಲಿಂಗ್ವಿಸ್ಟಿಕ್ ಮೈನಾರಿಟಿಗಳಿಗೆ ಸೂಕ್ತ ರಕ್ಷಣೆಗಳನ್ನು ಕೊಟ್ಟು ಕಾನೂನು ಮಾಡಬೇಕೆಂಬುದನ್ನು ಎಲ್ಲರನ್ನೂ ಅಂಗೀಕರಿಸಿದ್ದೇವೆ.

ಆಮೇಲೆ ಶ್ರೀಮಾನ್ ಪಟ್ಟಾಭಿರಾಮನ್‌ರವರು ಒಂದು ವಿಷಯವನ್ನು ವಿಶದೀಕರಿಸಬೇಕೆಂದು ಕೇಳಿದರು. ಆ ಉದ್ದೇಶದಿಂದಲೇ ನನ್ನ ತಿದ್ದುಪಡಿಯ ಮೊದಲನೆಯ ಪಂಕ್ತಿಯಲ್ಲಿ "ಬಳ್ಳಾರಿಯ ಡಿಸ್ಟ್ರಿಕ್ಟಿಗೆ ಸೇರಿರುವ ಯಾವ ಭಾಗವನ್ನೂ ಬಿಡದೆ ಈಗಿರತಕ್ಕ ಮೈಸೂರು ರಾಜ" ಎಂದು ಸೇರಿಸಿದ್ದೇನೆ. ಶ್ರೀಮಾನ್ ಪಟ್ಟಾಭಿರಾಮನ್ ಅವರಿಗೂ ಮತ್ತು ಇನ್ನೂ ಅನೇಕರಿಗೂ ಉಂಟಾಗಿರತಕ್ಕ ಅನುಮಾನಕ್ಕೆ ಒಂದು ಕಾರಣವಿದೆ. ಕ್ರಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ನೇಮಿಸಲ್ಪಟ್ಟ ನಾಲ್ಕು ಮಹಾ ಮುಖಂಡರುಗಳಿಂದ ಕೂಡಿದ ಸಬ್-ಕಮಿಟಿಯವರು ಒಂದು ನಿರ್ಣಯವನ್ನು ಅಂಗೀಕರಿಸಿ ದೇಶಕ್ಕೆ ತಿಳಿಸಿರುವಂಥದರಲ್ಲಿ ಹೀಗೆ ಹೇಳಿದೆ:

"The Sub-Committee is of the opinion that the recommendation of the States Re-organization Commission for the creation of a State of all Kannada-speaking areas in Mysore, Bombay, Hyderabad and Madras including Coorg be accepted subject to boundary adjustments." ಇದನ್ನು ನೋಡಿ ಸ್ವಾಭಾವಿಕವಾಗಿ ಜನರ ಮನಸ್ಸಿನಲ್ಲಿ ಈ ರೀತಿಯಾಗಿ ಸಂದೇಹವುಂಟಾಗುವುದಕ್ಕೆ ಕಾರಣವಿದೆ. "Kannada speaking areas in Mysore" ಕನ್ನಡ ಮಾತು ಪ್ರಚಾರದಲ್ಲಿರುವ ಮೈಸೂರಿನ ಪ್ರದೇಶಗಳು" ಎಂದು ಹೇಳಿರುವುದರಿಂದ, ಮೈಸೂರು ದೇಶದಲ್ಲಿರತಕ್ಕ ಬೇರೆ ಭಾಷೆಗಳನ್ನು ಮಾತನಾಡುವ ಜನರನ್ನು ಬೇರೆ ಕಡೆಗೆ ಕಳುಹಿಸಬೇಕಾಗುತ್ತದೋ ಎಂದು ಕಾಣುತ್ತದೆ. ಅದರ ಮೇಲೆ ನಾನು ಸಂಬಂಧಪಟ್ಟ ನಾಯಕರೊಡನೆ ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಈ ಸಂದರ್ಭದಲ್ಲಿ ಒಂದಂಶವನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕಾಗಿದೆ. ಈ ನಾಲ್ಕು ಮಂದಿ ಕಾಂಗ್ರೆಸ್ ನಾಯಕರು ಸಬ್-ಕಮಿಟಿಯಲ್ಲಿದ್ದು ತೀರ್ಮಾನ ಕೊಟ್ಟಿರುವುದು ಕೇವಲ ಕಾಂಗೆಸ್ ನಾಯಕರಾಗಿ ಕೊಟ್ಟಿದ್ದಾರೆಯೇ ಹೊರತು ಪ್ರಧಾನ ಮಂತ್ರಿ ಸ್ಥಾನದಿಂದಾಗಲಿ, ಆಡಳಿತ ಮಂತ್ರಿ ಸ್ಥಾನದಿಂದಾಗಲಿ ಕೊಟ್ಟಿಲ್ಲ. ಇದೊಂದು ನಿರ್ಣಯವೆಂದು ಮಾತ್ರ ಅರ್ಥಮಾಡಿಕೊಳ್ಳಬೇಕು. ಈಗ ಆ ಸಂಸ್ಥೆಯ ನಿರ್ಣಯ ಅನುಮಾನಕ್ಕೂ ವಿವಾದಕ್ಕೂ ಒಳಪಟ್ಟಿರುವುದರಿಂದ ಆ ಸಂಸ್ಥೆಯವರೊಡನೆ ಮಾತುಕತೆಗಳನ್ನು ನಡೆಸಿ ಅವರ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕೆಂದು ಕೇಳಿದೆ. ಅದರ ಮೇಲೆ ಅವರು: "The new State of Karnataka should consist of the present State of Mysore and all the Kannada-speaking areas of Bombay, Hyderabad and Madras States and Coorg" ಎಂದು ಹೇಳಿ ವಿಶದೀಕರಿಸಿದರು. ಆದ್ದರಿಂದ ಈ ವಿಶದೀಕರಣೆಗೆ ಅನುಸಾರವಾಗಿ ಈಗಿರತಕ್ಕ ಮೈಸೂರು ಸಂಸ್ಥಾನ ಸಂಪೂರ್ಣವಾಗಿ ಮುಂದೆ ರಚಿತವಾಗತಕ್ಕ ಸಂಸ್ಥಾನದಲ್ಲಿರುತ್ತದೆ, ಅದರಲ್ಲಿರುವ ಯಾವ ಭಾಗವೂ ಬೇರ್ಪಡೆಯಾಗುವುದಿಲ್ಲವೆಂಬ ಅರ್ಥವಿದೆ.

ಶ್ರೀ ಕೆ. ಪಟ್ಟಾಭಿರಾಮನ್.—ಈಗಿರತಕ್ಕ ಮೈಸೂರು ಎಂದಮೇಲೆ ಫಸಲಾಲಿ ಕಮಿಷನ್ನಿನವರು ಯಾವ ಮೂರು ತಾಲ್ಲೂಕುಗಳನ್ನು ಬಳ್ಳಾರಿ ಜಿಲ್ಲೆಯಿಂದ ತೆಗೆದು ಆಂಧ್ರಕ್ಕೆ ಸೇರಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೋ ಅದನ್ನು ತಿದ್ದುಪಾಟುಮಾಡಿ ಸಲಹೆ ಕೊಟ್ಟಹಾಗೆ ಅರ್ಥವಾಗುತ್ತಿದೆಯಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಆದರೆ ನಾನು ತಮಗೆ ಆಗಲೇ ಹೇಳಿರುವ ಹಾಗೆ ಇದೊಂದು ಸಂಸ್ಥೆಯ ನಿರ್ಣಯ. But now I have the authority to state that their decision is : "The new State of Karnataka should consist of the present State of Mysore and all Kannada-speaking areas of Bombay, Hyderabad and Madras State and Coorg." ಆದ್ದರಿಂದ ಮುಖ್ಯವಾಗಿ ವಿವಾದಕ್ಕೊಳಪಟ್ಟಿದ್ದ ಅಂಶ : ಮೈಸೂರು ಸಂಸ್ಥಾನದ ಯಾವ ಭಾಗಗಳನ್ನು ಹೊರಗೆ ಹೋಗುವ ಹಾಗೆ ಮಾಡುತ್ತಾರೋ, ಯಾವ ಡಿಸ್ಟ್ರಿಕ್ಟುಗಳನ್ನು ಒಡೆಯುತ್ತಾರೋ ಎಂಬ ಸಂಶಯ ಯಾವುದಿತ್ತೋ ಅದು ನಿವಾರಣೆಯಾಗಿದೆ. ಈ ದಿವಸ ಮೈಸೂರು ಸಂಸ್ಥಾನ ಯಾವ ರೀತಿಯಿದೆಯೋ ಅದೇ ರೀತಿ ಉಳಿದು ಅಕ್ಕಪಕ್ಕದ ಪ್ರದೇಶಗಳೆಂದು ಪುನರ್ವಿಂಗಡಣಾ ಸಮಿತಿಯವರು ಯಾವ ಯಾವ ಭಾಗಗಳನ್ನು ಸೇರಿಸಿದ್ದಾರೋ ಅವು ಸೇರಿ ಹೊಸ ರಾಜ್ಯವಾಗುತ್ತದೆ.

Sri A. BHEEMAPPA NAIK.—Mysore State excluding Bellary, that is what the S.R.C. Report has stated. ಈಗ ಇದರ ಪ್ರಕಾರ 'including Bellary' ಎಂದು ಅರ್ಥವಾಗುತ್ತದೆಯಲ್ಲವೇ ?

Mr. SPEAKER.—I do not want any Hon'ble Member to put a new construction. The Leader of the House has read the letter as it is. There is no use in discussing it further.

Sri Ijari SIRASAPPA.—On a point of clarification, Sir. ತಾವಿಟ್ಟಿರುವ ತಿದ್ದುಪಡಿಯಲ್ಲಿ ಮೊದಲನೆಯ ವಾಕ್ಯದಲ್ಲಿ 'ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿರುವ ಯಾವ ಭಾಗವನ್ನೂ ಬಿಡದೆ' ಎಂದು ಸೇರಿಸಿದ್ದೀರಿ. ಈ ಕಾಗದದ ಪ್ರಕಾರ ನಾವು ಒಪ್ಪಿಕೊಳ್ಳುವುದಾದರೆ ಈ ರೀತಿಯ ತಿದ್ದುಪಡಿಗೆ ಅವಕಾಶವೇ ಇಲ್ಲವೆಂದು ಹೇಳಬೇಕಾಗುತ್ತದೆ.

Mr. SPEAKER.—As it is already mentioned by the Leader of the House, it is only a letter written by one of the important men. So he has only read it and we cannot put more construction on it than it conveys.

ಶ್ರೀ ಕೆ. ಹನುಮಂತಯ್ಯ.—ನಾನು ಹೇಳಿರತಕ್ಕ ಮಾತುಗಳೇ ಸ್ಪಷ್ಟವಾಗಿವೆ ಆದಕ್ಕೆ ಟೀಕೆ ಟಿಪ್ಪಣಿಗಳೇನೂ ಅನಾವಶ್ಯಕ.

ಇನ್ನು ತಿದ್ದುಪಡಿಯಲ್ಲಿ ಹೇಳಿರುವ ಬೊಂಬಾಯಿ ಪ್ರಾಂತದಿಂದ ಬರತಕ್ಕ ಪ್ರಾಂತಗಳನ್ನು, ಹೈದರಾಬಾದಿನಿಂದ ಬರತಕ್ಕ ಪ್ರಾಂತಗಳು, ಮದ್ರಾಸು ರಾಜ್ಯದಿಂದ ಬರತಕ್ಕ ಪ್ರಾಂತಗಳು, ಹಾಗೂ ಕೊಡಗು ರಾಜ್ಯ ಇವುಗಳ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಈ ಸಭೆಯಲಿಲ್ಲವೆಂದು ನಾನು ತಿಳಿದಿದ್ದೇನೆ. ಸ್ವಲ್ಪ ಭಿನ್ನಾಭಿಪ್ರಾಯ ಬರತಕ್ಕದ್ದೇನಿದ್ದರೂ "ಅಕ್ಕಪಕ್ಕದಲ್ಲಿರುವ ಯಾವಯಾವ ಪ್ರದೇಶಗಳ ಜನರು ಈ ಹೊಸರಾಜ್ಯದ ಜೊತೆಗೆ ಸೇರಬೇಕೆಂದು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿರತ್ತಾರೋ ಆ ಪ್ರದೇಶಗಳು" ಎಂದು ತಿದ್ದುಪಡಿಯ ಕೊನೆಯ ಭಾಗದಲ್ಲಿ ಹೇಳಿರುವುದರ ಸಂಬಂಧದಲ್ಲಿ ಕೆಲವು ಮಾನ್ಯ ಸದಸ್ಯರು, ಆ ರೀತಿ ಹೇಳುವುದಕ್ಕೆ ಬದಲಾಗಿ "ಈಗ ಅಭಿಪ್ರಾಯ ವ್ಯಕ್ತಪಡಿಸಿರತಕ್ಕ ಆಲೂರು, ಆದೋನಿ, ರಾಯದುರ್ಗ ತಾಲ್ಲೋಕುಗಳಲ್ಲಿರತಕ್ಕ ಕೆಲವು ಪ್ರದೇಶಗಳು, ಮಡಕಶಿರ ತಾಲ್ಲೋಕು, ಹೊಸೂರು ತಾಲ್ಲೋಕು, ಕೊಳ್ಳೇಗಾಲ ತಾಲ್ಲೋಕಿನ ಪಕ್ಕದ ತಾಳವಾಡಿ ಫಿರ್ಕಾ, ಇತ್ಯಾದಿ, ಇತ್ಯಾದಿ" ಯೆಂದು ಒಂದೊಂದಾಗಿ ಹೆಸರು ಕಾಣಿಸಬೇಕೆಂದು ಆಪೇಕ್ಷೆಪಡಬಹುದು. ನನ್ನ ಉತ್ತರ ಇದಕ್ಕೆ ಇಷ್ಟೆ. ನಾವು ಇಂದು ರಚಿಸುತ್ತಿರತಕ್ಕದ್ದು ಭಾಷಾವಾರು ಪ್ರಾಂತವಲ್ಲ. ಇದೊಂದು ಸಮ್ಮಿಶ್ರವಾದ ರಾಜ್ಯ, ಈಗಿರುವ ತಿದ್ದುಪಡಿಯ ಪ್ರಕಾರ, ಇನ್ನೂ ಕೊಂಚ ದಿವಸಗಳು ಕಳೆದಮೇಲೆ ಅಕ್ಕಪಕ್ಕದಲ್ಲಿರತಕ್ಕ ಕೆಲವು ತೆಲುಗು ಭಾಷೆಯ ಜನರು ತಾವಾಗಿಯೇ ಮೈಸೂರಿಗೆ ಸೇರಬೇಕೆಂದು ಅಪೇಕ್ಷೆಪಟ್ಟರೆ ಅವರನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿದೆ. ಹಾಗೆಯೇ ತಮಿಳು ಜನರು, ಅಕ್ಕಪಕ್ಕದಲ್ಲಿರುವವರು ಅಪೇಕ್ಷೆಪಟ್ಟರೆ ಅವರೂ ಸೇರಬಹುದು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ ಒಂದು ವಿಷಯ ನನಗೆ ಅರ್ಥವಾಗುತ್ತಿಲ್ಲ. ನಿನ್ನೆ ಮಾತನಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಇದು ಭಾಷಾವಾರು ಪ್ರಾಂತ್ಯವಲ್ಲವೆಂದು ಹೇಳಿದರು. ಇವೊತ್ತು ಅದೇ ಮುಖ್ಯಮಂತ್ರಿಗಳು ಈ ತಿದ್ದುಪಡಿಯನ್ನು ನಮ್ಮ ಮುಂದಿಡುತ್ತಾ "ಇದು ಭಾಷಾವಾರು ಪ್ರಾಂತ್ಯ ಹಾಗೂ ಸಮ್ಮಿಶ್ರ ಪ್ರಾಂತ್ಯ; ನಾಳೆ ತಮಿಳರು, ತೆಲುಗರು ಬಂದರೆ ಅವರನ್ನೂ ಬರಮಾಡಿಕೊಳ್ಳುವುದಕ್ಕೆ ಒಪ್ಪಬಹುದು" ಎಂದು ಹೇಳುತ್ತಿದ್ದಾರೆ. ಈ ಮಾತುಗಳ ಅರ್ಥ ನನ್ನ ತಲೆಗೇ ಹಿಡಿಸುವುದಿಲ್ಲ. ಶರೀರಕ್ಕೆ ಬಟ್ಟೆಯನ್ನು ಹೊದಿಸಿ ಬಣ್ಣವನ್ನು ಮುಚ್ಚುವಂತೆ, ಭಾಷಾವಾರು ಪ್ರಾಂತ್ಯಮಾಡುತ್ತಿದ್ದರೂ ಅದಲ್ಲವೆಂದು ಸೋಗುಹಾಕುತ್ತಿದ್ದಾರೆ. ಒಂದು ವೇಳೆ ಅವರ ಅಭಿಪ್ರಾಯದಂತೆ ಭಾಷಾವಾರು ಪ್ರಾಂತ್ಯವಲ್ಲದಿದ್ದರೆ ಶ್ರೀಮಾನ್ ರಾಜಗೋಪಾಲಚಾರಿಯವರು ಮೊನ್ನೆತಾನೆ ಕೊಟ್ಟ ಒಂದು ಹೇಳಿಕೆಯಂತೆ ಒಂದು ದಕ್ಷಿಣಪ್ರಾಂತ್ಯ ಮಾಡುವುದಾದರೆ, ಕರ್ನಾಟಕದವರು ಒಪ್ಪುವುದಾದರೆ, ಮದರಾಸ್ ಪ್ರಾಂತ್ಯದಲ್ಲಿ ಕರ್ನಾಟಕ ಪ್ರಾಂತ್ಯ ಸೇರುವುದಕ್ಕೂ ಒಪ್ಪುತ್ತಾರೋ ಏನೋ ಎಂದು ಕಾಣುತ್ತದೆ ! ತೆನ್ನಾಲ ರಾಮಕೃಷ್ಣ ಕರೀ ನಾಯಿಯನ್ನು ಉಜ್ಜಿ ಉಜ್ಜಿ ಬಿಳಿ ನಾಯಿ ಮಾಡುವುದಕ್ಕೆ ಪ್ರಯತ್ನಪಟ್ಟ ಹಾಗೆ ತಲೆ ಕೆಟ್ಟಿದ್ದನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡುತ್ತಿರುವ ಹಾಗೆ ಕಾಣುತ್ತದೆ.

ಶ್ರೀ ಕೆ. ಹನುಮಂತಯ್ಯ.—ನನ್ನ ಸ್ನೇಹಿತರು ತಲೆ ಕೆಟ್ಟುಹೋಗಿದೆಯೆಂದು ಹೇಳಿದರು. ತಲೆ ಕೆಟ್ಟಿರುವಾಗ ಯಾವುದೂ ಸರಿಯಾಗಿ ಅರ್ಥವಾಗುವುದೇ ಇಲ್ಲ ! ಆದ್ದರಿಂದ ಮೊಟ್ಟಮೊದಲನೆಯ ನನ್ನ ಸವಿನಯ ಪ್ರಾರ್ಥನೆಯೇನೆಂದರೆ ಅವರು ಮನಸ್ಸನ್ನು ಈರೀತಿಯ ಅನುಮಾನ, ಈರ್ಷಾಸೂಯೆಗಳಿಂದ ದೂರಮಾಡಿದರೆ ಪ್ರತಿಯೊಂದೂ ಚೆನ್ನಾಗಿ ಅರ್ಥವಾಗುತ್ತದೆ.

ಈ ದಿವಸ ಈ ತಿದ್ದುಪಡಿಯಲ್ಲಿ ಏನಿದೆಯೋ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಜನರ ಅಭಿಮತವನ್ನು ಅರಿತು ಆ ಪ್ರದೇಶಗಳನ್ನು ಈ ಹೊಸ ರಾಜ್ಯಕ್ಕೆ ಸೇರಿಸಬೇಕೆಂಬ ತತ್ವ ಇದರಲ್ಲಿ ಅಡಕವಾಗಿದೆ. ಇಂಥ ವಿಚಾರದಲ್ಲಿ ಆಂಧ್ರ ಶಾಸನ ಸಭೆಯವರು ಮತ್ತು ಆ ಸರ್ಕಾರದವರು

(ಶ್ರೀ ಕೆ. ಹನುಮಂತಯ್ಯ.)

ಅನುಸರಿಸಿರತಕ್ಕ ನೀತಿ ಅಷ್ಟು ಸಮರ್ಪಕವಾಗಿಲ್ಲವೆಂಬುದು ನನ್ನ ವಾದ. ಕೋಲಾರ ಡಿಸ್ಟ್ರಿಕ್ಟ್ ನಮಗೆ ಬೇಕು ಅಥವಾ ಮತ್ತೊಂದು ಪ್ರದೇಶ ನಮಗೆ ಬೇಕು ಎಂದು ಕೇಳುವುದಕ್ಕಿಂತ ಉತ್ತಮವಾದ ಮಾರ್ಗ, ಹಾಗೂ ಎಲ್ಲರಿಗೂ ಸಮಂಜಸವಾದ ಮಾರ್ಗ ಯಾವುದೆಂದರೆ, ಯಾರು ಯಾರು ಎಲ್ಲೆಲ್ಲಿರಬೇಕೆಂದು ಹೇಳುತ್ತಾರೋ ಆಯಾ ಪ್ರಾಂತಗಳ ಅಂಚಿನಲ್ಲಿರುವವರನ್ನು ಅಲ್ಲಿಗೆ ಸೇರಿಸುವುದು ಉತ್ತಮ; ಅದರಲ್ಲೊಂದು ಉದಾತ್ತ ತತ್ವ ಅಡಗಿದೆ. ಆ ತತ್ವದ ಪ್ರಕಾರ ನಡೆದರೆ, ಆಂಧ್ರ ಸರ್ಕಾರಕ್ಕಾಗಲಿ ಮತ್ತಾರಿಗೇ ಆಗಲಿ ತೊಂದರೆಯಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಲ್ಲಿರುವ ಜನರನ್ನು ಕೇಳಬೇಕೆಂದರೆ ರೆಫರೆಂಡಂ ತೆಗೆದುಕೊಳ್ಳಬೇಕೆಂತಲೇ ?

ಶ್ರೀ ಕೆ. ಹನುಮಂತಯ್ಯ—ಆಯಾ ಜನರ ಅಭಿಮತನಕ್ಕೆ ಅನುಸಾರವಾಗಿ ಎಲ್ಲ ಸರ್ಕಾರಗಳೂ ನಡೆದುಕೊಂಡರೆ ನಮಗೆ ಆಗ ಯಾವ ವಾಗ್ಯುದ್ಧವೂ ನಡೆಯಲು ಅವಕಾಶವೇ ಇರುವುದಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ, ಆಲೂರು, ಆದವಾನಿ ಮತ್ತು ರಾಯದುರ್ಗ ಈ ತಾಲ್ಲೂಕುಗಳಿವೆ. ಅಲ್ಲಿರತಕ್ಕಂಥ ಕೆಲವು ಕನ್ನಡಿಗರು ನಮ್ಮ ಮೈಸೂರು ಸಂಸ್ಥಾನಕ್ಕೆ ಎಂದರೆ, ಮುಂದೆ ಹೊಸದಾಗಿ ಏರ್ಪಡತಕ್ಕ ರಾಜ್ಯದಲ್ಲಿರುತ್ತೇವೆಂದು ಹೇಳಿದರೆ, ಆ ಜನರೆಲ್ಲ ಆ ರೀತಿ ಇಷ್ಟಪಟ್ಟು ನಮ್ಮೊಡನೆ ಸೇರಲು ಅಪೇಕ್ಷೆಪಟ್ಟರೆ, ಆಗ ನಾವು ಅವರನ್ನೂ ಸೇರಿಸಿಕೊಳ್ಳೋಣ. ಹಾಗಿಲ್ಲದೆ ಅವರು ಆಂಧ್ರಕ್ಕೇ ಸೇರುವುದಾಗಿ ಅಭಿಪ್ರಾಯಪಟ್ಟರೆ ಅವರು ಅಲ್ಲಿಗೇ ಸೇರಲಿ. ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಈ ರೀತಿಯಾಗಿ ಜನರ ಅಭಿಪ್ರಾಯಗಳನ್ನು ತಿಳಿದುಕೊಂಡು ಈ ಪ್ರಶ್ನೆಯನ್ನು ತೀರ್ಮಾನಮಾಡುವುದಕ್ಕೆ ಅನೇಕ ಶಿಷ್ಟಾಚಾರದ ಮಾರ್ಗಗಳಿವೆ. ಆದಕಾರಣ ಆ ಜನರು ಮೈಸೂರು ಸಂಸ್ಥಾನಕ್ಕೆ ಸೇರುವುದಾಗಿದ್ದರೆ ಮೈಸೂರಿಗೆ ಬರಲಿ; ಅಥವಾ ಒಂದು ವೇಳೆ ಅವರು ಆಂಧ್ರದಲ್ಲೇ ಇರುವುದಾಗಿ ತಿಳಿಸಿದರೆ ಅವರು ಅಲ್ಲೇ ಇರಲಿ.

ಒಬ್ಬ ಮಾನ್ಯಸದಸ್ಯರು.—ನಾವೋ ?

ಶ್ರೀ ಕೆ. ಹನುಮಂತಯ್ಯ.—ನೀವು ಇದ್ದ ಕಡೆಯಲ್ಲೇ ಇರಿ. ಆದಕಾರಣ ಈಗ ಈ ಬಾರ್ಡರ್ ಏರಿಯಾದಲ್ಲಿ (ಗಡೀ ಪ್ರದೇಶಗಳಲ್ಲಿ) ಯಾವ ಯಾವ ಜನರಿರುತ್ತಾರೋ ಮತ್ತು ಎಲ್ಲೆಲ್ಲಿ ಈಗ ಈ ವಾದ ಎದ್ದಿದೆಯೋ ಅಲ್ಲಿರತಕ್ಕಂಥ ಜನರೆಲ್ಲರೂ ಸೇರಿ ಅವರಾಗಿಯೇ ನಾವು ಇಲ್ಲಿಗೇ ಸೇರುತ್ತೇವೆಂದು ಹೇಳಿದರೆ ನಾವು ಸೇರಿಸಿಕೋಳ್ಳೋಣ. ಇಲ್ಲವಾದರೆ ಬೇಡ ಈ ತತ್ವವನ್ನೇ ನಾನು ಈ ನಿರ್ಣಯದಲ್ಲಿ ಪ್ರತಿಪಾದನೆ ಮಾಡಿದ್ದೇನೆ. ಈಗ ನೀಲಗಿರಿ ಪ್ರದೇಶದವರು ಅವರಾಗಿಯೇ ಈ ತತ್ವದ ಪ್ರಕಾರ ನಾವು ಕರ್ಣಾಟಕಕ್ಕೆ ಸೇರಿಕೊಳ್ಳುತ್ತೇವೆಂದು ಹೇಳುವುದಾದರೆ, ಅಲ್ಲಿಯ ಜನರು ಆ ರೀತಿ ಅಪೇಕ್ಷೆಪಡುವುದಾದರೆ, ಆಗಲಿ. ಹೀಗೆ ಅಯಾ ಪ್ರದೇಶದ ಜನರ ಅಭಿಪ್ರಾಯಕ್ಕೆ ಅನುಗುಣವಾಗಿರುವಂತೆ ಈ ವಿಚಾರ ಸೇರಿಸಿದೆ

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಗದ್ವಾಲ್ ಮತ್ತು ಆಲಂಪಲ್ಲಿ ವಿಚಾರವೋ ?

ಶ್ರೀ ಕೆ. ಹನುಮಂತಯ್ಯ.—ಆದರೆ ನನಗೆ ತಿಳಿದು ಬಂದಿರುವವರೆಗೆ ಇಲ್ಲಿಯವರೆಗೂ ಯಾವ ಒಂದು ರೀತಿಯಲ್ಲೇ ಆಗಲಿ, ಆಂಧ್ರದಲ್ಲೇ ಇರುತ್ತೇವೆಂದು ಆಲಂಪುರ ಮತ್ತು ಗದ್ವಾಲ್ ತಾಲ್ಲೂಕುಗಳ ಜನರು ತಿಳಿಸಿಲ್ಲ. ಆ ರೀತಿ ಆ ಎರಡು ತಾಲ್ಲೂಕುಗಳ ಜನರೂ ನಮಗೆ ಮತ್ತು ಈ ಸಭೆಗೆ ಒಂದು ನಿರ್ದಿಷ್ಟವಾದ ಕ್ರಮವನ್ನು ಅನುಸರಿಸಿ, 'ನಾವು ಆಂಧ್ರದಲ್ಲೇ ಇರುತ್ತೇವೆ' ಎಂದು ತಿಳಿಸಿದರೆ, ಆಗ ನಾವೂ ಅದಕ್ಕೆ ಒಪ್ಪಿಕೊಳ್ಳೋಣ.

ಶ್ರೀ ಮುಲ್ಕಾ ಗೋವಿಂದರೆಡ್ಡಿ.—ಆ ಜನರು ಅಂಧ್ರಕ್ಕೆ ಸೇರಬೇಕೆಂಬುದಾಗಿ ಹೇಳುತ್ತಿದ್ದಾರೆಂದು ಆಲಂಪುರ್ ತಾಲ್ಲೂಕಿನ ಶ್ರೀಪುಲ್ಲಾರೆಡ್ಡಿ, ಎಂ.ಎಲ್.ಎ., ಅವರು ಹೈದರಾಬಾದ್ ಅಸೆಂಬ್ಲಿಯಲ್ಲಿ ತಿಳಿಸಿದ್ದಾರೆ.

ಶ್ರೀ ಕೆ. ಹನುಮಂತಯ್ಯ.—ಎಲ್ಲಿಯೂ ಕೇಳದಿರತಕ್ಕಂಥ ರಹಸ್ಯ ವಿಚಾರಗಳೆಲ್ಲಾ ನಮ್ಮ ರೆಡ್ಡಿಯವರಿಗೇ ಗೊತ್ತಿರುತ್ತವೆ. ಆದರೆ ಆಲಂಪಲ್ಲಿ ಮತ್ತು ಗದ್ವಾಲ್ ಪ್ರದೇಶದಲ್ಲಿರತಕ್ಕಂಥ ಕೆಲವರು 'ನಾವು ಕರ್ಣಾಟಕದಲ್ಲೇ ಇರುತ್ತೇವೆ, ನಮಗೆಲ್ಲಾ ಅಲ್ಲಿಯೇ ಹೆಚ್ಚು ಸೌಕರ್ಯಗಳು ದೊರೆಯುತ್ತವೆ' ಎಂದು ಅಪೇಕ್ಷೆಪಡುವುದಾದರೆ, ನಾವು ಅವರ ಅಭಿಪ್ರಾಯಕ್ಕೆ ವಿರೋಧವಾಗಿ 'ನೀವು ಬೇರೆ ಕಡೆಗೆ ಹೋಗಿ ಸೇರಿಕೊಳ್ಳಿ, ನಮಗೆ ನೀವು ಬೇಕಾಗಿಲ್ಲ' ಎಂದು ಹೇಳುವುದು ಸರಿಯಾದದ್ದಲ್ಲ. ಆ ಎರಡು ತಾಲ್ಲೂಕಿನ ಜನರು ಆಂಧ್ರಕ್ಕೆ ಸೇರಬೇಕೆಂದು ಇಷ್ಟಪಡುವುದಾದರೆ ನಾವು ಅದಕ್ಕೂ ಒಪ್ಪಿಕೊಳ್ಳುತ್ತೇವೆ. ಆದಕಾರಣ ಈಗ ನಾನು ಈ (ಎಫ್) ಕ್ಲಾಜಿನಲ್ಲಿ ಇಂಥಿಂಥ ಪ್ರದೇಶಗಳೇ ನಮಗೆ ಸೇರಬೇಕೆಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಬದಲಾಗಿ ಆ ತತ್ವವನ್ನೇ ಒಳಗೊಂಡಂಥ ಅಂಶವನ್ನು. ಇನ್ನೂ ಉತ್ತಮ ರೀತಿಯಲ್ಲಿ ಪ್ರತಿಪಾದಿಸಿದ್ದೇನೆ. ಆಯಾ ಪ್ರಾಂತದ ಜನಗಳ ಅಭಿಪ್ರಾಯಕ್ಕನುಸಾರವಾಗಿ ವರ್ತಿಸುವುದೇ ಸೂಕ್ತವಾದ ಮಾರ್ಗವೆಂದು ನಾನೀಗ ತಿಳಿದುಕೊಂಡು ಈ ಅಂಶವನ್ನು ಇಲ್ಲಿ ಈ ರೀತಿ ಅಡಕಮಾಡಿದ್ದೇನೆ. ಈಗಾಗಲೇ ತಾವು ಸೂಚನೆ ಮಾಡಿರುವಂತೆ ನನಗೆ ಮತ್ತೊಮ್ಮೆ ಮಾತನಾಡುವುದಕ್ಕೆ ಅವಕಾಶವಿದ್ದೇ ಇದೆ. ಆದಕಾರಣ ನಾನು ಆ ಕಾಲಾವಕಾಶವನ್ನು ಉಪಯೋಗಿಸಿಕೊಂಡು ಈ ತಿದ್ದುಪಡಿಯ ಮೇಲೂ ಮತ್ತು ಮೂಲ ನಿರ್ಣಯದ ಮೇಲೂ ಮಿಕ್ಕ ವಿಚಾರಗಳನ್ನು ಆಗ ಪ್ರಸ್ತಾಪ ಮಾಡುತ್ತೇನೆ.

Sri Mulka GOVINDA REDDY.—I am quoting what the Deputy Chief Minister said in the floor of the Legislative Assembly at Kurnool. The Hon'ble Chief Minister said that the Chairman of an impartial body like Tungabhadra Board has unequivocally declared that no decision was taken by the majority and everything went on well. Yes, the impartial body like the Fact Finding Committee has given some opinion or some report; the important body like the States' Reorganisation Commission after going through carefully have made a recommendation and that too a strong recommendation that this Thungabhadra Board area and these taluks should go to Andhra.

Sri K. HANUMANTHAIYA.—The Chairman has also said that the States Reorganisation Commission never consulted the Chairman or the Board before making such an allegation.

Mr. SPEAKER.—That you have stated.

Sri Mulka GOVINDA REDDY.—I am only questioning when Sri Hanumanthaiya says he attaches importance to an opinion of the Board which gives a verdict in this favour, he does not attach any importance to anybody. If we can believe the reports that have appeared in the Press, he is reported to have said that they are devoid of wisdom when they gave such a verdict in regard to this matter. I do not want to use that strong language though I have got a cutting of that statement with me. Sri Hanumanthaiya was telling us that no opportunity was given to Mysore State. When the Commission visited that area, Sri Hanumanthaiya is reported to have issued a statement that the Commission had no propriety or the jurisdiction or the right or authority to go into a question which was already settled. And rightly came the reply from Dr. Kunzru, a Member of that Commission to the effect that this Commission had all powers, had all rights and all jurisdiction over this issue and they have a right to go into this question and they did go into that question. Two Ministers from the Mysore State went there and pleaded their case before the Commission. So, it is not right to say that an *ex parte* decree was given by the Commission. Ample opportunity was given to the Mysore Government. The Mysore Government bungled and the way in which they treated the

(SRI MULKA GOVINDA REDDY.)

Commission was proof and it made them feel that it is possible that this Government is coming in the way of executing hydro-electric project in Thungabhadra and the high-level canal there. It is also stated, Sir, that the Government of Mysore did not want to give or did not concede the demand for immediate execution of the high-level canal and all these factors must have weighed with the Commission.

Dr. R. NAGAN GOWDA.—He is making a lot of wrong statements.

Mr. SPEAKER.—You can reply later on.

Sri Mulka GOVINDA REDDY.—The Commission rightly thought of giving that area to the Andhra Government. It is not because on linguistic consideration but because of the failure of the Government in co-operating in the execution of that project which was mainly meant for Rayalaseema.

Sir, some persons asked whether some areas in Madakasira should go to Karnataka. The entire taluk cannot go to Karnataka. There are some firkas where more than 51 per cent of the people speak Kannada language. I have certainly no objection that those areas should go to Karnataka. It is not fair either that they should remain in Andhra. Whether some of the people in Madakasira Taluk like it or not, those areas which are contiguous and wherein the language of Kannada predominates should go to Karnataka. In my amendment, I have also suggested that some taluks in Madras State should go to Andhra, particularly, Hosur, Krishnagiri and Gudiyatham Taluks in Madras. Some people claim that Hosur Taluk should go to Karnataka. Why should they think that Kannada predominates in that Taluk? But the truth is otherwise. Telugu-speaking population in that area is much more than the Kannada-speaking population in those taluks and especially in Hosur Taluk. Therefore, those taluks should naturally go to Andhra.

Sri T. HANUMIAH (Hiriyur—Scheduled Castes).—What is the percentage?

Sri Mulka GOVINDA REDDY.—I will give you. In Salem District, Kannada-speaking population is 10·4 per cent in Krishnagiri Taluk and 28 per cent in Hosur Taluk. The Telugu-speaking population is 39·3 per cent. So, it is obvious from the Census published by the Government of India that the Telugu-speaking people in Hosur is more. . . .

Mr. SPEAKER.-The Hon'ble Member need not answer all those things.

Sri Mulka GOVINDA REDDY.—Telugu-speaking population in those Taluks is much more than Kannada-speaking population. Therefore those areas should go to Andhra. Without bringing any prejudice to bear on this problem if the Members of the Assembly feel and they are rightly feeling that the language should be the main consideration for forming a State these areas which are predominantly Telugu must naturally go to Andhra. Sir, Sri Hanumanthaiya has moved one amendment and clause (*f*) of that reads thus:

> "(*f*) such other contiguous areas in which the people have expressed their desire to join the new State."

I really do not understand why this amendment has been placed before us for our consideration.

Sri K. HANUMANTHAIYA.—To help you.

Sri Mulka GOVINDA REDDY.—After this S.R.C. report is considered by the various legislatures and afterwards by the Parliament, a Bill is going to be framed and placed before us. By merely saying 'such other contiguous areas in which the people have expressed their desire to join the new State', we might be having in view some of the Kannada-speaking areas which are already not included in the S.R.C. recommendations. It shows that in those areas where people speaking Kannada, Telugu or Tamil want to come to us, we will take them. But that is not the correct thing. If those areas where Kannada predominates, want to come, then only the Government of India is going to accept. I am going to make another suggestion to Sri Hanumanthaiya and members

of this Assembly through you, Sir. When Sri B. V. Narayana Reddy moved a resolution some years back in this Assembly, we received some letters from some friends from Mysore and Mandya to the effect that in case United Karnataka is to be formed, the people of Mysore, Mandya and Tumkur Districts would all like to join Andhra. Does he allow that ?

A MEMBER.—Who told you so ?

Sri Mulka GOVINDA REDDY.—We have received letters and I read those letters.

Mr. SPEAKER.—I request the Honourable Members to allow the Member to continue his speech. Otherwise, it will be simply waste of time.

Sri Mulka GOVINDA REDDY.—Sri Hanumanthaiya made another charge against Andhra Government.

A MEMBER.—Are you defending Andhra Government ?

Sri Mulka GOVINDA REDDY.—Not that I am defending the Andhra Government. They are capable of defending themselves. But when the question is that State should be formed on the basis of language, I am one with Andhra Government when they demand that areas which are contiguous and where the population is predominantly Telugu should join them. What is wrong in their asking for it ? Sri Hanumanthaiya is doing the same thing when he says that four taluks of Bidar District should come to Karnataka State. There must be one logic. He cannot have one logic for Karnataka and another for Andhra. He cannot have both.

Sir, when we are re-drawing the map of India, some other considerations must also be taken into account. In a federal structure, it is absolutely necessary that there should be two chambers. But in these States, there is no reason why we should continue to have two chambers. In some areas that are going to be joined to Karnataka, I know there are no two chambers. For example in Hyderabad State, there are no two chambers, and the recently formed new Andhra State has no two chambers. . . . . .

Sri K. HANUMANTHAIYA.—It is better to have the Upper Chamber.

Sri Mulka GOVINDA REDDY.—It is better to have the Upper Chamber because, we know how these Upper Chambers are made use of. It is for personal vain glory. We know by nominating their stooges, how these Upper Chambers are being misused. Therefore, I plead that with the reorganisation of the States, these Legislative Councils in the States should also be abolished.

Lastly, the second part of the amendment moved by Sri Hanumanthaiya—I am opposed to it, *i.e.*, "in order to preserve its composite character, the new State should continue to be called 'Mysore State'. The composite character is going to be dissolved with the merger of Mysore in Karnataka. So there is no meaning in calling the Karnataka State by the name of Mysore State. When Mysore State itself goes out of the map, there is no meaning in giving the name and which truly it does not deserve. The emphasis is on the language and the Commission has rightly said that it should be called Karnataka. I therefore oppose the amendment that has been moved by Sri Hanumanthaiya. I seek the indulgence of the House to accept the amendment that is moved by me in all fairness to themselves and in all fairness to me.

Mr. SPEAKER.—Motion moved :

"That all the words after the word 'that' be omitted and the following words be substituted in their place, namely :—

'Having taken into consideration the Report of the States Reorganisation Commission, this House is of the opinion that in the event of United Karnataka being formed,

(*a*) Harihar-Davangere be made the capital of Karnataka ;

(*b*) Telugu District of Kolar,

(*c*) Molakalmuru and Challakere taluks and eastern parts of Chitaldrug, Jagalur and Hiriyur Taluks in Chitaldrug District,

(*d*) Pavagada Taluk, parts of Koratagere and Madhugiri Taluks in Tumkur District,

(MR. SPEAKER.)

(e) Anekal, Doddaballapur, Devanahalli, Hoskote, Bangalore South and parts of Bangalore North Taluk in Bangalore District,

(f) Corporation area of Bangalore City,

(g) Hosur, Krishnagiri and Gudiyatham Taluks in Madras,

(h) (i) Alampur, Gadwal Taluks and parts of Raichur town in Raichur District, (ii) Sandur and Kodangal Tehsils and parts of Yadgir tehsils in Gulbarga District be added to Andhra State including Telangana."

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ನಮ್ಮ ಮುಂದಿರತಕ್ಕ ಈ ಪ್ರಾಂತ ಪುನರ್ವಿಂಗಡಣೆಯ ಸಮಿತಿಯವರ ವರದಿಯ ಮೇಲೆ ಮಾತನಾಡಿದ ಭಾಷಣಕಾರರೆಲ್ಲರನ್ನೂ ನಾನು ಬಹಳ ಕುತೂಹಲದಿಂದ ಕೇಳಿದೆ, ಎರಡು ಭಾಷಣಗಳು ನನ್ನ ಕುತೂಹಲವನ್ನು ತುಂಬಾ ಕೆರಳಿಸಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲನೆಯದಾಗಿ, ಈ ವರದಿಯನ್ನು ಸಭೆಯ ಮುಂದೆ ಮಂಡಿಸುವಾಗ, ಈ ಸಭೆಯ ನಾಯಕರು ಮಾಡಿದ ಭಾಷಣ. ಎರಡನೆಯದಾಗಿ ಶ್ರೀಮಾನ್ ಪಟ್ಟಾಭಿರಾಮನ್‌ರವರು ಮಾಡಿದ ಭಾಷಣ. ಮಾನ್ಯ ಮುಖ್ಯ ಮಂತ್ರಿಗಳ ಭಾಷಣದಲ್ಲಿ ಅವರು ಒಂದು ವೇದಾಂತ ತತ್ವವನ್ನು ನಮ್ಮ ಮುಂದಿಟ್ಟು ಅದರ ಆಧಾರದ ಮೇಲೆ ಈ ವರದಿಯಲ್ಲಿ ನಮೂದಿಸಿರುವ ಕರ್ಣಾಟಕ ಪ್ರಾಂತವನ್ನು ಒಪ್ಪಬೇಕೆಂದು ಹೇಳಿದ್ದಾರೆ. ಆದುದರಿಂದ ಅವರ ಭಾಷಣವನ್ನು ಒಂದು philosophic approach ಎಂದು ಹೇಳಬಹುದು.

Sri K. HANUMANTHAIYA.—Plato said that all politicians must be philosophers. (*Laughter!*)

Sri D. DEVARAJ URS.—All politicians must be philosophers; but they must be practical philosophers.

ಶ್ರೀ ಪಟ್ಟಾಭಿರಾಮನ್‌ರವರ ಭಾಷಣ emotional and sentimental approach ನಿಂದ ಮಾಡಿದುದು ಎಂದು ನನ್ನ ಅಭಿಪ್ರಾಯ. ಮುಖ್ಯ ಮಂತ್ರಿಗಳು ತಮ್ಮ ಭಾಷಣದ ಪೀಠಿಕೆಯಲ್ಲಿ ಇದೊಂದು ಪ್ರಕೃತಿ ನಿಯಮವೆಂದು ಅಪ್ಪಣೆ ಕೊಡಿಸಿದರು. ಇದು Law of Nature or Law of Karma.

Sri K. HANUMANTHAIYA.—Law of Nature.

ಶ್ರೀ ಡಿ. ದೇವರಾಜ ಅರಸ್.—ಪೂರ್ವಾರ್ಜಿತ ಕರ್ಮ ಎಂದರೆ ಮೊದಲಿನಿಂದಲೂ ನಾನು ಮಾಡಿದ ಕೆಲಸಕಾರ್ಯಗಳ ಫಲ ಎಂದು ಭಾವಿಸಬಹುದು. ಇದರಲ್ಲಿ ಸಂಪೂರ್ಣವಾಗಿ ನಿಜಾಂಶವಿದೆ ಎಂದು ಹೇಳುವುದಕ್ಕಾಗದೇ ಹೋದರೂ ಬಹುಮಟ್ಟಿಗೆ ನಿಜಾಂಶವಿದೆ. ಇದೇ ಮಾತನ್ನು ಪುಷ್ಟೀಕರಿಸುವ ರೀತಿಯಲ್ಲಿ ಈ ವರದಿಯಲ್ಲಿ ಕರ್ಣಾಟಕದ ವಿಚಾರವಾಗಿ ಪ್ರಸ್ತಾಪ ಮಾಡುತ್ತಾ ಕೆಲವು ಅಂಶಗಳನ್ನು ವ್ಯಕ್ತಪಡಿಸಿದ್ದಾರೆ. ಎರಡು ಪ್ರಾಂತಗಳಾಗಬೇಕೆಂಬ ವಿಚಾರವನ್ನು 91ನೆಯ ಪುಟದಲ್ಲಿ 323ನೆಯ ಪ್ಯಾರಾದಲ್ಲಿ ಪ್ರಸ್ತಾಪಿಸಿದ್ದಾರೆ:

"This latter view is of such recent origin, and the opinion of its sponsors is still so tentative that this cannot perhaps, be taken as a considered solution put forward by the Kannadigas generally"

ಎಂದು ಹೇಳಿದ್ದಾರೆ. ಮತ್ತು ಇನ್ನೂ ಏನು ಹೇಳಿದ್ದಾರೆಂದರೆ :

"The majority seems to value the advantages of unification above any temporary dislocation or inconvenience which may result from it"

ಎಂದು ಹೇಳಿದ್ದಾರೆ. ಈ ಎರಡು ಕಾರಣಗಳ ಜೊತೆಗೆ, ಈ ಏಕೀಕರಣ ಪ್ರಶ್ನೆ ನಮ್ಮ ಮುಂದೆ, ಎಂದರೆ, ಮೈಸೂರು ದೇಶದ ಮುಂದೆ, ಮಾನ್ಯ ಸದಸ್ಯರನೇಕರು ತಿಳಿಸಿರುವ ಹಾಗೆ, ಅನೇಕ ವರ್ಷಗಳಿಂದ ಇದ್ದ ಕಾಲದಲ್ಲಿ, ನಮ್ಮ ಮಾನ್ಯ ಮುಖಂಡರನೇಕರು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇದು ಆದರೂ ಆಗಲಿ ಅಥವಾ ಆಗದೇ ಇರಲಿ ಎಂದು ಹೀಗೂ ಹಾಗೂ ಹೇಳುತ್ತಾ ತಮ್ಮ ಸ್ಥಿರ ಅಭಿಪ್ರಾಯವನ್ನು ಬಚ್ಚಿಟ್ಟುಕೊಂಡಿದ್ದ ಕಾರಣ ಅದನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳುವ ಹಾಗೆ, ಕರ್ಮಕ್ಕನುಸಾರವಾಗಿ ಈ ದಿವಸ ನಾವು ಇದನ್ನು ಒಪ್ಪಲೇಬೇಕು, ವಿಧಿಯಿಲ್ಲ, ಪ್ರಕೃತಿನಿಯಮ ಹೀಗಿದೆ ಎಂದು ಅವರು ಹೇಳಿದ್ದರಲ್ಲಿ ಬಹುಮಟ್ಟಿನ ಸತ್ಯಾಂಶವಿದೆ ಎಂದು ನಾನು ಒಪ್ಪುತ್ತೇನೆ. ಆದರೆ ನನ್ನ ಅಭಿಪ್ರಾಯದಲ್ಲಿ, ಹಿಂದಿನಿಂದ ನಮ್ಮ ಮುಖಂಡರೆಲ್ಲ ಮಾಡಿರತಕ್ಕ ಕರ್ಮದ ಫಲವನ್ನು ನಾವು ಏಕಾಏಕಿ ಒಪ್ಪಬೇಕೆಂದು ಹೇಳುವುದು ಯಾವ ವಾದ? ನಾನು ಒಂದು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನೇ. ಅವರ philosophic dictionನನ್ನೇ ನಾವು ಒಪ್ಪುವುದಾದರೆ, ಇಂಡಿಯಾ ದೇಶದಲ್ಲಿ ಬಡತನವಿರುವುದೂ ಕೂಡ, ಪ್ರಕೃತಿನಿಯಮ, ಕರ್ಮ ಎಂದು ಹೇಳಬೇಕಾಗುತ್ತದೆ. ನಮ್ಮ ವೇದಾಂತ ಶಾಸ್ತ್ರಗಳಲ್ಲಿಯೂ ಹಿಂದಿನ orthodox-type ಜನರೂ ಏನು ಹೇಳುತ್ತಿದ್ದರೆಂದರೆ, ಒಬ್ಬ ಮನುಷ್ಯ ಬಡವನಾಗಬೇಕಾದರೆ ಪೂರ್ವ ಜನ್ಮದ ಕರ್ಮದಿಂದ, ಮುಖ್ಯ ಮಂತ್ರಿಯಾಗಬೇಕಾದರೆ ಅದೂ ಪೂರ್ವ ಜನ್ಮದ ಕರ್ಮಫಲ ಎಂದು ಹೇಳುತ್ತಿದ್ದರು. ಹೀಗೆಯೇ ಒಂದೊಂದಕ್ಕೂ ಈ ಕರ್ಮದ ವಾದವನ್ನು ಅನ್ವಯಿಸಿಕೊಂಡು ಬರಬಹುದು. ಇಂಡಿಯಾ ದೇಶದ ಪರಕೀಯರ ಆಳ್ವಿಕೆಯಲ್ಲಿರಬೇಕಾದರೆ. ಅದೂ ಒಂದು ಕರ್ಮ. ಆದರೆ ಇತ್ತೀಚೆಗೆ ಈ ತತ್ವ ಅಥವಾ ವೇದಾಂತ ಬದಲಾವಣೆಯಾಗಿದೆ. ನಾವು ಈ ಕರ್ಮದ ಫಲ ಎನ್ನುವುದನ್ನು ಅಷ್ಟಾಗಿ ಒಪ್ಪದೆ ಮನುಷ್ಯ ಪ್ರಯತ್ನವೂ ಒಂದಿದೆ ಆ ಪ್ರಯತ್ನದಿಂದ ನಮ್ಮ ಆಗುಹೋಗುಗಳನ್ನು ಬದಲಾವಣೆ ಮಾಡಬಹುದೆಂಬ ಭಾವನೆ ನಮ್ಮಲ್ಲಿ ಮೂಡಿದೆ. ಅಲ್ಲದೆ ಪ್ರಕೃತಿಯನ್ನು ಕೂಡ ಬದಲಾವಣೆ ಮಾಡಬೇಕೆಂದು ಒಂದು ಸಿದ್ಧಾಂತ ಅಥವಾ ವಿಜ್ಞಾನ

ಶಾಸ್ತ್ರ ಪ್ರಪಂಚದಲ್ಲಿಯೂ ಮತ್ತು ನಮ್ಮ ದೇಶದಲ್ಲಿಯೂ ಬೆಳೆದು ಬಂದಿದೆ. ಇಂಥಾ ಕಾಲದಲ್ಲಿ ಅಂದರೆ ಇಪ್ಪತ್ತನೆಯ ಶತಮಾನದಲ್ಲಿ ಅವರು ಪೂರ್ವಾರ್ಜಿತ ಕರ್ಮದ ಫಲವಾಗಿ ನಾವು ಇದನ್ನು ಒಪ್ಪಬೇಕೆಂದು ಹೇಳುವುದು ಸರಿಯೆ ಎನ್ನುವುದನ್ನು ಅವರು ಯೋಚನೆಮಾಡಬೇಕು. ಈ ಎರಡು ವಾದಗಳಲ್ಲದೆ ಮೂರನೇ ವಾದ rational approach ಎಂಬುದೂ ಒಂದಿದೆ. ತಾರ್ಕಿಕವಾಗಿ ಈ ವರದಿಯನ್ನು ನೋಡುವುದಾದರೆ, ನೆನ್ನೆಯ ದಿವಸ ಶ್ರೀ ಪಟ್ಟಾಭಿರಾಮರವರು ಎರಡು ಸಂಸ್ಥಾನಗಳು ಅಥವಾ ಕನ್ನಡ ಮಾತನಾಡುವ ಜನರು ಎರಡು ಭಾಗವಾಗಬೇಕೆಂದು ವಾದವನ್ನು ನಾವು ಮುಂದಿಡುವುದು ಸಾಧ್ಯವೆ, ಶಿವಶಿವಾ ! ರಾಮ, ರಾಮ ! ಎನ್ನುವ ರೀತಿಯಲ್ಲಿ ಹೇಳಿದರು. 'Can anybody seriously put this question ? Can we seriously argue for this proposition' ಎಂದು ಹೇಳಿದರು. Rational ಆಗಿ ಯೋಚನೆ ಮಾಡಿದರೆ, ಆಗಬಾರದೆಂಬೇನೂ ಇಲ್ಲ. ಒಂದು ವೇಳೆ ಒಂದೇ ಸಂಸ್ಥಾನವಾಗಬೇಕೆಂದು ಕೆಲವರು ಹೇಳಿದರೆ, ಬೇರೆಯವರು ಎರಡು ಸಂಸ್ಥಾನಗಳಾಗಬೇಕೆಂದು ಹೇಳಿದರೆ ಅದು ತಪ್ಪೇನೂ ಅಲ್ಲ. ಈ ವರದಿಯಲ್ಲಿ ಅವರು ಏನೇನು ಆಧಾರಗಳನ್ನಿಟ್ಟು ಯಾವ ಯಾವ ತತ್ವಗಳನ್ನು ಪ್ರತಿಪಾದನೆಮಾಡಿ ನಮ್ಮ ಇಂಡಿಯಾದೇಶವನ್ನು ಬೇರೆ ಬೇರೆ ಸಂಸ್ಥಾನಗಳಾಗಿ ವಿಭಜನೆ ಭಾಗವಮಾಡಬೇಕೆಂದು ಹೇಳಿದ್ದಾರೆಂಬುದನ್ನು ನಾನು ಸಾಧ್ಯವಾದಷ್ಟು, ನನ್ನ ಬುದ್ಧಿಯ ಮಟ್ಟಕ್ಕೆ ಸಿಲುಕುವಷ್ಟು ತಿಳಿದುಕೊಂಡಿದ್ದೇನೆ. ಶ್ರೀ ಪಟ್ಟಾಭಿರಾಮರವರು ನೆನ್ನೆಯ ದಿವಸ ಮಾತನಾಡುತ್ತಾ ಭಾಷೆಯ ಆಧಾರದ ಮೇಲೆ ದೇಶವನ್ನು ವಿಭಜನೆ ಮಾಡುವುದಕ್ಕೆ ಸಮಿತಿಯವರು ಖಂಡಿತ ಹೊರಟಿಲ್ಲ, ಆ ರೀತಿ ಮಾಡಿದ್ದಾರೆಂದು ನಾವು ತಿಳಿಯುವುದು ಸರಿಯಲ್ಲ ಎಂದು ಬಹಳಮಟ್ಟಿಗೆ ಶ್ರಮಪಟ್ಟು ವಾದ ಮಾಡಿದರು. ಹೀಗೆ ಯಾವಾಗ ಹೇಳಿದರೋ ಆಗ ನಿಜವಾಗಿ ಇದು ಯೋಚನೆ ಮಾಡಬೇಕಾದ ಸಂದರ್ಭವೆಂದು ನೆನ್ನೆ ರಾತ್ರಿ ನಾನು ಮತ್ತೆ ಕುಳಿತು ಈ ವರದಿಯನ್ನು ಓದಿದೆ. ನೆನ್ನೆ ಅವರು ಭಾಷೆಯಲ್ಲದೆ ಬೇರೆ ಬೇಕಾದಷ್ಟು ಆಧಾರಗಳಿವೆ ಎಂದು ಹೇಳಿದರು. ಬೇರೆ ಏನು ಆಧಾರಗಳನ್ನು ಹೇಳುತ್ತಾರೋ ನೋಡೋಣವೆಂದು ಕಾದಿದ್ದೆ. ಆದರೆ ಅವೇನು ಎಂಬುದನ್ನು ಅವರ ಭಾಷಣದಲ್ಲಿ ತಿಳಿಸಲಿಲ್ಲ. ಈ ವರದಿಯನ್ನು ಬರೆದಿರುವವರು, ವರದಿಗೆ ಪೀಠಿಕಾರೂಪವಾಗಿ ಬರೆದಿರುವುದರಲ್ಲಿ ಕೊಟ್ಟಿರತಕ್ಕ ತತ್ವಗಳೇನಿವೆಯೋ ಅವುಗಳಲ್ಲಿ ಶ್ರೀ ಪಟ್ಟಾಭಿರಾಮರವರು ಹೇಳಿದಹಾಗೆ, ಭಾಷೆಯ ಆಧಾರದ ಮೇಲೆ ವಿಂಗಡಣೆಮಾಡುವುದರಿಂದ ಸಾಧಕಬಾಧಕಗಳೇನು, ಬೇರೆ ಆಧಾರಗಳಿಂದ ಮಾಡುವುದರಿಂದ ಸಾಧಕಬಾಧಕಗಳೇನು ಎಂಬುದನ್ನು ಸಮನ್ವಯಮಾಡಿ ಅದರ ಮೇಲೆ ತಮ್ಮ ತೀರ್ಮಾನವೇನು ಎಂಬುದನ್ನೂ ಬರೆದಿದ್ದಾರೆ. ತತ್ವಗಳನ್ನು ಹಾಕುವಾಗ ಅವರು ಹೇಳಿದ ಹಾಗೆ ಭಾಷೆಯ ಜೊತೆಗೆ ಅನೇಕ ತತ್ವಗಳನ್ನು ಹಾಕಿದ್ದಾರೆ. ಆದರೆ ವಿಭಜನಾ ಕಾರ್ಯರಂಗಕ್ಕೆ ಬರುವಾಗ, ಪ್ರತಿ ಸಂಸ್ಥಾನವೂ ಹೀಗೆ ಇರಬೇಕೆಂದು, ಹೀಗೆ ವಿಂಗಡಣೆಮಾಡಬೇಕೆಂದು ನಿರ್ಧಾರಮಾಡುವ ಕಾಲದಲ್ಲಿ ಈ ವರದಿಯಲ್ಲಿ ಹೇಗೆ ಮಾಡಿದ್ದಾರೆಂಬುದನ್ನು ನೋಡಬೇಕು. ಎಲ್ಲಾ ಸಂಸ್ಥಾನಗಳನ್ನೂ, ಅದರಲ್ಲಿಯೂ ದಕ್ಷಿಣ ಇಂಡಿಯಾದೇಶದಲ್ಲಿ, ಸ್ವಲ್ಪ ಹೆಚ್ಚು ಕಡಮೆ, ಎಲ್ಲಾ ರಾಜ್ಯಗಳನ್ನೂ ಭಾಷೆಯ ಆಧಾರದ ಮೇಲೆಯೇ ವಿಭಾಗಮಾಡಿದ್ದಾರೆ. ಇದರಲ್ಲಿ ಒಂದು ಸ್ವಾರಸ್ಯವಾದ ಮಾತನ್ನು ಬರೆದಿದ್ದಾರೆ. ದೇಶವನ್ನು ವಿಭಜನೆಮಾಡತಕ್ಕ ಕಾಲದಲ್ಲಿ, ರಾಜ್ಯಗಳು ದೊಡ್ಡದಾಗಿರಬೇಕೆ ಅಥವಾ ಚಿಕ್ಕದಾಗಿರಬೇಕೆ ಎಂಬ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. 'Small States and Big States' ಎಂದು ಒಂದು ಅಧ್ಯಾಯವೇ ಇದೆ. ಅದರಲ್ಲಿ ದೊಡ್ಡ ಸಂಸ್ಥಾನಗಳಿರುವುದೇ ಸರಿ ಎಂದು ವಾದಮಾಡಿ, ಕೊನೆಯಲ್ಲಿ ಒಂದು ಮಾತು ಹೇಳಿದ್ದಾರೆ. ವರದಿಯ 66ನೆಯ ಪುಟದಲ್ಲಿ 'Totality of circumstances to govern each case' ಎಂಬ ಶಿರೋನಾಮೆಯಲ್ಲಿ "The problems of reorganisation vary from region to region" ಎಂದು ಬಹಳ ಅನುಕೂಲವಾಗಿ ಹೇಳಿದ್ದಾರೆ. ಇದನ್ನು ನೋಡಿದರೆ, ಅವರು ಮೊದಲು ಹೇಳಿರತಕ್ಕ ತತ್ವ ಇಡೀ ದೇಶವನ್ನು ವಿಭಜನೆ ಮಾಡಿದರೆ. ಅನ್ವಯವಾಗಿಲ್ಲ ಎನ್ನುವುದು ಹೊಳೆಯುತ್ತದೆ ಅವರು ಬಹಳ ಉಪಾಯವಾಗಿ ಹೇಳಿದ್ದಾರೆ. ಪ್ರತಿ ಸಂಸ್ಥಾನವನ್ನೂ ವಿಂಗಡಣೆಮಾಡುವಾಗ ಯಾವ ಯಾವ ತತ್ವವನ್ನು ಯಾವ ಯಾವ ಸಂಸ್ಥಾನಕ್ಕೆ ಅನ್ವಯಿಸಬೇಕೋ ಅದನ್ನು ಅನ್ವಯಿಸಬೇಕೇ ಹೊರತು, ಇಡೀ ಇಂಡಿಯಾ ದೇಶದ ಎಲ್ಲಾ ಸಂಸ್ಥಾನಗಳ ವಿಭಜನೆಯಲ್ಲಿ ಈ ಎಲ್ಲಾ ತತ್ವಗಳನ್ನು ಒಂದೇ ರೀತಿ ಅನ್ವಯಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ಕಾರಣದಿಂದ ಕರ್ಣಾಟಕಪ್ರಾಂತ ರಚನೆಯಾಗಬೇಕಾದ ಸಂದರ್ಭದಲ್ಲಿ ಭಾಷೆಯನ್ನೇ ಆಧಾರವಾಗಿಟ್ಟುಕೊಂಡಿದ್ದಾರೆ. ತೆಲಂಗಣ ಪ್ರಾಂತ್ಯವಾಗುವ ಕಾಲದಲ್ಲಿ ಮತ್ತೊಂದು ಆಧಾರ; ವಿದರ್ಭ ಸಂಸ್ಥಾನ ಪ್ರತ್ಯೇಕ ಸಂಸ್ಥಾನವಾಗಬೇಕೆಂದು ಹೇಳುವಾಗ ಮತ್ತೊಂದು ಆಧಾರ. ಕೊನೆಗೆ ಸಣ್ಣಪುಟ್ಟ ದೇಶಗಳಾದ ಹಿಮಾಚಲ ಪ್ರದೇಶ ಇತ್ಯಾದಿಯವುಗಳು ಆಗುವಾಗ exceptional cases ಎಂದು ಹೇಳುತ್ತಾ ಒಂದೊಂದು ಸಂಸ್ಥಾನವನ್ನು ಪುನರ್ವಿಂಗಡಣೆ ಮಾಡುವಾಗಲೂ, ಭಾಗಮಾಡುವಾಗಲೂ ಬೇರೆಬೇರೆ ವಾದಗಳನ್ನು ಮುಂದಿಟ್ಟು ಅದನ್ನು ಒಂದೊಂದು ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಒಟ್ಟಿನಲ್ಲಿ ಆ ವರದಿಯನ್ನು ಸಂಪೂರ್ಣವಾಗಿ ಓದುವುದಾದರೆ ಈ ಸಂಸ್ಥಾನಗಳೆಲ್ಲಾ ಹೆಚ್ಚುಕಡಮೆ ಭಾಷೆಯ ಮೇಲೆಯೇ ವಿಂಗಡಣೆಯಾಗಿವೆಯೆಂಬುದು ಅರ್ಥವಾಗುತ್ತದೆ. ನಾನಾದರೋ ಕರ್ಣಾಟಕ ಪ್ರಾಂತ್ಯ ರಚನೆಯಾಗುವುದು ಭಾಷೆಯ ಮೇಲೆ ಆಗುತ್ತಿರುವುದರಿಂದ, ಅದೇರೀತಿ, ಇಂಡಿಯಾ ದೇಶದ ಇತರ ಪ್ರಾಂತ್ಯಗಳೂ ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ವಿಂಗಡಣೆಯಾಗುತ್ತಿರುವುದರಿಂದ, ಈ ರೀತಿಯ ಭಾಷಾವಾರು ವಿಭಜನೆ ಸರಿಯಲ್ಲವೆಂದು ತಾತ್ವಿಕವಾಗಿ ವಿರೋಧಿಸಬೇಕೆಂದು ನಿಂತಿದ್ದೇನೆ. ಮತ್ತು ಇದೇ ಅಭಿಪ್ರಾಯವನ್ನು ನಾನು ಮೊದಲಿನಿಂದಲೂ ಉಳ್ಳವನಾಗಿದ್ದೇನೆ.

ಭಾಷೆಯನ್ನು ಆಧಾರವಾಗಿಟ್ಟುಕೊಂಡು ಪ್ರಾಂತ್ಯಗಳನ್ನು ವಿಭಜನೆ ಮಾಡಬೇಕು, ಅದುಸರಿ, ಎಂದು ಹೇಳುವವರು ಕೂಡ ಇದ್ದಾರೆ. ಅವರೂ ಅನೇಕ argument ಗಳನ್ನು ನಮ್ಮ ಮುಂದಿಟ್ಟಿದ್ದಾರೆ ಒಂದು ಸಂಸ್ಥಾನ ಒಂದು ಭಾಷೆಯಿಂದ ಕೂಡಿದ್ದಾದರೆ ಅನೇಕ ಜನರಿಗೆ ಅದರಿಂದ ಅನುಕೂಲವಿದೆ, ರಾಜ್ಯಾಡಳಿತದ ದಿನಚರಿ ವ್ಯವಹಾರವನ್ನು ತಿಳಿದುಕೊಳ್ಳುವುದಕ್ಕೆ ಒಂದು ಭಾಷೆ ಸಹಾಯಕವಾಗಿರುತ್ತದೆ ಪ್ರಜಾಪ್ರಭುತ್ವಕ್ಕೆ ಅದು ಅನುಗುಣವಾಗಿರುತ್ತದೆ ಎಂಬ ವಾದವನ್ನು ಅವರು ನಮ್ಮ ಮುಂದಿಟ್ಟಿದ್ದಾರೆ.

(ಶ್ರೀ ಡಿ. ದೇವರಾಜ ಅರಸ್).

ಒಂದು ವಿಧದಲ್ಲಿ ನಾನು ಆ ವಾದವನ್ನು ಒಪ್ಪಿದರೂ, ಅದರಿಂದ ಅನಾನುಕೂಲಗಳೇ ಹೆಚ್ಚಿವೆಯೆಂದು ಹೇಳಿ ನಾನು ಅಭಿಪ್ರಾಯವುಳ್ಳವನಾಗಿದ್ದೇನೆ. ಈ ಎಸ್. ಆರ್. ಸಿ. ವರದಿಯನ್ನು ಒಪ್ಪಬೇಕೆಂದು ವಾದಮಾಡಿದ ಅನೇಕ ಮಾಹನೀಯರು ಇಡೀ ಇಂಡಿಯಾ ದೇಶದ ಸಮಗ್ರದೃಷ್ಟಿಯಿಂದ ಇದನ್ನು ಯೋಚನೆ ಮಾಡಬೇಕು. ರಾಷ್ಟ್ರಾಭಿಮಾನವುಳ್ಳವರಾಗಿ ಇದನ್ನು ವಿರೋಧಿಸುವುದಕ್ಕೆ ಸಾಧ್ಯವಿಲ್ಲ. ಇದನ್ನು ಒಪ್ಪದೆ ಹೋದರೆ ರಾಷ್ಟ್ರಾಭಿಮಾನಕ್ಕೆ Nationalism ಅಥವಾ Patriotism ಎಂಬುದಕ್ಕೆ ಧಕ್ಕೆ ಬರುತ್ತದೋ ಎನ್ನುವಂತೆ ವಾದಿಸಿದರು. ಆದರೆ ನಾನು ಎಷ್ಟುಮಟ್ಟಿಗೆ ಯೋಚನೆ ಮಾಡಿದರೂ ಸಹ ಅವರ ವಾದದಲ್ಲಿ ಸತ್ವ ಕಾಣುವುದಿಲ್ಲ. ಭಾಷೆಯಮೇಲೆಯೇ ನಾವು ದೇಶವನ್ನು ವಿಭಜನೆ ಮಾಡಿದ್ದೇ ಆದರೆ ಕಾಲಕ್ರಮದಲ್ಲಿ ಇಂಡಿಯ ದೇಶದ ಭದ್ರತೆಗೆ ಅದೇ ಎಲ್ಲಿ ಭಂಗ ತರುತ್ತದೋ ಎಂಬ ಶಂಕೆ ಇದೆ. ಇದಕ್ಕೊಂದು ಉದಾಹರಣೆಯನ್ನು ನಾನು ತಮ್ಮಲ್ಲಿ ನಿವೇದಿಸಿಕೊಳ್ಳುವುದಾದರೆ, ಈಗ 5-6 ದಿವಸಗಳ ಹಿಂದೆ ನಾನು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ರೈಲ್ವೆ ಇಲಾಖೆಯಲ್ಲಿ ನಡೆಯುತ್ತಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಕೇಳಿಬಂದ ಒಂದು ಸಮಾಚಾರವನ್ನು ಹೇಳಬಯಸುತ್ತೇನೆ. ರೈಲ್ವೆ ನೌಕರರು ಕೆಲವರು ನನ್ನ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದವರು ತಮ್ಮ ಇಲಾಖೆಯಲ್ಲಿ ಆಡಳಿತ ರೀತಿ ಯಾವ ರೀತಿಯಿದೆಯೆಂಬುದನ್ನು ಪ್ರಸ್ತಾಪ ಮಾಡುತ್ತಾ, ಅಲ್ಲಿ ಹೇಗೆ ಇಂಟೆಗ್ರೇಷನ್ ಆದಮೇಲೆ ಪ್ರತಿಯೊಬ್ಬ ಅಧಿಕಾರಿಯೂ ಮನೆಯ ಜವಾನನಿಂದ ಮೊದಲುಗೊಂಡು, ಆಫೀಸಿನ ಗುಮಾಸ್ತನವರೆಗೆ ಯಾವುದೊಂದು ಕೆಲಸಕ್ಕೆ ನೇಮಕ ಮಾಡಬೇಕಾದರೂ ತಾನು ಮದ್ರಾಸಿನಿಂದ ಬಂದವನಾಗಿದ್ದರೆ ಕೇವಲ ತಮಿಳು ನಾಡಿನ ಜನರನ್ನೂ ತಾನು ತೆಲುಗು ದೇಶದವನಾಗಿದ್ದರೆ ಪ್ರತಿಯೊಂದಕ್ಕೂ ತೆಲುಗರನ್ನೆ ನೇಮಿಸಿಕೊಳ್ಳುತ್ತಿದ್ದಾರೆಂದು ತಿಳಿಯಬಂತು. ಹೀಗೆ ಆಯಾ ಭಾಷೆಯನ್ನು ಆಡತಕ್ಕ ಜನರನ್ನೇ ಅಧಿಕಾರಿಗಳು ನೇಮಿಸಿಕೊಳ್ಳುತ್ತಾ, ಇತರೆಯವರು ಎಷ್ಟೇ ನಿಷ್ಠೆಯಿಂದ ಕೆಲಸಮಾಡುತ್ತೇವೆಂದರೂ, ಅವರ ಮೇಲೆ ಅಭಿಮಾನ ತೋರಿಸುವುದಿಲ್ಲವೆಂದು ಆ ನೌಕರರು ತಮ್ಮ ಕಷ್ಟ ಸುಖಗಳನ್ನು ವಿವರಿಸುತ್ತಾ ಬಂದರು. ಇದೇ ರೀತಿ, ಶ್ರೀಮಾನ್ ವೀರಣ್ಣಗೌಡರೂ ಒಂದು ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಟ್ಟರು. ಯಾರೋ ಒಬ್ಬರು ಮಲೆಯಾಳದವರು ಕಾಶಿಗೆ ಹೋಗಿದ್ದಾಗ ಅಲ್ಲಿ ತರ್ಪಣ ಕೊಡುವುದಕ್ಕೂ ಮಂತ್ರ ಹೇಳುವುದಕ್ಕೂ ತಮ್ಮ ಮಲೆಯಾಳದವರೇ ಬೇಕೆಂದು ಅವರಿಗಾಗಿ ಅರ್ಧ ದಿವಸವೆಲ್ಲಾ ಹುಡುಕಿ ಕೊನೆಗೆ ಒಬ್ಬ ಮಲೆಯಾಳ ಶಾಸ್ತ್ರಿಗಳವರನ್ನೇ ಕರೆಸಿಕೊಂಡು ತರ್ಪಣ ಬಿಟ್ಟರಂತೆ. ಹೀಗೆ ರೀಜನಲಿಸಂ ಎಂಬುದು ನಮ್ಮಲ್ಲಿ ಬೆಳೆದರೆ ನಾವು ಅಭಿವೃದ್ಧಿಗೊಳ್ಳುತ್ತೇವೆಯೇ? ಆದ್ದರಿಂದ ಭಾಷೆಯ ಮೇಲೆ ಪ್ರಾಂತ್ಯ ವಿಂಗಡಣೆ ಮಾಡಿದರೆ ದೇಶದ ಅಭಿವೃದ್ಧಿ ಸಾಧನೆಯಾಗುತ್ತದೆಯೇ? ಇದು ಖಂಡಿತ ಇಂಡಿಯಾ ದೇಶದ ಭದ್ರತೆಗೆ ಅಷ್ಟು ಹಿತಕರವಲ್ಲ, ಕ್ಷೇಮಕರವಲ್ಲವೆಂದು ನನ್ನ ವಾದ.

ಒಬ್ಬ ಸದಸ್ಯರು.—ಆದರೆ ಯಾರು ಕೇಳುವವರು?

ಶ್ರೀ ಡಿ. ದೇವರಾಜ ಅರಸ್.—ನಮ್ಮ ವಾದವನ್ನು ಕೇಳದೇ ಭಾಷೆಯ ಆಧಾರದ ಮೇಲೆ ಈ ವರದಿ ಆಗಲೇ ಆಗಿದೆ; ರಾಷ್ಟ್ರ ಪುನರ್ವಿಂಗಡಣೆಯೂ ಆಗಿಬಿಟ್ಟಿದೆ. ಆದರೆ ನಾನು ಈ ವಿಷಯದಲ್ಲಿ ಖಚಿತವಾದ ಅಭಿಪ್ರಾಯವುಳ್ಳವನಾಗಿರುವುದರಿಂದ, ಅದನ್ನು ಹೇಳಿಯೇ ತೀರಬೇಕೆಂದು ನಿಂತಿದ್ದೇನೆ. ನಿಜ, ನಾನು ಹೇಳಿದರೂ ಕೂಡ ಆಗತಕ್ಕುದು ನಿಲ್ಲುವುದಲ್ಲ. ಆದರೂ ಮುಂದೆ ಈ ಪ್ರಜಾಪ್ರಭುತ್ವದಲ್ಲಿ ಪುನಃ ನಾನು ಹೇಳಿದ್ದೇ ಸರಿಯೆಂದು ಅಭಿಪ್ರಾಯಕ್ಕೆ ಬರುವುದೂ ಹೆಚ್ಚೇನೂ ಅಲ್ಲ. ಆಶ್ಚರ್ಯವೇನೂ ಅಲ್ಲ.

ಶ್ರೀಮಾನ್ ಹನುಮಂತಯ್ಯನವರು ಪ್ರಜಾಭಿಪ್ರಾಯದ ವಿಚಾರವಾಗಿ ಒಂದು ವಾದ ಹಿಡಿದರು. ಕರ್ಣಾಟಕ ಪ್ರಾಂತ್ಯವಾಗಬೇಕೆಂದು ಕೇಳಿ ಬಹುಮತ ಅಭಿಪ್ರಾಯವಿದೆ, ದೇಶದಲ್ಲಿ ಅತ್ತ ಒಂದು ಕಡೆ ಒಂದು ಕೋಟಿ ಕನ್ನಡಿಗರು ಕರ್ಣಾಟಕ ಪ್ರಾಂತ್ಯವಾಗಬೇಕೆಂದು ಹೇಳುತ್ತಾರೆ, ಇತ್ತ ಮೈಸೂರು ದೇಶದಲ್ಲಿ ಅರ್ಧ ಭಾಗ ಅಥವಾ ಸ್ವಲ್ಪ ಹೆಚ್ಚು ಕಡಿಮೆ (ಅರ್ಧಕ್ಕಿಂತ ಹೆಚ್ಚೆಂತಲೇ ಇಟ್ಟುಕೊಳ್ಳೋಣ) ಜನರೂ ಕೂಡ ಕರ್ಣಾಟಕ ಪ್ರಾಂತ್ಯ ಬೇಕೆಂದು ಹೇಳುತ್ತಾರೆ, ಹೀಗಿರುವಾಗ ನಾವು ಹೇಗೆ ಅವರ ಅಭಿಲಾಷೆಯನ್ನು ತಳ್ಳಿಹಾಕುವುದಕ್ಕೆ ಸಾಧ್ಯ ಎನ್ನುತ್ತಾರೆ. ಆ ಮಾತನ್ನು ಒಂದು ಸಾರಿಗೆ ಒಪ್ಪೋಣ. ಆದರೆ, "ಬಳ್ಳಾರಿಯ ವಿಚಾರ ಬಂದಾಗ, ನಾನು ಪ್ರತಿಯೊಬ್ಬ ಸದಸ್ಯರೂ ಹೇಳಿದ ಅಭಿಪ್ರಾಯವನ್ನೂ ಕೇಳಿದೆ. ಮಿಕ್ಕ ಎಲ್ಲ ವಿಷಯಗಳನ್ನೂ ಮಾತನಾಡಿ ಬಳ್ಳಾರಿಯ ವಿಷಯಕ್ಕೆ ಬಂದಾಗ ಎಲ್ಲರೂ ಬಳ್ಳಾರಿ ನಮಗೇ ಇರಬೇಕು, ನಾವೆಲ್ಲರೂ ಏಕ ಕಂಠದಿಂದ ಹೇಳುತ್ತಿದ್ದೇವೆ, ಇದೇ ಬಹುಮತ ಹಾಗೂ ಸರ್ವಾನುಮತವೆಂದು ಹೇಳುವಾಗ ಆಂಧ್ರರಿಗೆ ಅದನ್ನು ಕೊಡುವುದು ಹೇಗೆ ಸಾಧ್ಯ" ವೆಂದು ವಾದ ಮಾಡಿದರು.

ಶ್ರೀ ಕೆ. ಹನುಮಂತಯ್ಯ.—ನಾನು ನನ್ನ ವಾದವನ್ನು ಹಾಗೆ ಮಾಡಲಿಲ್ಲ. ನಾನು ಹೇಳಿದ್ದು, ಈಗ ಆಂಧ್ರದಲ್ಲಿರತಕ್ಕ ಸುಮಾರು 2—2½ ಕೋಟಿ ಜನರು ಬಳ್ಳಾರಿಯು ಆಂಧ್ರಕ್ಕೆ ಸೇರಬೇಕೆಂದು ಹೇಳುತ್ತಿದ್ದಾರೆ. ಇತ್ತಕಡೆ ಕರ್ಣಾಟಕದವರಾಗಿ 2—2½ ಕೋಟಿ ಜನ ಬಳ್ಳಾರಿ ಈಗಿರುವಹಾಗೆಯೇ ಇರಬೇಕೆಂದು ಹೇಳುತ್ತಾರೆ. ಹೀಗಿರುವಾಗ ಇಬ್ಬರ ಅಭಿಪ್ರಾಯವೂ ಬೇಡ; ಆ ನಾಲ್ಕು ತಾಲ್ಲೂಕುಗಳಲ್ಲಿರುವ ಜನರು ಏನು ಹೇಳುತ್ತಾರೆಯೋ ಅದನ್ನು ಕೇಳಿ ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡಿ ಎಂದು ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ಬಳ್ಳಾರಿಯ ವಿಷಯದಲ್ಲಿ ಮಾತ್ರ ಆ ನಾಲ್ಕು ತಾಲ್ಲೂಕುಗಳ ಜನರಿಗೆ Self-determination ಹಕ್ಕನ್ನು ಕೊಡಿ, ಮೈಸೂರಿನವರಿಗೆ ಮಾತ್ರ ಕರ್ಣಾಟಕದ ಪ್ರಶ್ನೆಯ ವಿಷಯದಲ್ಲಿ Self-determination ಹಕ್ಕನ್ನು ಕೊಡುವುದು ಬೇಡವೆಂತಲೇ?

ಶ್ರೀ ಕೆ. ಹನುಮಂತಯ್ಯ.—ಮೈಸೂರಿನವರಿಗೂ Self-determination ಹಕ್ಕು ಇದ್ದೇ ಇದೆ. ಅದಕ್ಕಾಗಿಯೇ ಈ ನಿರ್ಣಯವನ್ನು ತಮ್ಮ ಮುಂದಿಟ್ಟಿರುವುದು. ಇದಕ್ಕೆ ಬಹುಮತ ಬಂದರೆ ಒಂದರ್ಥವಾಗುತ್ತದೆ, ಇಲ್ಲದಿದ್ದರೆ ಇನ್ನೊಂದು ಅರ್ಥವಾಗುತ್ತದೆ.

ಒಬ್ಬ ಸದಸ್ಯರು.—ಅದಕ್ಕೆಲ್ಲಾ ಆಗಲೇ ಸರಿಮಾಡಿದ್ದೀರಲ್ಲಾ!

ಶ್ರೀ ಡಿ. ದೇವರಾಜ ಅರಸ್.—ಬಹುಮತ ಬರುತ್ತದೆಂಬುದೂ ನನಗೆ ಗೊತ್ತು. ಆದರೂ ಮಾನ್ಯ ಮುಖ್ಯ ಮಂತ್ರಿಗಳು ಕರ್ಣಾಟಕ ಪ್ರಾಂತ್ಯದ ವಿಷಯದಲ್ಲಿ ಹೇಳಿದಂತೆಯೇ ಬಳ್ಳಾರಿಯ ವಿಷಯದಲ್ಲಿಯೂ ಬಹುಮತದ ಅಭಿಪ್ರಾಯದಮೇಲೆ ವಾದ ಹೂಡಿದ್ದರೆ ನಾನು ಈ ಪ್ರಶ್ನೆಯನ್ನೇ ಎತ್ತುತ್ತಿರಲಿಲ್ಲ. ಬಹುಶಃ ಈ ಸಂದರ್ಭದಲ್ಲಿ ಮಾತ್ರ ಅವರು ಮರೆತಂತೆ ಕಾಣು

ತ್ತದೆ. ಬಳ್ಳಾರಿಯ ಮೂರು ತಾಲ್ಲೂಕುಗಳ ವಿಚಾರದಲ್ಲಿಯೂ ಅದೇ ರೀತಿ ಬಹುಮತದ ವಾದವನ್ನೇ ಹೂಡುವುದಾದರೆ, ಈ ಪ್ರಶ್ನೆ ಸದ್ಯಕ್ಕೆ ಆಂಧ್ರ ಸರ್ಕಾರದವರಿಗೂ, ಈಗಿನ ಮೈಸೂರು ಸರ್ಕಾರದವರಿಗೂ ಸೇರಿದ್ದಾಗಿದೆ ಅಷ್ಟೆ. ಆಂಧ್ರ ಜನ ಎರಡು ಕೋಟಿ ಇದ್ದು ಅವರು ಬಳ್ಳಾರಿ ಬೇಕೆಂದು ಹೇಳುತ್ತಿದ್ದಾರೆ. ಮೈಸೂರಿನ ಜನ ಒಂದು ಕೋಟಿ ಇದ್ದು ಬಳ್ಳಾರಿ ತಮಗೆ ಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ, ಈ ವಿಷಯದಲ್ಲಿ ಜನಾಭಿಪ್ರಾಯದ ಮೇಲೆ ಹೋಗುವುದಾದರೆ, ಆ ಎರಡು ಕೋಟಿ ಜನರ ವಾದವನ್ನು ಕೇಳಬೇಕು ಅಲ್ಲವೆ? ಆದ್ದರಿಂದ ಬಳ್ಳಾರಿ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ಒಂದು ವಾದ, ಕರ್ಣಾಟಕ ಪ್ರಾಂತದ ವಿಷಯ ಪ್ರಸ್ತಾಪ ಮಾಡಬೇಕಾದರೆ ಒಂದು ವಾದ ಹಿಡಿಯುವುದು ಸರಿಯಲ್ಲ.

ಶ್ರೀ ಎಚ್. ಸಿದ್ದವೀರಪ್ಪ (ಗೃಹ ಮಂತ್ರಿಗಳು).—ಅವರು ಹೇಳಿದ್ದರಲ್ಲಿ ಅಸಮಂಜಸತೆಯೇನಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಯಾವುದೂ ಅಸಮಂಜಸವಲ್ಲ. ನೀವಿಲ್ಲಿ ಕುಳಿತಿರುವುದೂ ಒಂದು accident.

ಶ್ರೀ ಎಚ್. ಸಿದ್ದವೀರಪ್ಪ.—ನೀವಲ್ಲಿ ನಿಂತಿರುವುದೂ accident ಏ?

Mr. SPEAKER.—May I request the Hon'ble Member to complete it early?

ಶ್ರೀ ಡಿ. ದೇವರಾಜ ಅರಸ್.—ನನಗೆ ಸ್ವಲ್ಪ ಹೆಚ್ಚು ಕಾಲಾವಕಾಶ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನೊಂದು ವಾದವನ್ನು ನಮ್ಮ ಮಾನ್ಯ ಪಟ್ಟಾಭಿರಾಮನ್‌ರವರು ಮುಂದಿಟ್ಟರು. ಎರಡು States ಆಗಬೇಕೆಂದು ವಾದಮಾಡಿದರೆ ಇಂಡಿಯಾ ದೇಶದ ಭದ್ರತೆಗೆ ತೊಂದರೆಯಾಗಬಹುದು, ಈ ವರದಿಯನ್ನು ಎಲ್ಲರೂ ಒಮ್ಮನಸ್ಸಿನಿಂದ ಒಪ್ಪಬೇಕು, ಇಲ್ಲದಿದ್ದರೆ ಭಾರತದ ಸಮಗ್ರ ದೃಷ್ಟಿಯಿಂದ ಸರಿಹೋಗುವುದಿಲ್ಲವೆಂದು ಹೇಳಿ ಅದನ್ನು ಸಮರ್ಥನೆ ಮಾಡುವುದಕ್ಕೆ ಅವರು ಬಹಳವಾಗಿ ಪ್ರಯತ್ನಪಟ್ಟರು. ನಾನೂ ತೆರದ ಮನಸ್ಸಿನಿಂದ ಅವರ ವಾದವನ್ನು ಬಹಳ ಕುತೂಹಲದಿಂದ ಕೇಳಿದೆ. ಆದರೂ, ಎರಡು ಪ್ರಾಂತ್ಯವಾಗಬೇಕೆಂದು ವಾದಮಾಡಿದ ಕೂಡಲೆ ಇಂಡಿಯಾ ದೇಶದ ಭದ್ರತೆಗೆ ಭಂಗ ಬರುತ್ತದೆಂದು ಯಾವ ತರ್ಕವನ್ನನುಸರಿಸಿ ವಾದಮಾಡುತ್ತಾರೋ ನನಗೆ ಗೊತ್ತಿಲ್ಲ ಈ ವರದಿಯಲ್ಲೇ ವಿದರ್ಭವಾಗಬಹುದು, ತೆಲಂಗಣವಾಗಬಹುದು, ಕೇರಳ ಪ್ರಾಂತ್ಯವಾಗಬಹುದು ಎಂದೂ ಸಣ್ಣ ಪ್ರಾಂತ್ಯಗಳೂ ಆಗಬಹುದೆಂದೂ ಹೇಳಿದೆ, ದೊಡ್ಡ ಪ್ರಾಂತ್ಯಗಳೂ ಆಗಬಹುದೆಂದೂ ಹೇಳಿದೆ. ಅಂದಮೇಲೆ ಕರ್ಣಾಟಕದಲ್ಲಿ ಎರಡು ಪ್ರಾಂತ್ಯಗಳಾಗಬೇಕೆಂದು ಹೇಳಿದ ಮಾತ್ರಕ್ಕೇ ಇಂಡಿಯಾ ದೇಶದ ಭದ್ರತೆ ಅಲ್ಲಾಡಿ ಹೋಗುತ್ತದೆಂಬುದರಲ್ಲಿ ಎಷ್ಟರಮಟ್ಟಿನ ನಿಜಾಂಶವಿದೆಯೆಂಬುದನ್ನು ಈ ಸಭೆಯವರೇ ಯೋಚನೆಮಾಡಬೇಕು. ಅದರಲ್ಲೂ ಎರಡು ಪ್ರಾಂತ್ಯವಾಗಬೇಕೆಂದು ಹೇಳಿದ ಕೂಡಲೇ ಅಂಥವರಲ್ಲಿ ರಾಷ್ಟ್ರಾಭಿಮಾನ ಬಹಳ ಕಡಮೆಯಿದೆಯೆಂದು ಏಕೀಕರಣ ಅಭಿಪ್ರಾಯವುಳ್ಳಂಥ ಜನ ಹೇಳುವುದಾದರೆ, ನಾನವರಿಗೆ ಭರವಸೆ ಕೊಡುತ್ತೇನೆ, ಅಂಥವರಲ್ಲಿ ರಾಷ್ಟ್ರಾಭಿಮಾನ ಮಿಕ್ಕ ಯಾರಿಗಿಂತಲೂ ಕಡಮೆಯಿಲ್ಲ, ಹೆಚ್ಚಾಗಿಯೇ ಇದೆಯೆಂದು ಹೇಳುತ್ತೇನೆ.

ಇನ್ನೊಂದು ಬಹಳ ಪ್ರಾಮುಖ್ಯವಾದ ವಾದವಿದೆ. ಅದೇನೆಂದರೆ—ಈಗ ಯಾರು ಯಾರು ಎರಡು ಕರ್ಣಾಟಕ ಪ್ರಾಂತ್ಯಗಳಾಗಲಿ ಎಂದು ಹೇಳುತ್ತಿದ್ದಾರೋ ಅವರೆಲ್ಲರೂ ಒಂದು ಸೆಲ್‌ಫಿಷ್ ಮೋಟೀವ್‌ನಿಂದ ಈ ರೀತಿಯಾಗಿ ಹೇಳುತ್ತಿದ್ದಾರೆ ಎನ್ನುವುದು.

ಅಧ್ಯಕ್ಷರು.—ಈವರೆಗೂ ಆ ರೀತಿಯಾಗಿ ಯಾರೂ ಆ ವಿಚಾರವನ್ನು ಹೇಳಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಶ್ರೀ ಪಿ. ಆರ್. ರಾಮಯ್ಯನವರು ತಮ್ಮ ಭಾಷಣದಲ್ಲಿ ಹಾಗೆ ಹೇಳಿದ್ದಾರೆ. ಒಂದು ಕರ್ಣಾಟಕ ಪ್ರಾಂತ್ಯವಾಗುವುದು ಬೇಡ ಎನ್ನತಕ್ಕವರೇನೋ ಹಾಗೆ ಒಂದು ಸೆಲ್‌ಫಿಷ್ ಮೋಟೀವ್‌ನಿಂದಲೇ ಹೇಳಿರುತ್ತಾರೆಂದು ಇಟ್ಟುಕೊಳ್ಳೋಣ. ಆದರೆ ಈ ದಿವಸ ಮೈಸೂರು ಒಂದು ಪ್ರತ್ಯೇಕವಾಗಿ ಉಳಿಯುವುದೇನೂ ಬೇಡ. ಇದರ ಜೊತೆಗೆ ಆ ಹೊರಗಡೆಯಿರತಕ್ಕ ಕನ್ನಡ ಪ್ರಾಂತ್ಯಗಳೆಲ್ಲಾ ಸೇರಿ ಒಂದೇ ಆಗಬೇಕೆಂದು ಹೇಳುತ್ತಿದ್ದಾರಲ್ಲಾ—ಈ ವಾದದ ಅರ್ಥವಾದರೂ ಏನು? ಈಗ ಆ ಹೊರಗಡೆಯಿರತಕ್ಕಂಥ ಕನ್ನಡಿಗರಿಗೆಲ್ಲಾ ಬಹಳ ತೊಂದರೆಯಿದೆ, ಈಗಿರತಕ್ಕ ಪ್ರಾಂತ್ಯ ಸರ್ಕಾರಗಳು ಅವರನ್ನು ಕಡೆಗಣ್ಣಿನಿಂದ ನೋಡುತ್ತಿದ್ದಾರೆ; ಕನ್ನಡಿಗರಿಗೆ ಅಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲ. ಆದಕಾರಣ ನಾವೀಗ ಎಲ್ಲಾ ಕನ್ನಡಿಗರೂ ಇರತಕ್ಕ ಪ್ರದೇಶಗಳನ್ನು ಒಟ್ಟುಗೂಡಿಸಿ ಒಂದು ಕರ್ಣಾಟಕಪ್ರಾಂತ್ಯ ನಿರ್ಮಾಣಮಾಡೋಣ, ಇದು ಆಗಲೇಬೇಕು, ಎಂದು ಹೇಳುತ್ತಿರುವುದೂ ಸಹ ಒಂದು ಸ್ವಾರ್ಥ ಹೌದೋ ಅಥವಾ ಅಲ್ಲವೋ ಅನ್ನುವುದನ್ನು ಆ ನಮ್ಮ ಭೀಮಪ್ಪ ನಾಯಕರೇ ಹೇಳಲಿ! ಅದೇ ರೀತಿ ಅಂದರೆ ತಾವುಗಳು ಈ ದಿವಸ ಯಾವ ರೀತಿ ಒಂದು ಕರ್ಣಾಟಕವಾಗಬೇಕೆಂದು ಕೇಳುತ್ತಿದ್ದೀರೋ ಹಾಗೆ ಇನ್ನೊಂದು ಪಾರ್ಟಿಯವರು ನಮ್ಮ ಮೈಸೂರು ಈಗ ಯಾವ ರೀತಿಯಲ್ಲಿದೆಯೋ ಹಾಗೆಯೇ ಇರಲಿ, ಆ ಹೊರಗಡೆ ಇರತಕ್ಕ ಕನ್ನಡಿಗರೆಲ್ಲಾ ಸೇರಿ ಅವರೇ ಒಂದು ಪ್ರತ್ಯೇಕ ಪ್ರಾಂತ್ಯಮಾಡಿಕೊಳ್ಳಲಿ ಎಂದು ಹೇಳುವುದರಲ್ಲಿ ತಪ್ಪೇನಿದೆ? ಹಾಗೆ ಈ ಮೈಸೂರು ಕರ್ಣಾಟಕದಲ್ಲಿ ಸೇರಿಹೋದರೆ ಈ ಮೈಸೂರಿನವರ ಹಕ್ಕಿಗೆ ಧಕ್ಕೆ ಬರುತ್ತದೆಂದು ಇದು ಹೀಗೆಯೇ ಇರಲಿ ಎಂದು ಹೇಳುತ್ತಿರುವುದೂ ಒಂದು ಸ್ವಾರ್ಥವೇ?

ಇನ್ನು ಈ S.R.C. ವರದಿಯಲ್ಲೇ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಆ ಸಮಿತಿಯವರೇ ಕೆಲವು ಕಾರಣಗಳನ್ನು ಸಮರ್ಥನೆಮಾಡಿದ್ದಾರೆ. ಈ ಕಾರಣಗಳಲ್ಲಿ ಆ ಜಾತಿ ವಿಚಾರವನ್ನೂ ಸಹ ಒಂದು ಅಂಶವಾಗಿ ಸೇರಿಸಿಕೊಂಡು ವಾದಮಾಡಿರುತ್ತಾರೆ.

ಅಧ್ಯಕ್ಷರು.—ಆ ವಿಚಾರದಲ್ಲಾಗಲೇ ಅನೇಕ ಸದಸ್ಯರು ಮಾತನಾಡಿರುತ್ತಾರೆ. ಆದಕಾರಣ ನೀವೀಗ ಆ ವಿಚಾರವನ್ನು ಕೈಬಿಟ್ಟು ನಿಮ್ಮ ವಾದವನ್ನು ಮುಂದುವರಿಸುವುದು ಉತ್ತಮ.

ಶ್ರೀ ಡಿ. ದೇವರಾಜ ಅರಸ್.—ಅದೇಕೆ ಸ್ವಾಮಿ? ನಾನು ಒಕ್ಕಲಿಗನೂ ಅಲ್ಲ; ಲಿಂಗಾಯಿತನೂ ಅಲ್ಲ. ಆ ವಿಚಾರವನ್ನು ಏಕೆ ಕೈಬಿಡಬೇಕು? ಹೋಗಲಿ. ನಿನ್ನೆ ದಿವಸ ಮಾತನಾಡುತ್ತ ಶ್ರೀಯುತ ಕೆ. ಪಟ್ಟಾಭಿರಾಮನ್‌ಅವರು 'ಈಗಿರತಕ್ಕಂಥ ಮೈಸೂರು ಹೀಗೆಯೇ ಉಳಿಯಬಾರದು' ಎಂದು ಭಾಷಣಮಾಡಿದ್ದಾರೆ. ಹಿಂದೆ ಮಂತ್ರಿಗಳಾಗಿದ್ದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಕರ್ಣಾಟಕಪ್ರಾಂತ್ಯ ನಿರ್ಮಾಣವನ್ನು ಒಪ್ಪಿಕೊಂಡಿದ್ದಾರೆ. ಈಗಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಒಪ್ಪಿಕೊಂಡಿದ್ದಾರೆ. ಇದೇ ರೀತಿ ಹಿಂದೆ ಎಷ್ಟೋ ಜನರು ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದ್ದರೂ ಈ ದಿವಸ ಅವರು ಈ ಪ್ರಶ್ನೆಯನ್ನು ವಿರೋಧಿಸುತ್ತಿರುವುದಕ್ಕೆ ಈ ಘಿಸಿಪ

(ಶ್ರೀ ಡಿ. ದೇವರಾಜ ಅರಸ್.)

ರಸ್ ಟೆಂಡೆರ್ಕ್‌ಸೀಸ್ ಮತ್ತು ಸೆಲ್‌ಫಿಷ್ ಮೋಟೀವ್ಸ್ ? ಸೆಕ್ಷನಲ್ ಫೀಲಿಂಗ್‌ಗಳೇ ಕಾರಣ ಎಂದು ಹೇಳಿ ಈಗ ಮೈಸೂರು ಯಾವ ರೀತಿಯಿದೆಯೋ ಅದೇ ರೀತಿಯಲ್ಲಿ ಇದು ಮುಂದೆಯೂ ಉಳಿಯಬೇಕೆಂದು ವಾದಿಸುತ್ತಿರುವುದು ನ್ಯಾಯವಾದುದಲ್ಲ' ಎಂದು ಹೇಳಿದರು. ಆದರೆ ನಾನು ಈಗ ಇರತಕ್ಕ ಮೈಸೂರು ಹೀಗೇ ಇರಲಿ ಎಂದು ಹೇಳುತ್ತಿದ್ದಾಗ್ಯೂ ಅವರು ಹೇಳಿರತಕ್ಕ ಭಾವನೆಗಳು ನನಗೆ ಒಂದೂ ಇಲ್ಲ.

The known devil is better than the unknown.

ಅವರ ಸೆಂಟಿಮೆಂಟ್ ಏನಾದರೂ ಹಾಗಿದ್ದರೆ ಅದು—

From the frying pan to the fire ಹಾಗೂ ಆಗಬಹುದು. ನನ್ನ ಅಭಿಪ್ರಾಯದಲ್ಲಿ ನನಗೆ ಹೇಗಿದ್ದರೂ ಅಂಥ ಹೆದರಿಕೆಗಳೊಂದೂ ಇಲ್ಲ. ಮೈಸೂರು ಹೀಗೆ ಇದ್ದರೂ ನನಗೇನೂ ಈ ಒಕ್ಕಲಿಗ ಜನಾಂಗದವರಿಂದ ಯಾವ ಭಯವೂ ಇಲ್ಲ. ಅಥವಾ ಕರ್ಣಾಟಕ ಪ್ರಾಂತ್ಯವಾಗಿ ಅಲ್ಲಿ ಲಿಂಗಾಯಿತ ಕೋಮಿನವರಿದ್ದಾಗ್ಯೂ ಅವರಿಂದಲೂ ಸಹ ನನಗೆ ಯಾವ ಭಯವೂ ಇಲ್ಲ—ಹೆದರಿಕೆಯೂ ಇಲ್ಲ. ದೊಡ್ಡ ಕರ್ಣಾಟಕವಾದರೆ ಆಗ ಲಿಂಗಾಯಿತರೆಲ್ಲಾ ನನ್ನನ್ನು ಕಾಡಿಗೆ ಓಡಿಸುತ್ತಾರೆಂಬ ಯಾವ ಅಂಥ ಹೆದರಿಕೆಯೂ ನನಗಿಲ್ಲ. ಇದರಲ್ಲಿ ಇನ್ನೂ ಒಂದು ಮಾತಿದೆ—

"It is not unnatural in these circumstances for those who expect to be reduced in their relative position to view of the proposed change with disfavour"

ಎಂದು ಹೇಳಿದ್ದಾರೆ.

ಇದರಲ್ಲಿ ಆ ರೀತಿ ಹೇಳಿ, ಅದರಿಂದ ಏನೊಂದು ಇಕ್ಷಫರೆನ್ಸ್ ಬರುತ್ತದೆಂಬ ಬಗ್ಗೆ ಅವರು ಏನು ಹೇಳಿದ್ದಾರೆಂದರೆ:—

"There is as much reason to expect that a more balanced communal distribution will be conducive to good government as there is for fears or apprehensions."

ನಾನು ಕೇಳುತ್ತೇನೆ—ಈ ಕರ್ಣಾಟಕ ಪ್ರಾಂತ್ಯವಾದರೇನೇ ಹೀಗೇ ಆಗುತ್ತದೆ ಅನ್ನುವಂಥ ಒಂದು ಇಕ್ಷಫರೆನ್ಸ್‌ನ್ನು ಅವರು ಡ್ರಾ ಮಾಡಿದ್ದಾರೆ. ನಾಳೆ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗುವುದರಿಂದ ಆ ಪ್ರಾಂತ್ಯದಲ್ಲಿ ಈ ಒಕ್ಕಲಿಗರ ಸಂಖ್ಯೆ ಕಮ್ಮಿಯಾಗುತ್ತದೆ ಎನ್ನುವ ಒಂದು ಶಂಕೆ ಅವರಲ್ಲಿ ಇದ್ದುದರಿಂದಲೇ 'ನಾಳೆ ಆ ಭಾವಿ ಕರ್ಣಾಟಕದಲ್ಲಿ ಲಿಂಗಾಯಿತರ ಸಂಖ್ಯೆ ಜಾಸ್ತಿ ಆಗುತ್ತದೆ, ಆದರೆ ಇಂಥ ಸಣ್ಣ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸರಿಯಾದದ್ದಲ್ಲ' ಎಂದು ತಿಳಿಸಿದ್ದಾರೆ. ಮುಂದೆ ವಾದ ಮಾಡುತ್ತ ಈ ವ್ಯತ್ಯಾಸವನ್ನು ಬ್ಯಾಲನ್ಸ್ ಮಾಡುವುದಕ್ಕೆ ಕೆಲವು ಪ್ರಾಪೊಸಿಷನ್‌ಗಳನ್ನು ಮಾಡಿ ಈ ಹರಿಜನರ ಸಂಖ್ಯೆ ಮತ್ತು ಇತರ ಕೋಮುಗಳ ಸಂಖ್ಯೆಗಳ ವಿಚಾರವನ್ನೂ ಸಹ ತಿಳಿಸಿದ್ದಾರೆ.

Mr. SPEAKER.—But in practical politics it has not happened so. It will happen otherwise.

ಶ್ರೀ ಡಿ. ದೇವರಾಜ ಅರಸ್.—ನಾನೂ ಕೂಡ ಈಗ ಅದೇ ವಿಚಾರವನ್ನೇ ಹೇಳುವುದಕ್ಕೆ ಬರುತ್ತಿದ್ದೇನೆ. ಕರ್ಣಾಟಕ ಪ್ರಾಂತ್ಯವಾದರೆ ಯಾವ ಅನರ್ಥವೂ ಆಗುವುದಿಲ್ಲ. ಆದರೆ ಈ ದಿವಸ ಇರತಕ್ಕಂಥ ಮೈಸೂರು ಹೀಗೆ ಉಳಿದರೆ ಇಲ್ಲಿರತಕ್ಕಂಥ ಒಂದು ಮೆಜಾರಿಟಿ ಕೋಮಿನ ಜನರೇ ಎಲ್ಲಾ ಪ್ರಾತಿನಿಧ್ಯವನ್ನೂ ಮತ್ತು ಸ್ಥಾನಗಳನ್ನೂ ಆಕ್ರಮಿಸಿಬಿಡುತ್ತಾರೆಂದು ಹೇಳುವುದೂ ಸಹ ಸರಿಯಾದದ್ದಲ್ಲ.

ಸದಸ್ಯರು—ಯಾರು ಆ ರೀತಿ ಹೇಳಿದ್ದಾರೆ ?

ಶ್ರೀ ದೇವರಾಜ್ ಅರಸ್.—ತಾವುಗಳು ಕೇಳುತ್ತಿರುವಂತೆ ದೊಡ್ಡದಾಗಿ ಒಂದೇ ಪ್ರಾಂತ್ಯವಾಗಬೇಕೆಂದು ಹೇಳುವುದಕ್ಕೂ ಅಥವಾ ಬೇರೊಂದು ಪಾರ್ಟಿಯವರು ಎರಡು ಪ್ರಾಂತ್ಯಗಳಾದರೆ ಉತ್ತಮ ಎಂದು ಹೇಳುತ್ತಿರುವುದಕ್ಕೂ ಹೀಗೆ ಈ ಎರಡು ವಿಚಾರಗಳ ಬಗ್ಗೆಯೂ ಒಂದು ರ್‍ಯಾಷನಲ್ ಬೇಸಿಸ್ ಮೇಲೆ ಪರ್ಯಾಲೋಚನೆ ಮಾಡುವುದಕ್ಕೆ ಕಾರಣಗಳಿದ್ದೇ ಇವೆ. ಈಗ ಎರಡು ಪ್ರಾಂತ್ಯಗಳಾದರೆ ಈ ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್‌ಗೆ ಚೆನ್ನಾಗಿರುತ್ತದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಇದೂ ಕೂಡ ಒಂದು ಒಳ್ಳೆಯ ಅಭಿಪ್ರಾಯವೇ ಹೌದು. ಈಗ ರಾಜ್ಯಗಳು ಪುನರ್ವಿಂಗಡಣೆ ಆದರೆ ಈಗಿರತಕ್ಕಂಥ ತಾಲ್ಲೂಕುಗಳ ಮತ್ತು ಜಿಲ್ಲೆಗಳ ಏರಿಯಾ ಬದಲಾವಣೆಯಾಗಬೇಕಾಗುತ್ತದೆ. ಎಂದು ಆ ಸಮಿತಿಯವರೇ ಹೇಳಿದ್ದಾರೆ. ಆದರೆ ಆ ದಿವಸ ನಮ್ಮ ಮೈಸೂರು ಸಂಸ್ಥಾನದಲ್ಲಿರತಕ್ಕ ಪ್ರತಿಯೊಂದು ತಾಲ್ಲೂಕಿನ ಮತ್ತು ಜಿಲ್ಲೆಯ ವಿಸ್ತೀರ್ಣ ಮತ್ತು ಇವುಗಳನ್ನು ರಚನೆ ಮಾಡಿರತಕ್ಕಂಥ ವಿಧಾನವನ್ನು ನಾವು ನೋಡುವುದಾದರೆ ಈಗ ಇವುಗಳು ಇರತಕ್ಕ ರೀತಿಯಲ್ಲೇ ಇದ್ದರೆ ಬಹಳ ಚೆನ್ನಾಗಿರುತ್ತದೆ. ಮತ್ತು ಈ ರೀತಿ ಇರುವುದೇ ಒಂದು ಸಮಂಜಸವಾದ ಮಾರ್ಗ ಎಂಬುದು ಕಂಡುಬರುತ್ತದೆ. ಇದರಿಂದ ತಾಲ್ಲೂಕುಗಳ ಕೆಲಸಕಾರ್ಯಗಳೆಲ್ಲ ಅಚ್ಚುಕಟ್ಟಾದ ರೀತಿಯಲ್ಲಿ ನಡೆಯಲು ಈಗ ಒಂದು ಸುಗಮವಾದ ಅವಕಾಶವಿದೆ. ಹೀಗಿರುವುದನ್ನು ನಾಳೆ ಬದಲಾಯಿಸಿ 3-4 ತಾಲ್ಲೂಕುಗಳನ್ನು ಒಂದು ತಾಲ್ಲೂಕನ್ನಾಗಿಯೂ, 2—3 ಜಿಲ್ಲೆಗಳನ್ನು ಒಂದು ಜಿಲ್ಲೆಯನ್ನಾಗಿಯೂ ಪರಿವರ್ತನೆ ಮಾಡಿದರೆ ಆಗ ಆ ಪ್ರದೇಶದಲ್ಲಿರತಕ್ಕ ಜನರೆಲ್ಲರ ಕ್ಷೇಮಾಭಿವೃದ್ಧಿಯ ಕಾರ್ಯಗಳು ಸರಿಯಾಗಿ ನಡೆಯುತ್ತದೆಯೇ ಅಥವಾ ಇಲ್ಲವೇ ಎನ್ನುವುದನ್ನೂ ಪರ್ಯಾಲೋಚನೆ ಮಾಡಬೇಕಾದದ್ದು ಅಗತ್ಯ. ಇದರಲ್ಲಿ ಎರಡು ವಿಷಯಗಳು ಬಹಳ ದಿವಸಗಳಿಂದಲೂ ಇದ್ದೇ ಇವೆ. ಈ ವರದಿಗಾರರೂ ಅದನ್ನೂ ಹೇಳಿದ್ದಾರೆ. ಹೀಗೆ ರಾಜ್ಯಗಳು ಪುನರ್ವಿಂಗಡಣೆಯಾದಲ್ಲಿ ಈ ಆಡಳಿತ ಸೌಕರ್ಯಕ್ಕೇನೂ ತೊಂದರೆ ಬರುವುದಿಲ್ಲ—ಎಲ್ಲ ವಿಚಾರಗಳಲ್ಲೂ ಚೆನ್ನಾಗಿಯೇ ನಡೆದುಕೊಂಡು ಬರುತ್ತದೆ ಎಂದು ಕೆಲವು ಉದಾಹರಣೆಗಳನ್ನು ಕೊಟ್ಟು ಹೇಳಿದ್ದಾರೆ. ಅದು ಸರಿಯಾಗಿಯೇ ಇರಬಹುದು. ಆದರೆ ಈಗ ಇರತಕ್ಕಂಥ ಮೈಸೂರು ಸಂಸ್ಥಾನ ಈ ಒಂದು ಸರಿಯಾಗಿರತಕ್ಕ ಆಡಳಿತದ ಚೌಕಟ್ಟಿನಲ್ಲೇ ಇರಲಿ—ಇದನ್ನು ಬದಲಾಯಿಸುವುದು ಬೇಡ ಎಂದು ಕೇಳುತ್ತಿದ್ದಾರೆ, ಈ ಬಗ್ಗೆ ಒಂದು ವೃಥಾ ಶಂಕೆಯನ್ನೇಕೆ ಕಲ್ಪಿಸಬೇಕೆಂದು ಹೇಳುತ್ತಿದ್ದೇನೆ. ಈಗಿರತಕ್ಕಂಥ ಈ ಒಂದು ರಾಜ್ಯದ ವ್ಯವಸ್ಥೆಯೇನಿದೆಯೋ ಇದೇ ನಮಗೆಲ್ಲಾ ಸಮರ್ಪಕ

ವಾಗಿದೆ, ಹಾಗಿರುವುದರಿಂದ ಈಗ ಇದನ್ನು ಏತಕ್ಕೆ ಬದಲಾಯಿಸಬೇಕು ಎಂದು ಕೇಳಿದರೆ ಇದನ್ನೂ ಸಹ ಪರ್ಯಾಲೋಚನೆ ಮಾಡತಕ್ಕದ್ದು ಸರಿಯಲ್ಲವೇ? ಈ ಎಲ್ಲಾ ದೃಷ್ಟಿಗಳಿಂದಲೂ ನಾನು ಹೇಳುತ್ತೇನೆ ಈಗ ನಮ್ಮ ಸಂಸ್ಥಾನ ಹೇಗಿದೆಯೋ ಹಾಗೆಯೇ ಉಳಿದರೆ ಒಳ್ಳೆಯದು; ಇದು ದೊಡ್ಡದಾದರೆ ಆಗಲೂ ಅನುಕೂಲವೇ: ಹೀಗೆ ನಾನು ಎರಡನ್ನೂ ಸಹ ಸಮರ್ಥನೆ ಮಾಡಬಲ್ಲೆ. ಆದರೆ ಈಗ ಇರತಕ್ಕಂಥ ಮೈಸೂರು ಹೀಗೆ ಉಳಿಯಲು ಖಂಡಿತ ಸಾಧ್ಯವಿಲ್ಲ—ಇದೊಂದು ವಯಬಲ್ ಯೂನಿಟ್ ಆಗುವುದಿಲ್ಲ ಎಂದು ಹೇಳಿರತಕ್ಕ ವಾದಗಳ ಸರಿಯಲ್ಲವೆಂದು ಮಾತ್ರ ಹೇಳುತ್ತೇನೆ. ವಿಂಧ್ಯ ಪ್ರದೇಶದಲ್ಲಿ 70 ಲಕ್ಷ ಪ್ರಜಾಸಂಖ್ಯೆ ಇರುವುದನ್ನೇ ಒಂದು ವಯಬಲ್ ಯೂನಿಟ್ ಮಾಡಿರುವಾಗ, ಇಲ್ಲಿ ಇನ್ನೂ ಹೆಚ್ಚು ಜನಸಂಖ್ಯೆ ಇರುತ್ತಿರುವಾಗ, ಇದು ಏಕೆ ಒಂದು ವಯಬಲ್ ಯೂನಿಟ್ ಆಗುವುದಿಲ್ಲ! ಮೊನ್ನೆ ತಾನೆ ನಡೆದ ಎ. ಪಿ. ಸಿ. ಸಿ. ಅಧಿವೇಶನದಲ್ಲಿ ಶ್ರೀ ಎಚ್. ಕೆ. ವೀರಣ್ಣಗೌಡರೂ ಮತ್ತು ಎಚ್. ಸಿ. ದಾಸಪ್ಪನವರೂ ಸಹ ನಮ್ಮ ಮೈಸೂರು ಒಳಗಡಿಯಲ್ಲಿರುವ ಕರ್ನಾಟಕ ಪ್ರದೇಶವನ್ನೂ ಮತ್ತು ಹೊರಗಡೆ ಬ್ರಿಟಿಷ್ ಆಡಳಿತಕ್ಕೊಳಪಟ್ಟಿದ್ದ ಪ್ರದೇಶದಲ್ಲಿರುವ ಕರ್ನಾಟಕ ಪ್ರದೇಶವನ್ನೂ ಒಟ್ಟಾಗಿ ಸೇರಿಸಿ ಒಂದು ಪ್ರಾಂತ್ಯವನ್ನಾಗಿ ಮಾಡುವುದು ಸರಿಯಾದದ್ದಲ್ಲವೆಂದು ಕೆಲವು ಉದಾಹರಣೆಗಳನ್ನು ಕೊಟ್ಟು ವಾದ ಮಾಡಿರುತ್ತಾರೆ. ಮೈಸೂರಿನವರಾದ ನಾವೆಲ್ಲರೂ ಸೇರಿ ಒಂದು ಪ್ರಾಂತ್ಯ ಮಾಡಿಕೊಳ್ಳಲು ಅವಕಾಶವಿದೆ. ಇದೇ ರೀತಿಯಾಗಿ ಆ ಉತ್ತರ ಕರ್ನಾಟಕದವರಿಗೂ ಸಹ ಬೇರೊಂದು ಪ್ರಾಂತ್ಯವನ್ನು ನಿರ್ಮಾಣಮಾಡಿಕೊಳ್ಳಲು ಸಾಧ್ಯವಿದೆ ಎನ್ನತಕ್ಕಂಥ ವಿಚಾರವನ್ನೇ ನಾನು ಈ ಹಿಂದೆ ಆ ಅಂಕಿಅಂಶಗಳ ವರದಿಯ ಬಗ್ಗೆ ಮಾತನಾಡುತ್ತಾ ಹೇಳಿದ್ದೇನೆ. ಇದೇ ಅಭಿಪ್ರಾಯವನ್ನೇ ಶ್ರೀ ಕಾರಂತರೂ ಸಹ ಸಮರ್ಥನೆಮಾಡಿದ್ದಾರೆ. ಈ ಬ್ರಿಟಿಷ್ ಪ್ರಾಂತ್ಯದಲ್ಲಿರತಕ್ಕ ಕನ್ನಡ ಭಾಗಗಳೆಲ್ಲಾ ಸೇರಿ ಒಂದು ಪ್ರಾಂತ್ಯವಾಗುವುದು ಒಳ್ಳೆಯದೆಂದೂ, ಆ ರೀತಿ ಮಾಡಲು ಸಾಧ್ಯವಿದೆಯೆಂದೂ ಅವರು ಹೇಳಿದ್ದಾರೆ. ಆದಕಾರಣ ಈ ದಿವಸ ಎರಡು ಕರ್ನಾಟಕಗಳಾಗಬೇಕೆಂಬ ಹೇಳುವುದನ್ನು ತಪ್ಪೆಂದು ಯಾರೂ ಹೇಳಬಾರದು. ಹಾಗೆ ಹೇಳುವುದು ಸರಿಯಾದದ್ದಲ್ಲ. ಈ ದಿವಸ ಈ ರೀತಿ ಎರಡು ಪ್ರಾಂತ್ಯಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಆ ಮೇಲೆ ಈ ವರದಿಯಲ್ಲಿ ಇನ್ನೊಂದು ಬಹಳ ಗಮನಾರ್ಹವಾದಂಥ ವಿಚಾರ ಹೇಳಿದ್ದಾರೆ.

It is a means to an end. It is not an end in itself ಎಂದು ಹೇಳಿದ್ದಾರೆ. ಇದು ಏನೂ ಅಂಥ ಒಂದು ಐಡಿಯಲ್ ಅಲ್ಲ. ಇದಕ್ಕಿಂತಲೂ ಇನ್ನೂ ಉನ್ನತವಾದ ಧ್ಯೇಯ ಸಾಧನೆಯ ಮಾರ್ಗಗಳಿವೆ. ಈ ಹೊತ್ತು ಈ ಎಲ್ಲಾ ಕನ್ನಡಪ್ರದೇಶಗಳನ್ನೂ ಒಟ್ಟಾಗಿ ಕೂಡಿಸಿ ಒಂದು ಕರ್ನಾಟಕ ಪ್ರಾಂತ್ಯವನ್ನು ನಿರ್ಮಾಣಮಾಡದೆ ಹೋದರೆ ಆ ಉತ್ತರ ಕರ್ನಾಟಕದ ಜನರು ಪ್ರಾಣವನ್ನೇ ಬಿಟ್ಟುಬಿಡುತ್ತಾರೆ ಎನ್ನುವ ವಾದ ಸರಿಯಾದದ್ದಲ್ಲ. ನಾವಾದರೂ ಈ ದಿವಸ ಎರಡು ಕರ್ನಾಟಕಗಳಾದರೆ ಆಡಳಿತ ವ್ಯವಸ್ಥೆ ಸರಿಯಾಗಿರುತ್ತದೆ, ಚೆನ್ನಾಗಿರುತ್ತದೆ ಎನ್ನುವುದೊಂದೇ ದೃಷ್ಟಿಯಿಂದ ಹೇಳುತ್ತಿದ್ದೇವೆಯೇ ಹೊರತು, ಇದು ಆಗಲೇ ಬೇಕು, ಹೀಗೆಯೇ ಆಗಬೇಕು, ಹೀಗಾಗದಿದ್ದರೆ ಆಕಾಶವೇ ಕಳಚಿ ಕೆಳಗೆ ಬೀಳುತ್ತದೆ ಎಂದು ಹೇಳುತ್ತಿರುವುದು ಸರಿಯಲ್ಲ.

ಸ್ವಾಮಿ, ಕೊನೆಯದಾಗಿ ಇನ್ನೊಂದು ಮಾತಿದೆ. ಹೀಗೆಲ್ಲಾ ಇದ್ದಮೇಲೆ ನಾವು ಏತಕ್ಕೆ ಈ ಕರ್ನಾಟಕ ಒಂದು ಪ್ರಾಂತವಾಗುವುದಕ್ಕೆ ವಿರೋಧಮಾಡಬೇಕೆಂದು ಹೇಳಿ ಒಂದು ಪ್ರಶ್ನೆ ಏಳುತ್ತದೆ. ಶ್ರೀಮಾನ್ ಪಟ್ಟಾಭಿರಾಮನ್‌ರವರು ಅವರ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ಅದೇನು ಎಂದರೆ, ಈ ಚಳವಳಿ ಕೂಡ ಜನಸಾಮಾನ್ಯರಿಗೆ ಅಷ್ಟಾಗಿ ಸಂಬಂಧಪಟ್ಟಿಲ್ಲ ಎಂಬುದು. ಅದರಲ್ಲಿ ನಿಜಾಂಶವಿದೆ. ಅದೇ ರೀತಿ ಮೈಸೂರಿನ ಹೊರಗಡೆ ಇರುವ ಜನಸಾಮಾನ್ಯರಾಗಲಿ ತಮ್ಮ ಭವಿಷ್ಯವೂ ಕೂಡ ಸರಿಹೋಗಬೇಕಾದರೆ ಕರ್ನಾಟಕ ಪ್ರಾಂತವಾಗಬೇಕು, ಒಂದು ವೇಳೆ ಆಗದೆ ಹೋದರೆ ಬಹಳ ಕಷ್ಟಕ್ಕೆ ಈಡಾಗುತ್ತಾರೆ ಎಂದು ಯಾರೂ ಹೇಳಿಲ್ಲ ಎಂದು ನಾನು ಹೇಳಿದರೆ, ಬಹುಶಃ ಅವರೂ ಕೂಡ ಒಪ್ಪುತ್ತಾರೆಂದು ಕಾಣುತ್ತದೆ. ಇದೇ ರೀತಿ ಮೈಸೂರಿನ ಜನಸಾಮಾನ್ಯರು indifferent ಎಂದು ಇಟ್ಟುಕೊಳ್ಳೋಣ ಅಥವಾ ignorant ಎಂದು ಇಟ್ಟುಕೊಳ್ಳೋಣ. ಸಾಮಾನ್ಯ ಜನರಿಗೆ ಇದರಿಂದ ಅಂತಹ ಒಂದು ದುಷ್ಪರಿಣಾಮವಾಗುವುದಿಲ್ಲ ಎಂದು ಭಾವಿಸಬಹುದು ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಇದೇ ವಾದವನ್ನು ತಾವೇ ಯೋಚನೆಮಾಡಿದರೆ, ಕರ್ನಾಟಕ ಒಂದು ಪ್ರಾಂತವಾಗದೆ ಹಾಗೆಯೇ ಬಿಟ್ಟರೆ ಅಲ್ಲಿರತಕ್ಕ ಸಾಮಾನ್ಯ ಕನ್ನಡ ಜನರಿಗೂ ಏನು ದುಷ್ಪರಿಣಾಮವಾಗುತ್ತದೆ? ಒಂದು ಕೋಟಿ ಜನರು ಹಾಹಾಕಾರ ಪಡುತ್ತಿದ್ದಾರೆ ಎಂದು ಹೇಳುವುದರಲ್ಲಿ ಅರ್ಥವೇನು ಇದೆ? ಇದೆಲ್ಲಾ, ಅವರೇ ಅಪ್ಪಣೆ ಕೊಡಿಸಿದ ಹಾಗೆ, ಹೆಚ್ಚು ಕಡಿಮೆ Politicians ಮಾಡತಕ್ಕ ವಾದ ಹೌದು. ಹಾಗಾದರೆ ಕರ್ನಾಟಕವಾಗಬೇಕೆಂದು ಇಷ್ಟೊಂದು ದೊಡ್ಡದಾಗಿ ಆಂದೋಳನವನ್ನು ಎಬ್ಬಿಸಿ ಈ ವರದಿಯಲ್ಲಿ ನಮೂದು ಮಾಡಿರುವುದು Politicians ವಾದದ ಮೇಲೆ ತಾನೇ? ಈ Politicians ವಾದವನ್ನೇ ನಾವು ತೆಗೆದುಕೊಂಡು ನೋಡುವುದಾದರೆ ಕೆಲವರು ಒಂದು ಕರ್ನಾಟಕ ಬೇಕು ಎಂದು ಹೇಳುತ್ತಿದ್ದಾರೆ. ಕೆಲವರು ಎರಡು ಕರ್ನಾಟಕವಾಗಲಿ, ಎರಡು ಪ್ರಾಂತವಾಗಲಿ ಎಂದು ಹೇಳುತ್ತಿದ್ದಾರೆ ಎರಡು ಪ್ರಾಂತಗಳಾಗಬೇಕು ಎಂದು ಹೇಳತಕ್ಕವರ ವಾದ ಸರಿಯಲ್ಲ. ನಾವು ಒಂದೇ ಪ್ರಾಂತವಾಗಬೇಕು ಎಂದು ಹೇಳತಕ್ಕ Politicians ಈ ಪ್ರಾಂತವಾಗುವುದು ಬೇಡ ಎಂದು ಹೇಳುವವರ ಮನಸ್ಸನ್ನು ಒಲಿಸಿಕೊಳ್ಳದೆ ತಾತ್ವಿಕವಾಗಿ ಹೇಳುತ್ತಿದ್ದಾರೆ.

ಶ್ರೀ ಕೆ. ಪಟ್ಟಾಭಿರಾಮನ್.—ನಾನು ಅದಕ್ಕಾಗಿ ಎಷ್ಟೋ ಪ್ರಯತ್ನಪಟ್ಟೆನಲ್ಲ ಇವೊತ್ತು!

ಶ್ರೀ ಡಿ. ದೇವರಾಜ ಅರಸ್.—ತಾವು ಪ್ರಯತ್ನಪಟ್ಟಿದ್ದನ್ನು ನಾನು ಬಹಳ ಕುತೂಹಲದಿಂದ ಕೇಳಿದ್ದೇನೆ. The Hon'ble Member used to blow both hot and cold together, ಅದೇ ಬಂದಿದ್ದು ಕಷ್ಟ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಅದನ್ನೇ ಮಾಡುತ್ತಾ ಇದ್ದೀರಿ.

Mr. SPEAKER.—I request the Hon'ble Member to close.

Sri D. DEVARAJ URS.—I have taken more then 15 minutes already, I claim to represent one and all, because as I have already submitted I neither belong to Vokkaliga community nor to Lingayet community. ಮುಖ್ಯ

(ಶ್ರೀ ಡಿ. ದೇವರಾಜ ಅರಸ್.)

ವಾಗಿ "Trust begets trust, love begets love" ಎಂದು ಹೇಳಿದರು. ಈ ವಿಚಾರದಲ್ಲಿ ಶ್ರೀ ವಿ. ಆರ್. ರಾಮಯ್ಯನವರು ಅವರ ಭಾಷಣದಲ್ಲಿ ಒಂದು ಮಾತನ್ನು ವ್ಯಕ್ತಪಡಿಸಿದರು. ಕರ್ಣಾಟಕ ಪ್ರಾಂತ ವಿಚಾರದಲ್ಲಿ ಮೈಸೂರಿನ ಹೊರಗಡೆ ಹೆಚ್ಚಾಗಿ ಪ್ರಚಾರ ನಡೆದಿದೆ, ಮೈಸೂರಿನ ಒಳಗಡೆ ಅಷ್ಟಾಗಿ ಪ್ರಚಾರ ನಡೆದಿಲ್ಲ ಎಂದು ಅಪ್ಪಣೆ ಕೊಡಿಸಿದರು. ಅದು ನಿಜವಾದ ಮಾತು. ಹೆಚ್ಚಿಗೆ ಈ ವಿಚಾರದಲ್ಲಿ ಪ್ರಚಾರವನ್ನು ನಡೆಸದೆ, ಅದು ಬೇರೆ Politicians Problem ಆಗಿ, ಇದುವರೆಗೂ ಶ್ರೀಮಾನ್ ಪಟ್ಟಾಭಿ ರಾಮಯ್ಯನವರು ಹೇಳಿದ ಹಾಗೆ ಉಳಿದುಕೊಂಡು ಬಂತು. ಈ ದಿವಸ ಮೈಸೂರು ದೇಶದ ಜನತೆಯ ಮೇಲೆ ಒಂದು Protection ನಾವೇ ಕೊಡಬೇಕು, ಇದು ಜನರನ್ನು ಕೇಳಿ ಮಾಡತಕ್ಕ ವಿಚಾರವಲ್ಲ. ನಾವು lead ಮಾಡಿ ಅವರ ಶ್ರೇಯಸ್ಸಿಗೋಸ್ಕರ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಮಾಡಬೇಕೆಂದು ಹೇಳಿದರು ಸ್ವಾಮಿ, ಈ ವಿಚಾರದಲ್ಲಿ ಪ್ರಚಾರ ನಡೆದಿಲ್ಲ. ಜನರನ್ನು ಕೇಳಬೇಕಾದುದು ಇಲ್ಲ. ನಾವೂ, Politicians ಊ ಕುಳಿತುಕೊಂಡು decide ಮಾಡುವುದು ಸರಿ ಎಂದು, ಅವರು ನನ್ನನ್ನು convert ಮಾಡಬೇಕೆಂದು ಹೇಳುತ್ತಿದ್ದಾರೆ. ಅದು ನನ್ನ ಮನಸ್ಸಿಗೆ ಹಿಡಿಸುತ್ತಾ ಇಲ್ಲ. ಇದುವರೆಗೆ ಈ ವಿಚಾರದಲ್ಲಿ ಪ್ರಚಾರ ನಡೆದಿದ್ದೇ ಆದರೆ ಬಹುಶಃ ಶ್ರೀ ಪಟ್ಟಾಭಿರಾಮಯ್ಯನವರು ಏನು ಆಶೋತ್ತರಗಳನ್ನು ವ್ಯಕ್ತಪಡಿಸಿದರೋ. ಹಾಗೆಯೇ ಸರ್ವರೂ ಇದನ್ನು ಸ್ವಾಗತಿಸೋಣ, ಎಂದು ಹೇಳಿ ಆ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತಿದ್ದರು ಎಂದು ಭಾವಿಸುತ್ತೇನೆ. ಇದುವರೆಗೆ ಆಗಿರತಕ್ಕ ಅನುಭವ ಏನು ಎಂದರೆ, ಇದರಲ್ಲಿ ಸಾಕಾದಷ್ಟು ಪ್ರಚಾರ ನಡೆದಿಲ್ಲ. ಜನಗಳಿಗೆ ಗೊತ್ತಿಲ್ಲ. ಈಗ ನಾವು sacrifice ಮಾಡಬೇಕು ಎಂದು ಒಬ್ಬ ಮಾನ್ಯ ಸ್ನೇಹಿತರು ಹೇಳಿದರು. ಅದು ನನಗೆ ಜ್ಞಾಪಕವಿದೆ. General Secretary ಆಗಿರತಕ್ಕ ಶ್ರೀಮಾನ್ ಎಸ್. ವಿ. ರಾಮರಾಯರು ಮೈಸೂರಿನ ಜನರು ತ್ಯಾಗ ಮಾಡಬೇಕಾದ ಸಂದರ್ಭ ಇದೆ, ಅವರು ತ್ಯಾಗ ಮನೋಭಾವವನ್ನು ತೋರಿಸಬೇಕು ಎಂದು ಒಂದು ಸಂದರ್ಭದಲ್ಲಿ ಹೇಳಿದರು. ಅದನ್ನು ನಾನು ಸಂಪೂರ್ಣವಾಗಿ ಒಪ್ಪುವವನಾಗಿದ್ದೇನೆ. ತ್ಯಾಗ ಮನೋಭಾವವನ್ನು ತಾಳಬೇಕು, sacrifice ಮಾಡಬೇಕು, ಎಂದು ಹೇಳಬೇಕಾಗಿದ್ದರೆ ನನ್ನ ಮನಸ್ಸಿಗೆ ತ್ಯಾಗಮಾಡಬೇಕು ಎಂದು ಹೇಳುವ ಮನೋಭಾವ ಉಂಟಾಗುವ ಹಾಗೆ ವರ್ತಿಸಿದರೆ ಮಾತ್ರ ಸರಿಯೇ ಹೊರತು, ಅದನ್ನು ಬಿಟ್ಟು, at the point of bayonet, ಗೊತ್ತಿರಲಿ ಗೊತ್ತಿಲ್ಲದೆ ಹೋಗಲಿ, ನಿನ್ನ ಕ್ಷೇಮಕ್ಕೆ ತ್ಯಾಗಮಾಡು ಎಂದು ಹೇಳಿದರೆ, ಅದು ಹೇಗೆ ಸಾಧ್ಯ? ನಂಜನಗೂಡಿನ ಒಬ್ಬ ಮಾನ್ಯ ಸ್ನೇಹಿತರು ಬಂದಿದ್ದರು. ಅವರು ಕರ್ಣಾಟಕಪರವಾಗಿರುವವರು, ಅಸಂಬ್ಲಿ ಸದಸ್ಯರಲ್ಲ, ರೈತರು. ಅವರು ಕರ್ಣಾಟಕದ ವಿರೋಧಿಗಳಾದ ಜನಗಳನ್ನು ಕುರಿತು, "ನೀವು ಬಿಡಿ. ಇದು ಅಣ್ಣತಮ್ಮಂದಿರ ವ್ಯಾಜ್ಯ. ಹೇಗೋ ಸರಿ ಹೋಗುತ್ತದೆ" ಎಂದು ಹೇಳಿದರು. ನಾನು ಹೌದು ಒಪ್ಪಿಕೊಂಡೆ. ಅದಾದಮೇಲೆ ಇನ್ನೊಂದು ಮಾತು ಹೇಳಿದರು, "ಆದರೆ ನಮ್ಮ ನಂಜನಗೂಡು Sub-division ಪಾತಾಳಕ್ಕೆ ಹೋಗಿದೆಯಲ್ಲಾ! ಅದನ್ನು ಯಾರೂ ನೋಡುವವರು ಇಲ್ಲವೆ?" ಎಂದು ಕೇಳಿದರು. ಕರ್ಣಾಟಕ ಪ್ರಾಂತವಾಗಬೇಕು, ನಂಜನಗೂಡು Sub-division ಪಾತಾಳಕ್ಕೆ ಹೋಗದಂತೆ ನೋಡಬೇಕು. ಕರ್ಣಾಟಕ ಆಗುವುದು ಒಳ್ಳೆಯದೋ ಕೆಟ್ಟದ್ದೋ ಒಪ್ಪಬೇಕು. ನಾವು decide ಮಾಡಬೇಕು ಎಂದು ನಮ್ಮ ಹಿರಿಯ ಸ್ನೇಹಿತರು ಹೇಳಿದರು. ಆದರೆ ನಮ್ಮ ಊರಿನಲ್ಲಿ ಭಾವಿ, ರಸ್ತೆ, ಸ್ಕೂಲು, ಇತ್ಯಾದಿ ಕಡಮೆ ಆದಾಗ "ನಿಮ್ಮನ್ನು ಕರ್ಣಾಟಕ ಮಾಡಿ ಎಂದು ಹೇಳಿದವರು ಯಾರು" ಎಂದು ಕೇಳುತ್ತಾರೆ. ಆಗ ಬರುತ್ತದೆ ಕಷ್ಟ, ಅದಕ್ಕೋಸ್ಕರವಾಗಿ ನಾನು ಹೇಳುವುದು: ಜನಗಳಿಗೆ ಸಾಕಷ್ಟು ತಿಳುವಳಿಕೆಯಿಲ್ಲದೆ ಇರುವಾಗ ಅವರ ಮನೋಭಿಪ್ರಾಯ ಏನು ಎಂದು ತಿಳಿದುಕೊಳ್ಳದೆ ಇರುವ ಕಾಲದಲ್ಲಿ ಅವರಿಂದ ಒಂದು ತ್ಯಾಗ ನಿರೀಕ್ಷಣೆ ಮಾಡಬೇಕು ಎಂದು ಏನು ವಾದಮಾಡುತ್ತಾರೋ ಅದನ್ನು ನಿರೀಕ್ಷಣೆಮಾಡಬೇಕಾದರೆ ಅವರಿಗೆ ಸಾಕಷ್ಟು ತಿಳುವಳಿಕೆ ಇದರಲ್ಲಿ ಕೊಟ್ಟು ಅವರ ಸಮ್ಮತವನ್ನು ಪಡೆದು ನಾವು ಏಕೀಕರಣ ಮಾಡದೇ ಇದ್ದರೆ ಅದು ಒಂದು "Trust begets trust, love begets love" ಎಂಬಂತೆ ಆಗಲು ಸಾಧ್ಯವಾಗುತ್ತದೆಯೇ? ಇಡೀ ಇಂಡಿಯಾ ದೇಶದ ಜನ ಏನೋ ignorant mass, ಅವರಿಗೆ ಏನು ಅಷ್ಟಾಗಿ ಗೊತ್ತಿಲ್ಲ. ಆದ್ದರಿಂದ ನಾವು politicians ಕುಳಿತುಕೊಂಡು decide ಮಾಡೋಣ ಎಂದು ಹೇಳುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ನಾವು ರಾಗ ದ್ವೇಷಗಳಿಂದ ನೋಡಬಾರದು, ನಮ್ಮ ಮನಸ್ಸು ಕೆಟ್ಟುಹೋಗಿದೆ ಎಂದು ಹೇಳಿದರು. ಆದರೆ ಆಶಾಕಾಂಕ್ಷೆಗಳು ರಾಗದ್ವೇಷಗಳು ಎಲ್ಲರಿಗೂ ಒಂದೇ. ಎಲ್ಲರಿಗೂ self-sacrificing nature ಇದ್ದುಕೊಂಡು ಸಮತಾ ದೃಷ್ಟಿಯಿಂದ ಇರುವವರಾದರೆ ಪರವಾಇಲ್ಲ. ಅವರೇ ಹೇಳಿದ ಹಾಗೆ, ರಾಗದ್ವೇಷಗಳೂ ಆಶಾಕಾಂಕ್ಷೆಗಳೂ ಇರುವಾಗ ಈ ವಿಷಯದಲ್ಲಿ ಸರಿಯಾದ judgement ಕೊಡುವ ವಿಚಾರ ಹಾಗೆಯೇ ಯೋಚನಮಾಡಬೇಕಾಗಿದೆ. ಆದ್ದರಿಂದ ಜನರಿಗೆ ಸಂಬಂಧಪಟ್ಟ ಸಮಸ್ಯೆಯನ್ನು ಅಷ್ಟು ಸುಲಭವಾಗಿ politicians ಸೇರಿಕೊಂಡು decide ಮಾಡಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ ಎಂದು ನನ್ನ ವಾದ.

ಶ್ರೀ ಟಿ. ಮರಿಯಪ್ಪ.—Love marriagesನಿಂದ ಕಷ್ಟವಾಗುತ್ತದೆ. ತಂದೆತಾಯಿಗಳು ಮಾಡುವ marriages ನಿಂದ ಎಷ್ಟೋ ಸುಖವಾಗುತ್ತದೆ; ಅಲ್ಲವೇ?

ಶ್ರೀ ಡಿ. ದೇವರಾಜ್ ಅರಸ್.—Love ಇಲ್ಲದೆ ಹೋದರೂ ಮದುವೆಮಾಡಿಕೊಳ್ಳೋಣ ಎಂದು ಹೇಳುತ್ತೀರಾ?

ಶ್ರೀ ಟಿ. ಮರಿಯಪ್ಪ.—ನಾನು ವಾಸ್ತವವಾದ ವಿಚಾರ ಹೇಳಿದೆ. Politicians ಕುಳಿತು ತೀರ್ಮಾನ ಮಾಡಿದರೆ ಕೆಟ್ಟುಹೋಗುವುದಿಲ್ಲ. ತಂದೆತಾಯಿಗಳು ಮಾಡುವ ಮದುವೆ ಎಷ್ಟೋ ಸುಖವಾಗಿರುತ್ತದೆ. ತಮಗೂ ಅನುಭವ ಇರಬಹುದು. ನಾನು ಮದುವೆ ಮಾಡಿಕೊಳ್ಳುವುದಕ್ಕೆ ಮೊದಲು ನನ್ನ ಹೆಂಡತಿಯ ಮುಖವನ್ನೂ ಕೂಡ ನಾನು ನೋಡಿರಲಿಲ್ಲ. ನನಗೆ ಮದುವೆ ಆಗಿ ಸುಖವಾಗಿದ್ದೇನೆ. ಅಲ್ಲಿ ಇಲ್ಲಿ love marriage ಮಾಡಿಕೊಂಡು ಅಲ್ಲ ಇಲ್ಲ ಪುನಃ ಮದುವೆ ಆಗುವ ಸಂದರ್ಭಗಳು ಹಲವಾರು ಇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದು ನಿಮ್ಮ ಕಾಲಕ್ಕೆ ಆಗಿಹೋಯಿತು. ಈಗ ಕಾಲ ಕೆಟ್ಟುಹೋಗಿದೆ.

ಶ್ರೀ ಡಿ. ದೇವರಾಜ ಅರಸ್.—ಹಿಂದೆ 20ನೇ ಶತಮಾನದಲ್ಲಿ ಏನಾಗುತ್ತಿತ್ತು ಎಂದು ಶ್ರೀ ಮರಿಯಪ್ಪನವರು ಹೇಳಿದರು. ಅದನ್ನು ಇದುವರೆಗೂ ಒಪ್ಪಿ

ಕೊಂಡರು. ಆದರೆ ದೇಶದಲ್ಲಿ ಈಗ divorce law ತಂದಿದ್ದಾರೆ.

ಶ್ರೀ ಟಿ. ಮರಿಯಪ್ಪ.—Love marriage ನಲ್ಲಿ affection ಇದ್ದರೆ, ಅವರು ಇಟ್ಟುಕೊಳ್ಳಲಿ.

ಶ್ರೀ ಡಿ. ದೇವರಾಜ್ ಅರಸ್.—ತಂದೆತಾಯಿಗಳು ಹೇಳಿ ಮದುವೆಮಾಡುವುದು ಸರಿಹೋಗುವುದಿಲ್ಲ ಎಂದು ಹೇಳಿ divorce law ತಂದಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಹಿಂದೆ ತಂದೆತಾಯಿಗಳು ಹೆಣ್ಣು ನೋಡಿಕೊಂಡು ಪೂರ್ವೋತ್ತರ ನೋಡಿ ಕೊಂಡು ಮದುವೆ ಮಾಡುತ್ತಿದ್ದರು.

ಶ್ರೀ ಡಿ. ದೇವರಾಜ್ ಅರಸ್.—ತಂದೆಯ ಆಸೆ ಮದುವೆಯ ಮೇಲಲ್ಲ. ಹೆಣ್ಣು ಕೊಡುವ ದ್ರವ್ಯದ ಮೇಲೆ ಆಸೆ ಬಂದಿದೆ ಎಂದು ಹೇಳುತ್ತೇನೆ.

Mr. SPEAKER.—The Hon'ble Member has taken one hour and five minutes. I request him to finish his speech.

ಶ್ರೀ ಡಿ. ದೇವರಾಜ್ ಅರಸ್.—ಆದ್ದರಿಂದ ಶ್ರೀ ಮರಿಯಪ್ಪನವರು ಹೇಳಿದ ಹಾಗೆ ಒಂದು ಹೆಣ್ಣು ಮತ್ತು ಗಂಡಿನ ಹಿತಚಿಂತನೆಯಿಂದ ಏರ್ಪಾಡು ಮಾಡುವ ಹಾಗಿದ್ದರೆ, ನಾವು ಆ ರೀತಿ ನಂಬಿಕೆ ಉಳ್ಳವರಾಗಿದ್ದಾರೆ, ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೆವು. ಈಗ ಹೆಣ್ಣಾದರೂ ಹೋಗಲಿ, ಗಂಡಾದರೂ ಹೋಗಲಿ, ನಮಗೆ ದ್ರವ್ಯ ಬರಲಿ ಎನ್ನುವ ಅಭಿಪ್ರಾಯದಿಂದ ಮಾಡುತ್ತಿದ್ದಾರೆ.

ಸ್ವಾಮಿ, means to an end ಎಂದು ಹೇಳಿದರು. ಇಡೀ ಇಂಡಿಯಾದೇಶದ ಸಮಗ್ರ ದೃಷ್ಟಿಯಿಂದ, ಕಾರ್ಯಸಾಧನೆ, ಅಭಿವೃದ್ಧಿಯಾಗಬೇಕಾದರೆ ರಾಜ್ಯಗಳ ಪುನರ್ವಿಂಗಡಣೆ ಅವಶ್ಯಕ, ಇದನ್ನು ಮಾಡಬೇಕೆಂದು ಹೇಳಿದರು. ಇದರ ಜೊತೆಗೆ, ಜನರ ಮನೋಭಿಪ್ರಾಯವೂ ಕೂಡ ಪ್ರಾಮುಖ್ಯವಾದುದು ಎಂಬುದನ್ನು ಈ ಸಂದರ್ಭದಲ್ಲಿ ನಾವು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಹಾಗಿಲ್ಲದೆ ಯಾವುದೋ ರೀತಿಯ ಬಲವಂತದಿಂದ, ಜನ ತಿಳಿಯಲಿ, ತಿಳಿಯದೇಯಿರಲಿ, ಕೇಳಲಿ ಬಿಡಲಿ, ನಾವು ಇದನ್ನು ಅವರ ಮೇಲೆ ಹೊರಿಸುತ್ತೇವೆ ಎಂದರೆ ಈ ವರದಿಯಲ್ಲಿ ಹೇಳಿರುವಂತೆ, ಅಂತ್ಯಗುರಿ ಅಥವಾ ಧ್ಯೇಯಸಾಧನೆಮಾಡಬೇಕೆಂದು ಏನಿದೆಯೋ ಅದು ಅಷ್ಟು ಸಹಜವಾಗಿ ಸಾಧನೆ ಆಗಲಾರದು. ಒಂದು ವೇಳೆ ಇದು ಅಡಚಣೆಯ ರೂಪವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ಜನರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ, ಬಲವಂತವಾಗಿ, ತಮಗೆ ಬಹುಮತವಿದೆಯೆಂದು ಒಂದು ಅಂಕುಶವನ್ನು ಹಾಕಿ, ಅಂಕುಶದ ಮೊನೆಯಲ್ಲಿ, at the point of the bayonet ಒಪ್ಪಿಯೇ ತೀರಬೇಕೆಂದು ಮಾಡಿದರೆ, ಅದು ನಮ್ಮ ದೇಶಕ್ಕಾಗಲಿ ಇಂಡಿಯಾ ದೇಶಕ್ಕಾಗಲಿ, ಕರ್ನಾಟಕ ಪ್ರಾಂತಕ್ಕಾಗಲಿ ಅಷ್ಟು ಕ್ಷೇಮಕರವಲ್ಲವೆಂದು ಹೇಳಬೇಕಾಗಿದೆ.

ಕೊನೆಯಲ್ಲಿ ಇನ್ನೊಂದು ಮಾತನ್ನು ನಿವೇದಿಸಬೇಕಾಗಿದೆ. ಇದು ಸರ್ವೇಸಾಧಾರಣವಾಗಿ ಹೊಲಗದ್ದೆಗಳಲ್ಲಿ ಕೆಲಸಮಾಡುವ ಮತ್ತು ಕಾರ್ಖಾನೆಗಳಲ್ಲಿ ಕೆಲಸಮಾಡುವ ಜನರಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲವೆಂದು ಮತ್ತೊಂದು ರೀತಿ ಯೋಚನೆಮಾಡುತ್ತಿದ್ದೇನೆ. ಕರ್ನಾಟಕವಾಗದೇ ಇದ್ದ ಪಕ್ಷದಲ್ಲಿ ಮೈಸೂರಿನ ಸಾಧಾರಣ ಜನರಾರಿಗೂ ತೊಂದರೆಯಾಗುವುದಿಲ್ಲ. ಕನ್ನಡಿಗರೆಲ್ಲರೂ ಒಂದಾಗಬೇಕು, ಸಹೋದರ ಭಾವನೆಯನ್ನು ತೋರಿಸಬೇಕು ಎಂಬ ವಾದವನ್ನು ಹೇಳಿದರು. ಆದರೆ ನನಗೆ ಬಂದಿರುವ ಕಷ್ಟವೇನೆಂದರೆ, ಕನ್ನಡಿಗರಿಗೆ ಮಾತ್ರ ಈ ಭಾವನೆ ತೋರಿಸಿ, ತಮಿಳರಿಗೆ ಬೇಡ, ತೆಲುಗರಿಗೆ ಬೇಡ ಎಂದು ಅರ್ಥವಾಗುತ್ತದೆಯೋ ಏನೋ ಗೊತ್ತಾಗುವುದಿಲ್ಲ.

ಶ್ರೀ ಆರ್. ಅನಂತರಾಮಯ್ಯ.—Composite State ಆಗುವುದರಿಂದ ಆ ಪ್ರಶ್ನೆಯೇ ಬರುವುದಿಲ್ಲ.

Mr. SPEAKER.—The Hon'ble Member need not answer all those points.

ಶ್ರೀ ಡಿ. ದೇವರಾಜ ಅರಸ್.—ಈಗ ನಮ್ಮ ಸಂಸ್ಥಾನದ ಕಾಫಿ ಮತ್ತು ಅಡಿಕೆ ತೋಟಗಳಲ್ಲಿ ಬಹಳ ಜನರು ತಮಿಳು ದೇಶದಿಂದ ಬಂದು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಮನೆಮಠಗಳನ್ನು ಮಾಡಿಕೊಂಡು ಅನ್ಯೋನ್ಯವಾಗಿ ಜೀವನಮಾಡುತ್ತಿದ್ದಾರೆ. ಸಾಧಾರಣವಾಗಿ ಜನರ ಸಂಬಂಧ ಯಾವತ್ತೂ ಭಾಷೆಯ ಆಧಾರದ ಮೇಲೆ ನಿಂತಿಲ್ಲ, ಮುಂದೆಯೂ ಹಾಗೆ ನಿಂತಿರುವುದಿಲ್ಲ. Economic factor ಅಥವಾ ಆರ್ಥಿಕ ಸಂಬಂಧ ಪ್ರತಿಯೊಬ್ಬ ಮನುಷ್ಯನನ್ನೂ ಬಂಧಿಸುತ್ತದೆ. ಇನ್ನೊಂದು ಉದಾಹರಣೆ ಹೇಳುತ್ತೇನೆ. ಮೈಸೂರು ದೇಶದಲ್ಲಿ ಅನೇಕ ಜಲಾಶಯಗಳು ಮತ್ತು ಕೆರೆಕಟ್ಟೆಗಳನ್ನೂ ಕಟ್ಟಿದ್ದಾರೆ, ಅಣೆಕಟ್ಟೆಗಳನ್ನೂ ಕಟ್ಟಿದ್ದಾರೆ. ಇನ್ನೂ ದೊಡ್ಡ ದೊಡ್ಡ ಕಾಮಗಾರಿಗಳು ನಡೆದಿವೆ. ಕನ್ನಡ ಮಾತನಾಡುವ ಜನರೇ ಬಂದು ಈ ಕೆಲಸಗಳನ್ನು ಮಾಡಿದ್ದಾರೋ ಅಥವಾ ತೆಲುಗು ತಮಿಳು ಮಾತನಾಡುವವರೂ ಬಂದು ಮಾಡಿದ್ದಾರೆಯೋ ಎಂಬುದನ್ನು ಯೋಚನೆ ಮಾಡಬೇಕು. ಆ ಜನರಿಗೆ ಕನ್ನಡ ಬೇರೆ, ನಮ್ಮ ದೇಶ ನಮ್ಮ ಭಾಷೆ ಬೇರೆ ಎನ್ನುವ ಭಾವನೆಯಿಲ್ಲ. ಅದರಲ್ಲಿಯೂ ಕಾರ್ಮಿಕರಿಗೂ ರೈತರಿಗೂ ಈ ಭಾವನೆ ಇಲ್ಲವೇ ಇಲ್ಲ. ಅವರಿಗಿರುವುದು human relationship ಅಥವಾ ಮಾನವ ಮಾನವನಿಗಿರುವ ಸಂಬಂಧ. ಇದನ್ನು ನಮ್ಮ ಸೋಷಿಯಲಿಸ್ಟ್ ಪಕ್ಷದ ಸ್ನೇಹಿತರೂ ಒಪ್ಪುತ್ತಾರೆ. ಆರ್ಥಿಕ ಸಂಬಂಧವಿರುತ್ತದೆಯೇ ಹೊರತು ಭಾಷೆಯ ಸಂಬಂಧವಿರುವುದಿಲ್ಲ. ಇದ್ದರೂ ಅಲ್ಪಸ್ವಲ್ಪ ಮತ್ತು ಕ್ಷಣಿಕ. ಮಾನ್ಯ ಪಟ್ಟಾಭಿರಾಮಯ್ಯರವರು ಹೇಳಿದಹಾಗೆ, ಪಾಲಿಟೀಷಿಯನ್ಸ್ ಮಾಡಿರುವ ಚಾಕಚಕ್ಯತೆಯ ಫಲವಾಗಿ ಇಂಡಿಯಾದೇಶ ಈ ಭಾಷೆಯ ಗೊಂದಲಕ್ಕೆ ಸಿಕ್ಕಿ ಭಾಷಾವಾರು ಪ್ರಾಂತಗಳಾಗಬೇಕೆ ಹೊರತು ಸಾಧಾರಣ ಜನಕೋಟಿಗೆ ಇದು ಬೇಕಿಲ್ಲ. Common man, raiyat, worker ಎಂದು ಯಾರನ್ನು ಹೇಳುತ್ತೇವೋ ಅವರು ಕನ್ನಡ ದೇಶದಿಂದ ತಮಿಳು ದೇಶಕ್ಕೆ ಹೋದರೆ, ಅಥವಾ ಅಲ್ಲಿಂದ ಇಲ್ಲಿಗೆ ಬಂದರೆ ಅಥವಾ ಬೇರೆ ದೇಶಕ್ಕೆ ಹೋದರೆ ಆಯಾ ದೇಶದ ಭಾಷೆಗಳನ್ನು ಕಲಿತುಕೊಂಡು ಜೀವನಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ. ತಮಿಳು ತೆಲಗು ದೇಶಗಳಿಂದ ಬಂದಿರುವ ಕಾರ್ಮಿಕರು ನಮ್ಮ ಮೈಸೂರಿನಲ್ಲಿ ಹೆಚ್ಚು ಕಡಮೆ ಕನ್ನಡ ಭಾಷೆಯನ್ನು ದಿನಚರಿಯ ಕೆಲಸಗಳಿಗೆ ಅಗತ್ಯವಾದಷ್ಟು ಕಲಿತೇಯಿದ್ದಾರೆ. ಹೀಗಿರುವಾಗ ಅವರಿಗೆ ಭಾಷೆ ಏನೋ ಪ್ರಾಧಾನ್ಯವಲ್ಲ. ಹೀಗೆ ಭಾಷೆ ಮುಖ್ಯವಲ್ಲವೆಂದು ಸಿದ್ಧಾಂತ ಮಾಡಿಕೊಂಡ ಮೇಲೆ, ಒಂದೇ ಪ್ರಾಂತ ಮಾಡಿದರೆ ಮಾತ್ರ ಇಡೀ ಕನ್ನಡ ಜನ ಉದ್ಧಾರವಾಗುತ್ತಾರೆ, ಇಲ್ಲದಿದ್ದರೆ ಅಧೋಗತಿಗೆ ಹೋಗುತ್ತಾರೆ ಎನ್ನುವ ವಾದದಲ್ಲಿ ತಿರುಳಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಕೊನೆಯದಾಗಿ ನಮ್ಮ ದೇಶವನ್ನು ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡಿರುವುದು ಉತ್ತರೋತ್ತರ ಇಂಡಿಯಾ ದೇಶದ ಕ್ಷೇಮ ಮತ್ತು ಭದ್ರತೆಗೆ ಅಷ್ಟು ಹಿತಕರವಲ್ಲ

(ಶ್ರೀ ಡಿ. ದೇವರಾಜ ಅರಸ್.)

ವೆಂದು ಮಾತ್ರ ಹೇಳಿ, ನಾನು ಈ ವರದಿಯಲ್ಲಿ ನಮೂದಿಸಿರುವ ಕರ್ಣಾಟಕ ಪ್ರಾಂತಕ್ಕೆ ಸಂಬಂಧಪಟ್ಟ ಸಲಹೆಯನ್ನು ವಿರೋಧಮಾಡುತ್ತೇನೆ.

Sri J. MOHAMED IMAM.—Are we closing at 5 o'clock, Sir ?

Mr. SPEAKER —I do not think we are closing at five. There is one thing I want to announce. There is another item on to-day's agenda. That is half an hour's debate on Question No. 299. It will be taken up tomorrow.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು) —ಮಾನ್ಯ ಅಧ್ಯಕ್ಷರೆ, ಪ್ರಾಂತಪುನರ್ವಿಂಗಡಣಾ ಸಮಿತಿಯ ವರದಿಯನ್ನು ಈಗಾಗಲೇ ಈ ಸಭೆಯಲ್ಲಿ ಚರ್ಚೆ ಮಾಡಿದ್ದಾರೆ. ಇದಕ್ಕೆ ಅನೇಕ ತಿದ್ದುಪಡಿಗಳೂ ಬಂದಿವೆ. ಈ ವಿಚಾರದಲ್ಲಿಯೂ ಕೂಡ ಚರ್ಚೆ ನಡೆದಿದೆ. ಈ ಸಭೆಯಲ್ಲಿ ಅನೇಕ ಮಹನೀಯರುಗಳು ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯ ಮಂತ್ರಿಗಳೂ ಇದನ್ನು ಮಂಡಿಸುವಾಗ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇತರ ಮಂತ್ರಿಗಳೂ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಸಭೆಯ ವಿರೋಧ ಪಕ್ಷದ ನಾಯಕರೂ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಷ್ಟೆಲ್ಲ ಆದ ಮೇಲೆ ನನಗೆ ಹೆಚ್ಚು ಮಾತನಾಡಬೇಕೆಂಬ ಇಷ್ಟವಿಲ್ಲದಿದ್ದರೂ ಕೂಡ, ಇದಕ್ಕೆ ಸಂಬಂಧಪಟ್ಟಂತೆ ಕೆಲವು ಮಿತ್ರರು ಹೇಳಿರುವುದಕ್ಕೆ ಈ ಸಂದರ್ಭದಲ್ಲಿ ಉತ್ತರ ಕೊಡೋಣವೆಂಬ ಉದ್ದೇಶದಿಂದಲ್ಲೂ, ಸಾಧ್ಯವಾದರೆ ಅವರ ಮನಸ್ಸನ್ನು ಒಲಿಸಿಕೊಳ್ಳೋಣವೆಂಬ ಉದ್ದೇಶದಿಂದಲೂ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಹೊತ್ತು ದೇವರ ದಯೆಯಿಂದ ಶಾಂತವಾತಾವರಣವಿದೆ. ಬಿಸಿಯಿಲ್ಲ. ಹಿಂದೆ ಬಹಳ ಬಿಸಿಯಾಗಿತ್ತು, ದೇವರ ದಯೆಯಿಂದ ಇಂದು ಬಹಳ ಶಾಂತವಾಗಿದೆ. ಕೆಲವರು ಅವರವರ ಅಭಿಪ್ರಾಯಗಳನ್ನು ಮನಬಿಚ್ಚಿ ಹೇಳುತ್ತಿದ್ದಾರೆ. ಆದುದರಿಂದ ಈ ಶಾಂತವಾತಾವರಣವನ್ನು ಕಲಕುವ ಇಷ್ಟ ನನಗಂತೂ ಇಲ್ಲ. ಯಾವ ವಿಧದಿಂದಲೂ ಇದನ್ನು ಮಾಡಲು ಹೋಗುವುದಿಲ್ಲವೆಂದು ಹೇಳುತ್ತೇನೆ. ಹೀಗೆ ಹೇಳುವಾಗ, ಯಾರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ ಅದನ್ನು ತೀವ್ರವಾಗಿ ನಾನು ವಿರೋಧಿಸುವುದಿಲ್ಲ. ಆದರೆ ಅದಕ್ಕೆ ಜವಾಬುಕೊಡುವ ಸಂದರ್ಭ ಬಂದಾಗ ಕೊಡುತ್ತೇನೆ. ದಯವಿಟ್ಟು ಅದಕ್ಕೆ ಮನ್ನಣೆ ಕೊಡಬೇಕು, ಅದಕ್ಕೆ ಅಪಾರ್ಥ ಕಲ್ಪನೆ ಮಾಡಬಾರದೆಂದು ಹೇಳಿ ಪ್ರಾರ್ಥಿಸುತ್ತೇನೆ.

ನನ್ನ ಮಿತ್ರರಾದ ಶ್ರೀ ವೀರಣ್ಣಗೌಡರು ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ನಾವು ಅವರ ಅನುಯಾಯಿಗಳಾಗಿ ಕೆಲಸ ಮಾಡಿದ್ದೇವೆ. ಅದಕ್ಕಿಂತಲೂ ಹಿಂದೆಯೂ ಕೆಲಸ ಮಾಡಿದ್ದೇವೆ. ಮೈಸೂರು ದೇಶದ ಆಡಳಿತ ವಿಚಾರವಾಗಿ ಮಾತನಾಡುತ್ತಾ ಮೈಸೂರು ದೇಶದ ಮುಖ್ಯ ಮಂತ್ರಿಗಳು ಈ ಸಭೆಗೆ ಶೇಷಾದ್ರಿ ವರದಿಯನ್ನು ಒಪ್ಪಿಸಿದ ಸಂದರ್ಭದಲ್ಲಿ ಒಂದು ವಿಷಯ ಹೇಳಿದರು. ಆ ಸಮಿತಿಯ ವರದಿಗೆ ಯಾವಾಗಲೂ ಚಿರಋಣಿಯಾಗಿರಬೇಕು, ಬಹಳ ಉಪಕಾರ ಮಾಡಿದ್ದಾರೆ ಎಂದು ಪ್ರಾರಂಭದಲ್ಲಿ ಹೇಳಿದರು, ಹಿಂದೆ ಮೈಸೂರು ಕಾಂಗ್ರೆಸ್‌ನವರು ನಮ್ಮ ಮೇಲೆ ಒಂದು ban ಹಾಕಿದ್ದರು. ಆಮೇಲೆ ಆ ಸಮಿತಿಯ ವರದಿಯ ಮೂಲಕ ಅಂಕಿ ಅಂಶಗಳನ್ನೊದಗಿಸಿ ನಾವು ಮಾತನಾಡಲು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟರು. ಹಾಗೆ ಅಂಕಿ ಅಂಶಗಳನ್ನೊದಗಿಸಿ ಕೊಟ್ಟಾಗ ನಾವು ಮಾತನಾಡಬೇಕೆಂದಿದ್ದೆವು. ಅಂಥ ಸಂದರ್ಭ ಈಗಲೂ ಬಂದಿದೆ. ಈ ಸಂದರ್ಭದಲ್ಲಿ ನಾನು ಮಾತನಾಡುವುದು ಸೂಕ್ತವಾಗಿದೆ. ಈ ಸಮಿತಿಯ ವರದಿಯ ವಿಚಾರದಲ್ಲಿ, ಕರ್ಣಾಟಕ ಆಗಬೇಕು ಅಥವಾ ಬೇಡ ಎನ್ನುವ ವಿಚಾರದಲ್ಲಿ ನಾನು ಹೇಳುವುದಿಲ್ಲ.

ಆ ಸಮಿತಿಯ ವರದಿಯಿಂದ ಅನೇಕ ಅಂಕಿಅಂಶಗಳು ನಮಗೆ ದೊರೆಯುತ್ತಿತ್ತು. ಅದರ ಆಧಾರದ ಮೇಲೆ ನಾವು ಇಂಡಿಯಾ ಸರ್ಕಾರಕ್ಕೇ ಆಗಲಿ, ಎಸ್.ಆರ್.ಸಿ. ಕಮಿಷನ್ನಿನವರ ಮುಂದಾಗಲಿ ವೈಯಕ್ತಿಕವಾಗಿ ಏನು ಅಭಿಪ್ರಾಯವನ್ನಾದರೂ ಸೂಚಿಸಬಹುದಾಗಿತ್ತು. ಶೇಷಾದ್ರಿಕಮಿಟಿಯವರ ವರದಿಯಿಂದ ಆ ಎಲ್ಲ ಅವಕಾಶಗಳು ಸಿಕ್ಕಿದ್ದವು. ಈ ಎಸ್.ಆರ್.ಸಿ. ವರದಿಯನ್ನು ರೂಪಿಸುವ ಅವಕಾಶವೇ ಸಿಕ್ಕಿತ್ತು. ಅಲ್ಲದೆ, ಈ ವರದಿ ಬಂದಮೇಲೆಯೂ ಕೂಡ ಕಾಂಗ್ರೆಸ್ ಹೈಕಮ್ಯಾಂಡ್ ಮುಂದೆ ಹೇಳಿಕೊಳ್ಳುವುದಕ್ಕೂ ಅವಕಾಶವಾಯಿತು. ಇಷ್ಟೆಲ್ಲಾ ಆದಮೇಲೆ ಕಾಂಗ್ರೆಸ್ ಹೈಕಮ್ಯಾಂಡ್‌ನಿಂದ ಬಂದ ಆಜ್ಞೆಯ ವಿಷಯದಲ್ಲಿ ನಮ್ಮ ಮಿತ್ರರು, ಅದರಲ್ಲೂ ಮೈಸೂರು ದೇಶದ ಕಾಂಗ್ರೆಸ್ಸನ್ನು ರೂಪಿಸುವ ಜವಾಬ್ದಾರಿ ಹೊತ್ತಿರುವ ಮನುಷ್ಯರು ಆ ಹೈಕಮ್ಯಾಂಡಿನವರು ಕೊಟ್ಟ ಆಜ್ಞೆಗೆ ಏನು ಮರ್ಯಾದೆ ಕೊಟ್ಟರೆಂಬುದನ್ನು ನಾನು ಈ ಸಭೆಯಲ್ಲಿ ಹೇಳುವುದಕ್ಕಿಷ್ಟಪಡುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದನ್ನು ಹೇಳುವುದಿಲ್ಲವೆಂದು ಹೇಳುತ್ತಲೇ ಅದನ್ನು ಹೇಳುತ್ತಾ ಕೆರಳಿಸುತ್ತಿದ್ದೀರಲ್ಲಾ. ನಾನೂ ಅದಕ್ಕೆ ಸರಿಯಾಗಿ ತಮಗೆ ಹೇಳಲೇ ?

ಶ್ರೀ ಎ. ಭೀಮಪ್ಪನಾಯಕ್.—ನಮ್ಮ ಮಿತ್ರರಿಗೇಕೋ ಜಿಗುಟಿದಂತಾಗುತ್ತದೆಂದು ಕಾಣುತ್ತೆ. ಇದನ್ನು ಇಲ್ಲಿಗೇ ಬಿಡುತ್ತೇನೆ. ಅವರು ಮಾಡಿದ ಭಾಷಣದ ಮೇಲೆಯೇ ಜನತೆ ಅರ್ಥಮಾಡಿಕೊಳ್ಳಬಹುದು. ಮೈಸೂರು ದೇಶಕ್ಕೆ ಎಸ್.ಆರ್.ಸಿ. ಕಮಿಷನ್ನಿನವರು ಬಂದಾಗ ಮೈಸೂರು ದೇಶದ ಜನತೆಗೆಲ್ಲಾ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಸಂಪೂರ್ಣ ಅವಕಾಶವಿತ್ತು. ಯಾರು ಯಾವುದನ್ನೂ ಹೇಳುವುದಕ್ಕೂ ಬಂಧಿಸಿರಲಿಲ್ಲ. ಆದ್ದರಿಂದ ಈ ಕಮಿಷನ್ನಿನವರು ಎಲ್ಲಿಯೋ ಕುಳಿತುಕೊಂಡು ಏನೋ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ಇಡೀ ಭಾರತವನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಭಾರತದ ಅಭಿವೃದ್ಧಿಯ ದೃಷ್ಟಿಯಿಂದ ಭಾರತವನ್ನು ಪುನರ್ವಿಂಗಡಣೆಮಾಡಿ ಸರಿಯಾದ ಭೂಪಟವನ್ನು ಬರೆಯುವುದಕ್ಕೆ ದಕ್ಷರಾದ, ಶಕ್ತರಾದ, ಮನುಷ್ಯರನ್ನೇ ಇಂಡಿಯಾ ಸರ್ಕಾರದವರು ನೇಮಿಸಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಅವರು ಮಾಡಿರುವ ವರದಿಯನ್ನು ನಾವು ಅಷ್ಟು ಲಘುವಾಗಿ ಕಾಣುವುದಿಲ್ಲ. ಅಂದ ಮಾತ್ರಕ್ಕೇ ಆ ವರದಿಯಲ್ಲಿ ಏನೂ ತಪ್ಪೇ ಇಲ್ಲ, ಎಲ್ಲವೂ ಸರ್ವಾಂಗ ಸುಂದರವಾಗಿದೆಯೆಂದು ತಲೆಯ ಮೇಲಿಟ್ಟುಕೊಂಡು ಪೂಜೆ ಮಾಡಬೇಕೆಂದೂ ನಾನು ಹೇಳುವುದಿಲ್ಲ. ಅದರಲ್ಲಿ ಅಂಗೀಕರಿಸಬಹುದಾದ ವಿಷಯಗಳನ್ನು ತೆಗೆದುಕೊಳ್ಳಿ. ಸೂಕ್ತವಲ್ಲದಿರುವುವುಗಳನ್ನು ಬಿಟ್ಟುಬಿಡಿ. ಭಾರತಕ್ಕೆ ಸಂಬಂಧಪಟ್ಟ ಪಾರ್ಲಿಮೆಂಟಿದೆ. ಅದು ಸಭೆ ಸೇರಿದಾಗ ನಮ್ಮ ಅಭಿಪ್ರಾಯಗಳನ್ನು ಅವರಿಗೆ ತಿಳಿಸುವುದಕ್ಕೆ ನಮಗೆ ಅವಕಾಶವಿದೆ. ಆದ್ದರಿಂದ ಈ ವರದಿಯಲ್ಲಿ ಅಗತ್ಯ ಕಂಡರೆ ಬದಲಾವಣೆಗಳನ್ನು ಸೂಚಿಸೋಣ. ನಾನೂ ಕೂಡ

ಈ ವರದಿಯಲ್ಲಿರತಕ್ಕ ಕೆಲವು ವಿಷಯಗಳನ್ನು ಒಪ್ಪಲಾರೆ. ಉದಾಹರಣೆಗೆ ಹೇಳುವುದಾದರೆ, ಕೋಮುವಾರು ವಿಷಯವನ್ನು ನಮೂದು ಮಾಡಿದ್ದಾರೆ. ಲಿಂಗಾಯಿತರ ಸಂಖ್ಯೆ ಶೇಕಡ 45 ಎಂತಲೂ ಒಕ್ಕಲಿಗರ ಸಂಖ್ಯೆ ಶೇಕಡ 29 ಎಂತಲೂ ಸೂಚಿಸಿದ್ದಾರೆ. ಈ ವಿಷಯವನ್ನೇ ಅವರು ಪ್ರಸ್ತಾಪಿಸಬಾರದಾಗಿತ್ತು. ಸಾಧಾರಣವಾಗಿ ಯಾರೋ ಕೊಟ್ಟ ಅಭಿಪ್ರಾಯವನ್ನು ಕೇಳಿ ಬರೆದಿರಬಹುದು. ಅಷ್ಟೆ. ಏಕೆಂದರೆ, ಆ ಸಂಖ್ಯೆಯ ವಿಷಯದಲ್ಲಿಯೂ ಅವರು ಸರಿಯಾಗಿ ಹೇಳಿರುವಂತೆ ಕಾಣುವುದಿಲ್ಲ. ವಾಸ್ತವವಾಗಿ ಒಕ್ಕಲಿಗರ ಸಂಖ್ಯೆ ಶೇಕಡ 16 ಅಥವಾ 20 ನಮ್ಮ ಸಂಸ್ಥಾನದಲ್ಲಿರುವಲ್ಲಿ ಶೇಕಡ 29 ರಷ್ಟಿದ್ದಾರೆಂದು ಬರೆದಿದ್ದಾರೆ . . . . ಅವರೂ ಕೂಡ ನಿರ್ದಿಷ್ಟವಾಗಿ ಸೆನ್ಸಸ್ ತೆಗೆದು ಹೇಳಿರುವುದಾಗಿ ಹೇಳಿಲ್ಲ. ಹೆಚ್ಚು ಕಡಮೆ approximate ಆಗಿ ಕೊಟ್ಟಿದೆಯೆಂದು ಅವರೇ ಹೇಳಿದ್ದಾರೆ. ಇಂಥದನ್ನು ಅವರು ಹೇಳಲೇಬಾರದಾಗಿತ್ತು. ಇಲ್ಲದಿರುವ ಕೋಮುವಾರು ಭಾವನೆಯನ್ನು ಎತ್ತಿಕಟ್ಟುವುದಕ್ಕೆ ಇದು ಅವಕಾಶವಾಯಿತೆಂದು ಕಾಣುತ್ತೆ.

ಆದರೂ ಕೂಡ, ಇಷ್ಟನ್ನು ಬರೆದ ಮಾತ್ರಕ್ಕೇ ಅವರು ಖಂಡನಾರ್ಹರು ಇಂಥ ವರದಿಯನ್ನೂ ಈ ಸಭೆಯಲ್ಲಿಡುವುದೇ ಸರಿಯಿಲ್ಲ. ಕಸದ ಬುಟ್ಟಿಗೋ ಬೇರೆ ಇನ್ನೆಲ್ಲಾದರೋ ಹಾಕಬೇಕು ಎಂದು ಹೇಳಿ ಆಮೇಲೆ ನಾನು ಹಾಗೆ ಹೇಳಲಿಲ್ಲ, ಲೈಬ್ರರಿಯಲ್ಲಿ ಜನರು ಓದುವುದಕ್ಕೆ like a curio in the museum ಎಂದು ಇಡುವುದಕ್ಕೆ ಯೋಗ್ಯವೆಂದು ನಮ್ಮ ಮಿತ್ರರು ಹೇಳಿದರಲ್ಲಾ, ಆ ಮಿತ್ರರು ಇಡೀ ಇಂಡಿಯಾ ದೇಶಕ್ಕೆ ಉಪಕಾರ ಮಾಡಿದರೇ ಅಥವಾ ಅಪಕಾರ ಮಾಡಿದರೇ ಎಂಬುದನ್ನು ಯೋಚನೆ ಮಾಡಲಿ.

ಆಮೇಲೆ ಇನ್ನೊಂದು ರೀತಿಯ ತರ್ಕ ಬಂತು. ಈಗ ಮೈಸೂರು ಸಂಸ್ಥಾನ ಒಂದು ಮಾದರಿ ಸಂಸ್ಥಾನವಾಗಿದೆ. ನಾವೇಕೆ ಅವರೊಡನೆ ಸೇರಬೇಕು, viable state ಅಲ್ಲ ಎಂದು ಹೇಳಿದರು. ನಾವು ಇಂದು 40 ಕೋಟಿ ರೂಪಾಯಿಗಳ ಸಾಲ ಹೊತ್ತುಕೊಂಡು, $2\frac{3}{4}$ ಕೋಟಿ ರೂಪಾಯಿಗಳ ಡಿಫಿಸಿಟ್ ಇಟ್ಟುಕೊಂಡು, ನೀವು ನಮ್ಮ ಜನರಿಗೆಲ್ಲಾ ಅನುಕೂಲಗಳನ್ನೂ ಮಾಡಿಕೊಡುತ್ತೇವೆಂದು ಹೇಗೆ ತಾನೆ ಹೇಳುತ್ತೀರಿ. ಪಾಂಚವಾರ್ಷಿಕ ಯೋಜನೆ ಮುಂದೆ ಬರುತ್ತದೆ ನಮ್ಮಲ್ಲಿ ಮೂರು ಕಾಸೂ ಇಲ್ಲ. 85 ಕೋಟಿ ರೂಪಾಯಿಗಳನ್ನೂ ನೀವೇ ಕೊಡುವುದಾದರೆ ಕೊಡಿ, ಇಲ್ಲದಿದ್ದರೆ ನಮ್ಮಲ್ಲಿ ಯಾವ ಅಭಿವೃದ್ಧಿ ಕಾರ್ಯವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿಕೊಳ್ಳುವವರು, ಈಗ ಎರಡು ಮೂರು ವರ್ಷದಿಂದಲೂ ಒಂದು ಸ್ಕೂಲು ಕೊಡಿ, ಒಂದು ಆಸ್ಪತ್ರೆ ಕೊಡಿ ಎಂದು ಬಡಿದುಕೊಂಡರೂ ಕೊಡದೆ ದುಡ್ಡಿಲ್ಲವೆಂದು ಹೇಳುತ್ತಿರುವ ನೀವು ನಮ್ಮ ಮೈಸೂರು ದೇಶ ಬಹಳ ಉನ್ನತ ಮಟ್ಟದಲ್ಲಿದೆ, ಇದೇರೀತಿ ಡಿಫಿಸಿಟ್ ಇದ್ದರೂ ಇರಲಿ, ನಮ್ಮ ಜನರಿಗೆ ಏನೂ ಅನುಕೂಲ ಮಾಡುವುದಕ್ಕೆ ಯೋಗ್ಯತೆಯಿಲ್ಲದೆಯಿದ್ದರೂ ಹೀಗೆಯೇ ಇದ್ದರೆ ನಮಗೆ ಚೆನ್ನಾಗಿರುತ್ತದೆ, ರಾಜಪ್ರಮುಖರೇ ಇರಲಿ ಎನ್ನುವುದರಲ್ಲಿ ಅರ್ಥವೇನು ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕರ್ಣಾಟಕ ಬಂದರೆ 45 ಕೋಟಿ ಸಾಲ 75 ಕೋಟಿಯಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಆದರೂ, ಶೇಷಾದ್ರಿ ಕಮಿಟಿಯವರ ರಿಪೋರ್ಟನ್ನೇ ನೋಡುವುದಾದರೂ ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ಣಾಟಕ—ಇವೆರಡರ ಡಿಫಿಸಿಟ್ಟನ್ನು ಪರಿಗಣನೆಗೆ ತೆಗೆದುಕೊಂಡರೂ sizeable deficit ಒಂದು ಕೋಟಿ ಎಂದು ಹೇಳಿದ್ದಾರೆ. ಅದೇ ಇಲ್ಲಿ sizeable deficit 3 ಕೋಟಿ. ಹೀಗಿರುವಾಗ ಅವರು ಇಲ್ಲಿಗೆ ಬಂದು ನಮ್ಮಿಂದೇನಾದರೂ ಕಿತ್ತುಕೊಂಡು ಹೋಗುತ್ತಾರೆಯೇ ? ಹೀಗೆ ಹೇಳಿದರೆ, ಅವರು ಚೆನ್ನಾಗಿದ್ದಾರೆಂದು ಭಾವಿಸುವುದಾದರೆ, ಅವರು ಚೆನ್ನಾಗಿಯೇ ಬೇರೆಯಿರಲಿ ಎನ್ನುವುದೂ, ಅವರು ಚೆನ್ನಾಗಿಲ್ಲವೆಂದರೆ, ಚೆನ್ನಾಗಿಲ್ಲದವರನ್ನೇಕೆ ಕರೆದುಕೊಳ್ಳುತ್ತೀರಿ ಎಂದು ವಾದ ಮಾಡುವುದು ಸರಿಯೇ ?

ಇನ್ನೂ ಒಂದು ವಾದಮಾಡಿದರು. ಮೈಸೂರು ಸಂಸ್ಥಾನವನ್ನೂ ಕರ್ಣಾಟಕವನ್ನು ಸೇರಿಸುವ ಈ ಪ್ರಯತ್ನ ತಾಯಿಯನ್ನು ಕೊಲೆಮಾಡುವ ಪ್ರಯತ್ನದಂತೆ ಎಂದು ಹೇಳಿದರು. ಆದರೆ ವಾಸ್ತವವಾಗಿ ಯಾರು ತಾಯಿಯನ್ನು ಕತ್ತರಿಸಿದ್ದಾರೋ ಅವರೇ ಇಂದು ಶಿವಮೊಗ್ಗದವರಾಗಲೀ, ಚಿತ್ರದುರ್ಗದವರೇ ಆಗಲಿ ತಾವು ಅತ್ತಕಡೆಯೇ ಹೋಗುತ್ತೇವೆಂದರೆ ಅದಕ್ಕೆ ಒಪ್ಪುತ್ತಿಲ್ಲ.

ಒಬ್ಬ ಸದಸ್ಯರು.—ಚಿತ್ರದುರ್ಗದವರು ಯಾರು ಹೇಳಿದ್ದಾರೆ ?

ಶ್ರೀ ಎ. ಭೀಮಪ್ಪನಾಯಕ್.—ನಾವು, ತಮ್ಮ ಪ್ರದೇಶದಿಂದ ಬಂದಿರುವ ಏಳು ಪ್ರತಿನಿಧಿಗಳು ಹೇಳುತ್ತೇವೆ. ಮೈಸೂರು ಹೀಗೆಯೇ ಉಳಿದುಹೋಗುತ್ತದೆಂದರೆ ನಾವು ಆಂಧ್ರಕ್ಕೇ ಸೇರುತ್ತೇವೆನ್ನುತ್ತೇವೆಂದರೆ ಅವರೂ ಹೋಗಲೆ ?

ಆಮೇಲೆ ಮಂಡ್ಯದವರು, ಅವರೂ ನಮಗೊಂದು ಇರಲಿ, ಅನಂತರ ಆ ಹಾಸನದ ಶ್ರೀ ಪುಟ್ಟಸ್ವಾಮಿಯವರು ನಮಗೆ ಆ ತಮಿಳು ಪ್ರಾಂತ್ಯ ಹತ್ತಿರದಲ್ಲಿದೆ ಎಂದು ಹೇಳಿ ಅವರೂ ನಮಗೊಂದು ಪ್ರಾಂತ್ಯ ಇರಲಿ ಎಂದು ಹೇಳಬಹುದು. ನಮ್ಮ ಶ್ರೀ ಮುಲ್ಕಾರವರೂ ಸಹ ಅದೇ ರೀತಿ ಶಿವಮೊಗ್ಗದಲ್ಲಿರುವ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ತೆಲಗು ಮಾತನಾಡುತ್ತಾರೆ, ಆದ್ದರಿಂದ ಆ ಶಿವಮೊಗ್ಗವನ್ನೂ ಅಂಧ್ರಕ್ಕೆ ಸೇರಿಸಲಿ ಎಂದು ಹೀಗೆ ಪ್ರತಿಯೊಬ್ಬರೂ ಹೇಳುತ್ತಾ ಹೋದರೆ...

Sri Mulka GOVINDA REDDY.—I did not say like that. I wanted that Telugu-speaking areas which are contiguous should be added on to Andhra and I did not claim "any area which is a pocket." It is misrepresentation.

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೆ ನಾನು ಹೇಳುತ್ತೇನೆ ಆ ಚಿತ್ರದುರ್ಗದ ಪಕ್ಕದಲ್ಲೇ ಹೊಳಲ್ಕೆರೆ ಇದೆ. ಅದರ ಪಕ್ಕದಲ್ಲೇ ಆ ಚನ್ನಗಿರಿ ಇದೆ. ಅವುಗಳೆಲ್ಲವೂ ತೆಲಗು ಪ್ರದೇಶಗಳೆಂದು ನೀವು ಕೇಳಬಹುದು. ಆದರೆ ಅದನ್ನು ಒಪ್ಪತಕ್ಕವರ್ಯಾರು ? ತಾವು ಇಷ್ಟು ಹೊತ್ತೂ ಮಾತನಾಡಿದ ಬಗ್ಗೆ ತಾವೇನಾದರೂ ಪ್ರತಿಯೊಂದು ಪ್ರದೇಶದಲ್ಲಿರತಕ್ಕ ಜನಾಂಗದ ಬಗ್ಗೆ ಅಂಕೀ ಅಂಶಗಳನ್ನೇನಾದರೂ ಕೊಟ್ಟಿದ್ದೀರಾ ? ಆ ರೀತಿ ತಾವೇನೂ ಕೊಟ್ಟಿಲ್ಲ. ಕೋಲಾರದಲ್ಲಿ ತೆಲುಗು ಮಾತೃಭಾಷೆ ಎಂದು ಹೇಳಿದರು. ಅವರ ಮಾತೃಭಾಷೆ ತೆಲುಗು ಆಗಿದ್ದರೂ ಅವರ ವಿಶಿಷ್ಟ ವ್ಯವಹಾರಗಳೆಲ್ಲವೂ ಮತ್ತು ಅವರ ಆಚರಣೆಗಳೆಲ್ಲವೂ ಕನ್ನಡದಲ್ಲೇ ಇದೆ. ಈ ದಿವಸ ಕನ್ನಡನಾಡಿನಲ್ಲಿ ಉಳಿದಿರತಕ್ಕ ಜನಾಂಗ ಅವರ ಭಾಷೆಯಾವುದೇ ಆಗಿರಲಿ ಅವರೆಲ್ಲರೂ ಈ ನಮ್ಮ ಮೈಸೂರಿನ ಬೆಳವಣಿಗೆಗೆ ಕಾರಣಭೂತರಾಗಿರುತ್ತಾರೆ. ಏನು ಹೇಳಿದ್ದಾರೆಂಬುದು ಈಗಾಗಲೇ ಎಲ್ಲರಿಗೂ ಗೊತ್ತಾಗಿದೆ. ಆದರೆ ಅವರು ಆ ಆಂಧ್ರನಾಡಿಗೆ ಹೋಗಲು ಇಷ್ಟಪಟ್ಟಿದ್ದಾರೆಯೇ ಅಥವಾ

(ಶ್ರೀ ಎ. ಭೀಮಪ್ಪನಾಯಕ್.)

ಇಲ್ಲವೇ ಅನ್ನುವ ವಿಚಾರವನ್ನೀಗ ಮಾತ್ರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ತಹಲ್‌ವರೆಗೂ ಎಲ್ಲಾ ಜನರ ಉದ್ದೇಶಗಳೂ, ಭಾವನೆಗಳೂ ಒಂದಾಗಿ ಈ ದೇಶ ಬೆಳೆದ ಕೊಂಡು ಬಂದಿದೆ. ಹೀಗಿರುವಾಗ ಈ ದಿವಸ ಕೇವಲ ಒಂದು ಕೋಪಿನವರು ಮಾತ್ರ ಈ ಮೈಸೂರನ್ನು ಹೀಗೇ ಉಳಿಸುತ್ತೇವೆ ಎಂದು ಹೇಳಿದರೆ ಇದನ್ನು ಯಾರು ಕೇಳುತ್ತಾರೆ? ಈ ಭಾವನೆಗೆ ಯಾರು ಮನ್ನಣೆ ಕೊಡುತ್ತಾರೆ? ಯಾರಾದರೂ ಹಾಗೊಂದು ವೇಳೆ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದಲ್ಲಿ ಈ ಮೈಸೂರಿನ ಅಭಿವೃದ್ಧಿ ಕುಂಠಿತವಾಗುತ್ತದೆ ಎನ್ನತಕ್ಕಂಥ ಭಾವನೆಯನ್ನು, ಅಂಥ ಒಂದು ಅನುಮಾನವನ್ನು ಹೊಂದಿದ್ದರೆ ಅದು ಖಂಡಿತ ಭ್ರಾಂತಿ; ಆ ಮಾತನ್ನು ಇನ್ನಾದರೂ ಬಿಟ್ಟುಬಿಡಿ ಎಂದು ನಾನು ಅವರಲ್ಲಿ ನಮಸ್ಕಾರ ಮಾಡಿ ಕೇಳಿಕೊಳ್ಳುತ್ತೇನೆ. ಕರ್ಣಾಟಕ ಪ್ರಾಂತ್ಯವಾದರೆ ಯಾರಿಗೂ ತೊಂದರೆಯಾಗುವುದಿಲ್ಲ, ಎಲ್ಲರಿಗೂ ಒಳ್ಳೆಯದಾಗುತ್ತದೆ; ಅಂಥ ಭಾವನೆಯಿಂದಲೇ ಈಗ ಈ ಪ್ರಾಂತ್ಯ ನಿರ್ಮಾಣ ಮಾಡಲು ಹೊರಟಿದ್ದೇವೆ. ಅದಕ್ಕಾಗಿ ಈ ಹೊಸ ಪ್ರಾಂತಕ್ಕೆ ಸರ್ವರೂ ಮನ್ನಣೆಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಈ ಮೈಸೂರನ್ನು ಖರೀದಿಗೆ ಮಾಡಿಕೊಳ್ಳುತ್ತಾರೆಂಬ ಅಭಿಪ್ರಾಯವನ್ನಿಟ್ಟುಕೊಂಡು ಮಾತನಾಡುವುದು ಮಾತ್ರ ಸರಿಯಲ್ಲವೆಂದು ಹೇಳುತ್ತೇನೆ. ಮೈಸೂರಿನಲ್ಲಿರತಕ್ಕ ಈ ಭಾಗಗಳು, ಆ ಭಾಗಗಳು ಎಲ್ಲವೂ ಇನ್ನೆಲ್ಲಿಗೋ ಹೋಗಿ ಸೇರಬೇಕೆಂದು ಹೇಳುತ್ತಿರುವುದು ಅಷ್ಟು ವಿಹಿತವಾದದ್ದಲ್ಲ? ಇದೆಲ್ಲವನ್ನೂ ಅವರವರ ಚಪಲದ ಪೂರೈಕೆಗಾಗಿ ಹೇಳಿಕೊಂಡಿರಬಹುದೇ ಶಿವಾಯಿ ಇದು ಯಾರಿಗೂ ಅಷ್ಟು ಶ್ರೇಯಸ್ಕರವಾದುದಲ್ಲ ಎಂದು ತಿಳಿಸುತ್ತೇನೆ. ಕಾರಣವಾದರೂ ಇಷ್ಟೆ-ಈವರೆಗೂ ನಾವೆಲ್ಲರೂ ಒಂದು ಸಹೋದರ ಭಾವನೆಯಿಂದ ಬಾಳಿ, ಬೆಳೆದುಕೊಂಡು ಬಂದಿದ್ದೇವೆ. ನಾವು ಇದೇ ರೀತಿಯಾಗಿ ಎಲ್ಲರೂ ಒಂದಾಗಿ ಬಾಳಿದರೆ ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ನಾನು ತಿಳಿಸಬಚ್ಛಿಸುತ್ತೇನೆ. ನಾವು ಈ ದಿವಸ ನಮ್ಮ ಮೈಸೂರಿನಲ್ಲಿ ಎಲ್ಲಾ ಅನುಕೂಲತೆಗಳೂ ಇವೆ, ಇದು ರಾಮರಾಜ್ಯ, ಮಾದರೀ ಸಂಸ್ಥಾನ ಎಂದು ಹೇಳಿಕೊಳ್ಳಬಹುದು. ಇದೇ ಭಾವನೆಯಿಂದ ತಾವು ಬೇರೆ ಪ್ರದೇಶಗಳ ವಿಚಾರವನ್ನೂ ಪರ್ಯಾಲೋಚಿಸಿ ನೋಡುವುದಾದರೆ ಕೇವಲ ಜಗತ್ತಿನಲ್ಲೆಲ್ಲಾ ಈ ನಮ್ಮ ಮೈಸೂರು ಒಂದೇನೇನು ಹೀಗೆ ಮುಂದುವರಿದಿರತಕ್ಕ ದೇಶ? ಇಡೀ ಜಗತ್ತಿನಲ್ಲಿ ಇನ್ನಾವ ದೇಶವೂ ಇಷ್ಟು ಪ್ರಗತಿ ಹೊಂದಿಲ್ಲವೇನು? ಇಂಥ ರಾಮರಾಜ್ಯಗಳು ಬೇರೆ ಎಲ್ಲಿಯೂ ಇಲ್ಲವೇನು? ಈ ದಿವಸ ತಾವು ಹೇಳುತ್ತಿರುವ ಈ ನಮ್ಮ ರಾಮರಾಜ್ಯವನ್ನು ಆ ಕೊಡಗಿನಂಥ ಒಂದು ಸಣ್ಣ ತುಕ್ಕಡಿ ರಾಜ್ಯದ ಅಭಿವೃದ್ಧಿಗೆ ಹೋಲಿಸಿ ನೋಡುವುದಾದರೆ—ಈ ದಿವಸ ಅವರೂ ಕೂಡ ನಮ್ಮ ಹಾಗೇ ಹೇಳುತ್ತಿದ್ದಾರೆ; ಅವರು ನಮಗಿಂತಲೂ ಹೆಚ್ಚಿಗೆ ಪ್ರೋಗ್ರೆಸಿವ್ ಆಗಿದ್ದಾರೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಇದೇ ಕೂಗು ಪ್ರತಿಯೊಂದು ಕಡೆಯಲ್ಲೂ ಎದ್ದಿದೆ. ಆದಕಾರಣ ಈ ಒಂದು ನೆಪದ ಮೇಲೆ ನಮ್ಮ ಜೊತೆಗೆ ಯಾರೂ ಸೇರಬೇಕಾದ್ದಿಲ್ಲ ಎಂದು ಹೇಳಿದರೆ ಆ ಬೊಂಬಾಯಿ ಪ್ರಾಂತ್ಯದಲ್ಲಿ ಉಳಿಯತಕ್ಕ ಕನ್ನಡಿಗರಿಗೊಂದು ಕರ್ಣಾಟಕ, ಆ ಹೈದರಾಬಾದಿಗೊಂದು ಕರ್ಣಾಟಕ, ಕೊಳ್ಳೇಗಾಲಕ್ಕೊಂದು ಕರ್ಣಾಟಕ, ಆ ಕೂರ್ಗಿಗೂ ಒಂದು ಕರ್ಣಾಟಕ, ಆ ದಕ್ಷಿಣ ಕನ್ನಡ ಜಿಲ್ಲೆಗೂ ಒಂದು ಕರ್ಣಾಟಕ: ಏತಕ್ಕೆಂದರೆ ಆ ದಕ್ಷಿಣ ಕನ್ನಡ ಜಿಲ್ಲೆಯವರೂ ಕೂಡ ಹೇಳಬಹುದು—ಈ ದಿವಸ ನಮ್ಮಲ್ಲಿ ಒಂದು ಪ್ರತ್ಯೇಕ ಕಾಲೇಜಿದೆ, ಎಂಜಿನಿಯರಿಂಗ್ ಕಾಲೇಜಿದೆ, ನಾವು ವಿದ್ಯಾಭ್ಯಾಸದಲ್ಲಿ ಶೇಕಡ 50—60 ಮುಂದುವರಿದಿದ್ದೇವೆ. ಪಕ್ಕದಲ್ಲಿ ಸಮುದ್ರ ತೀರವಿದೆ, ಅದಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಗೂ ಒಂದು ಕರ್ಣಾಟಕ ಪ್ರಾಂತ್ಯ ಕೊಡಿ ಎಂದು ಕೇಳಬಹುದು, ಹೀಗೆ ಎಷ್ಟೆಷ್ಟು ಊರುಗಳಿಗೆ ಮತ್ತು ಬೀದಿಗಳಿಗೆ ಒಂದೊಂದು ಕರ್ಣಾಟಕ ಪ್ರಾಂತ್ಯವನ್ನು ನಿರ್ಮಾಣ ಮಾಡಲು ಸಾಧ್ಯವಿದೆ ಎಂದು ಕೇಳುತ್ತೇನೆ? ಆದರೆ, ಆ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳೂ ಸಹ ನಾವು ಬೇರೆ ಪ್ರಾಂತ್ಯಕ್ಕೆ ಸೇರಿಸಿಕೊಳ್ಳುತ್ತೇವೆಂದು ಹೇಳಿದರೆ ಅದು ಸಾಧ್ಯವಾಗುತ್ತದೆಯೇ? ಶ್ರೀ ಕೆ. ಹನುಮಂತಯ್ಯನವರು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಅವರು ಹೇಳಿದ್ದಕ್ಕೆ ಅನುಸಾರವಾಗಿ ಈ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ ಒಂದು ಪ್ರತ್ಯೇಕ ಇತಿಹಾಸವೂ ಕೂಡ ಇದೆ. ಹಿಂದೆ ಒಂದಾವರ್ತಿ ಈ ಎರಡು ಜಿಲ್ಲೆಗಳೂ ಮೈಸೂರು ಸರ್ಕಾರದಮೇಲೆ ತಿರುಗಿ ಬಿದ್ದಿದ್ದುವಂತೆ. ಹಾಗೆ ತಿರುಗಿ ಬೀಳಲು ಕಾರಣ ಕಾರಣವೇನೆಂದರೆ ಆ ಜಿಲ್ಲೆಗಳವರು ಒಂದಾವರ್ತಿ ಕೊಟ್ಟ ಕಂದಾಯದ ಹಣವನ್ನೆಲ್ಲಾ ಯಾರ್ಯಾರು ವಸೂಲ್ಮಾಡಿದ್ದಾರೋ ಅವರೇ ಸುಮಾರು 20 ಲಕ್ಷ ರೂಪಾಯಿಗಳವರೆಗೂ ತಿಂದುಹಾಕಿಬಿಟ್ಟಿದ್ದರಂತೆ. ಹಾಗೆ ಕೊಟ್ಟದ್ದನ್ನು ತಿಂದುಹಾಕಿ ಮತ್ತೆ ಪುನಃ ನೀವು ಕಂದಾಯ ಕೊಡಬೇಕೆಂದು ಆ ಜಿಲ್ಲೆಗಳ ಜನರನ್ನು ಕೇಳಲು ಹೋದಾಗ ಅವರು ಆ ರೀತಿ ನಮ್ಮ ಹತ್ತಿರ ಪುನಃ ಕಂದಾಯ ಕೇಳಲು ಬಂದರೆ ನಿಮ್ಮನ್ನು ಚೆನ್ನಾಗಿ ಒದೆಯುತ್ತೇವೆಂದು ಹೇಳಿದ್ದರಂತೆ. ಆ ಕಾರಣಕ್ಕಾಗಿ ಆ ಜಿಲ್ಲೆಗಳ ಜನರೆಲ್ಲಾ ಬಹಳ ಧಾರ್ಡ್ಲೆಕೋರರು, ಅವರು ನಮಗೆ ಸೇರುವುದೇ ಬೇಡ, ಅವರನ್ನು ಬೇರೆ ಯಾವುದಾದರೂ ಸೀಡೆಡ್ ಡಿಸ್ಟ್ರಿಕ್ಟ್‌ಗಳಿಗೆ ಕೊಟ್ಟುಬಿಡೋಣ ಎಂದು ಹೇಳಿ ಹಿಂದೆ ಆಗಲೆ ಒಂದಾವರ್ತಿ ಆ ಹೈದರಾಬಾದಿಗೆ ಕೊಟ್ಟುಬಿಟ್ಟಿದ್ದರಂತೆ. ಆದರೆ ಅವರು ಮತ್ತೆ ಈ ಭಾಗಗಳನ್ನು ಮೈಸೂರಿಗೆ ಬಿಟ್ಟುಕೊಟ್ಟರಂತೆ. ಈ ಪ್ರದೇಶಗಳು ಮೈಸೂರು ಆಡಳಿತಕ್ಕೆ ಸೇರುವ ಮುನ್ನ ಪಾಳೇಗಾರರ ಆಡಳಿತದಲ್ಲಿದ್ದವು. ಈ ಜಿಲ್ಲೆಗಳು ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿದ್ದೆಲ್ಲಾ 1779ರಿಂದ ಈಚೆಗೆ. ಕೇವಲ ಮೊನ್ನೆ ಮೊನ್ನೆ ತನಕ ನಾವೆಲ್ಲರೂ ಅಲ್ಲಿ ಪಾಳೇಗಾರರಾಗಿದ್ದವರು. ನಾವು ಹೀಗೆ ಬಹಳ ಜೋರಾಗಿದ್ದವರು. ಆದಕಾರಣ ಈ ದಿವಸ ನನಗೂ ಸಹ ಆ ಚಿತ್ರದುರ್ಗವನ್ನು ಸ್ವತಂತ್ರವಾಗಿ ಇಟ್ಟುಕೊಂಡು ಆಡಳಿತ ನಡೆಸಲು ಅವಕಾಶ ಕೊಡಿ ಎಂದರೆ ಕೊಡುತ್ತೀರೇನು? ಇಂಥ ವಾದದಲ್ಲಿ ಯಾವ ಪ್ರಯೋಜನವೂ ಇಲ್ಲ. ಇದರಲ್ಲಿ ಯಾವ ಒಂದು ಸದ್ಭಾವನೆಯೂ ಇಲ್ಲ. ಇದರಿಂದ ಇಂಡಿಯಾ ದೇಶದ ಹಿತವಾಗಲೀ ನಮ್ಮ ಪ್ರಾಂತ್ಯಗಳ ಹಿತವಾಗಲೀ ಸಾಧನೆ ಆಗುವುದಿಲ್ಲ. ನಾವು ದೂರದೃಷ್ಟಿಯಿಟ್ಟುಕೊಂಡು ವಾದಮಾಡಬೇಕೇ ಹೊರತು ಅವರು ನಮ್ಮ ಮನೆಗೆ ಬಂದರೆ ಅವರು ನಮ್ಮ ಕುತ್ತಿಗೆಯನ್ನು ಹಿಸುಕುತ್ತಾರೆ. ನಮ್ಮ ತಲೆಯ ಮೇಲೆ ಕುಳಿತುಕೊಳ್ಳುತ್ತಾರೆ ಎಂದು ಹೇಳುವುದು ಸರ್ವಥಾ ಯಾರಿಗೂ ನ್ಯಾಯವಾದ್ದಲ್ಲ. ಆ ರೀತಿ ಎಂದಿಗೂ ಆ ಮಹಮದ್ ಬಿನ್ ತೊಗಲಕ್ಕನ ದರ್ಬಾರ್ ನಡೆಯಲು ಅವಕಾಶವಿಲ್ಲ.

ಅವರು ನಮ್ಮ ಮನೆಗೆ ಬರುತ್ತಾರೆ. ನಮ್ಮ ಮನೆಗೆ ನುಗ್ಗುತ್ತಾರೆ. ಬೇಡ ಎಂದು ಹೇಳಿದರೆ ಯಾರಮನೆಗೆ ಯಾರೂ ಬರುವುದಿಲ್ಲ. S. R. C. ರಿಪೋರ್ಟಿನಲ್ಲಿ **administrative set-up**ನಲ್ಲಿ ನಾಳೆ ದಿವಸ ಇಲ್ಲ

ಖರ್ಚು ಕಡಿಮೆ ಆದೀತು. ಒಟ್ಟಿನಲ್ಲಿ ಲೆಖ್ಖ ತೆಗೆದುಕೊಂಡರೆ ಒಂದು ಕೋಟಿ ರೂಪಾಯಿಗಳು deficit ಆಗಿ ತೊಂದರೆಯಾಗಲಾರದು ಎಂದು ಹೇಳಿದ್ದಾರೆ. ಈಗ ಭದ್ರಾವತಿ ಕಟ್ಟಿದ್ದೇವೆ. ಜೋಗ್ ಕಟ್ಟಿದ್ದೇವೆ. ಇನ್ನೊಂದು ಕಟ್ಟಿದ್ದೇವೆ ಎಂದು ಹೇಳುತ್ತಾರೆ. ಅದನ್ನೆಲ್ಲಾ ಅವರು ಹೊತ್ತುಕೊಂಡು ಹೋಗುತ್ತಾರೆಯೇ? ಭದ್ರಾವತಿಯಿಂದ ಬಂದ ಆದಾಯವನ್ನು ದೇಶಕ್ಕೆ ಹಂಚುತ್ತಾರೆ. ದೇಶದ ಆದಾಯ ದೇಶದ ಹಿತಕ್ಕೋಸ್ಕರ ಖರ್ಚಾಗುತ್ತದೆ. ಇವತ್ತು ನಮಗೆ 345 ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಕೊಡುವುದು ಐದು ವರ್ಷಗಳವರೆಗೆ. ಆ ಐದು ವರ್ಷಗಳು ಕಳೆದು ಹೋಗುತ್ತಿದೆ. ಇವತ್ತು ಅದನ್ನು revise ಮಾಡುವ ದಿವಸ ಬಂದಿದೆ. ಮೈಸೂರಿಗೆ ಕೊಡುವ 345 ಲಕ್ಷ ರೂಪಾಯಿಗಳ ಲೆಕ್ಕಕ್ಕೆ ತೆಗೆದುಕೊಂಡರೆ *per capita* expenditure by the Centre on account of this is Rs. 4 per head. ಅಂದರೆ 345 ಲಕ್ಷ ರೂಪಾಯಿಗಳನ್ನು 90 ಲಕ್ಷ ಜನರಿಗೆ ಕೊಟ್ಟರೆ, ಅದು ಸರಾಸರಿ 4 ರೂಪಾಯಿಗಳನ್ನು ಕೊಟ್ಟಹಾಗಾಗುತ್ತದೆ. ಈ ನಾಲ್ಕು ರೂಪಾಯಿಗಳು ನಾಳೆ ದಿವಸ ಹೋದಾಗ ನಾವು ನಮ್ಮ ಆದಾಯವನ್ನು ಸರಿಪಡಿಸಿಕೊಳ್ಳಬೇಕಾದರೆ ಮತ್ತೆ ಯೋಚನೆ ಮಾಡಬೇಕಾದೀತು : ನಾವು ಹೇಗೆ ಆಡಳಿತ ನಡೆಸುವುದು? ಅವರಿಗೆ ಕೊಡುವುದನ್ನು ಅವರಿಗೆ ಕೊಡಲಿ. ನಮಗೆ ಕೊಡುವುದು ನಮಗೇ ಕೊಡಲಿ, ನಮ್ಮ ರಾಜ್ಯ ನಮಗೇ ಇರಲಿ. ಬ್ರಿಟಿಷ್ ರಾಜ್ಯದಲ್ಲಿ ಚಕ್ರವರ್ತಿಯವರು ಇಲ್ಲವೆ? ಏನು ತಪ್ಪು? Saudi Arabia ದಿಂದ ಚಕ್ರವರ್ತಿಯನ್ನು ಕರೆಸಿದ್ದೀರಿ, ಭೂಪಾಲ್ ನೇಪಾಳ್‌ಗಳಿಂದ ದೊರೆಗಳನ್ನು ಕರೆಸಿದ್ದೀರಿ, ಅವರಿಗೆ ಸತ್ಕಾರ ನಡೆಸಿದ್ದೀರಿ. ಮೈಸೂರು ಮಹಾರಾಜರೂ ಏತಕ್ಕೆ ಇರಬಾರದು, ಏತಕ್ಕೆ democratic republic ರಾಜ್ಯಾಂಗವನ್ನು ತೆಗೆದುಹಾಕಬಾರದು ಎಂದು ನಾವು ಹೇಳುವ ಮಾತುಗಳನ್ನು ಹೊರಗಡೆ ಕೇಳಿದರೆ ನಮ್ಮ ರಾಷ್ಟ್ರಕ್ಕೆ ಅವು ಬೆಲೆ ಬರುವ ರೀತಿಯಲ್ಲಿಲ್ಲ. ನಮ್ಮ ಮಹಾರಾಜರಿಗೆ ಗೌರವವಿದೆ. ಎಲ್ಲರಿಗಿಂತಲೂ ಹೆಚ್ಚಾಗಿ ನಾನು ಗೌರವ ಇಟ್ಟುಕೊಂಡಿದ್ದೇನೆ. ಅವರ ಮಕ್ಕಳು ರಾಷ್ಟ್ರದ ಮಹಾರಾಜರಾಗಿ ರಾಜ್ಯಭಾರ ಮಾಡುವ ಹಕ್ಕನ್ನು ಆಗಲೇ ಕಳೆದುಕೊಂಡಿದ್ದಾರೆ. ಅದೂ ಹೋಗಲಿ. ಏನೋ ಒಂದು ದೊಡ್ಡ ಚಳುವಳಿ ಹೂಡಿ ಜೈಲಿಗೆ ಹೋಗಿ, 562 ರಾಜರು ಬೇಡ ಎಂದು ಅವರಿಗೆ ಪೆನ್ಷನ್ ಕೊಟ್ಟು ಕೂರಿಸಿ, ಒಂದು ಪ್ರಜಾಸತ್ತಾತ್ಮಕ ಸರ್ಕಾರವನ್ನು ತಂದಿದ್ದೇವೆ. ಅಂತಹ ಸರ್ಕಾರದಲ್ಲಿ ಮುಂದೆ ಆಗುವ ಕರ್ಣಾಟಕಕ್ಕೆ ಚಕ್ರವರ್ತಿಯಾಗಿ ಏಕೆ ಇರಬಾರದು ಎಂದರೆ, ಇದು ಈ ಕಾಲಕ್ಕೆ ಸರಿಹೋಗುವುದಿಲ್ಲ ಎನ್ನುವ ಒಂದು ವಾದ ಈ ಸಂದರ್ಭದಲ್ಲಿ ತಮ್ಮ ಮುಂದೆ ಇಡುತ್ತೇನೆ ಒಂದು ಕರ್ಣಾಟಕವಾದರೂ ಸಂತೋಷ. ಎರಡು ಕರ್ಣಾಟಕವಾದರೂ ಸಂತೋಷ. ಒಂದು ಕರ್ಣಾಟಕವಾಗಿದ್ದರೆ ನಮಗೆ ಏನು ಅನುಕೂಲತೆ ಇದೆ? ಬೊಂಬಾಯಿ ಕರ್ಣಾಟಕ neglect ಆಗಿ ಹೇಳದೆ ಕೇಳದೆ ಇದ್ದಾಗ್ಯೂ ಕೂಡ ಅಲ್ಲಿ literacyಯಲ್ಲಿ ನಮಗಿಂತ ಶೇಕಡ 2 ಭಾಗ ಜಾಸ್ತಿ ಇದೆ. ಶೇಕಡ 20 ಭಾಗ ಇಲ್ಲಿ ಇದ್ದರೆ, ಅಲ್ಲಿ ಶೇಕಡ 22 ಭಾಗ ಇದ್ದಾರೆ. ಅವರು ಹೇಗೆ ಇದ್ದಾರೆ ಎನ್ನುವ ವಾದ ಇರಲಿ. Percentage of literacy ಅಂತೂ ಜಾಸ್ತಿ ಇದೆ. ಬೊಂಬಾಯಿ areaದ *per capita* income 5 ಆಣೆ 5 ಕಾಸು ಇದೆ. ಮೈಸೂರಿನ *per capita* income 2 ಆಣೆ 6 ಕಾಸು ಇದೆ ಎಂದು Planning Commissionನ್ನಿನ ಅಧ್ಯಕ್ಷರಾದ ಶ್ರೀ ಮಹಾಬಲೋನಿಸ್‌ರವರು ಹೇಳಿದ್ದನ್ನು ಇಲ್ಲಿ ಅರಿಕೆಮಾಡಿಕೊಳ್ಳುತ್ತಿದ್ದೇನೆ. ಒಟ್ಟಿನಲ್ಲಿ ಹೇಳಬೇಕು ಎಂದರೆ ಅಲ್ಲಿಯವರು ಸಾಧಾರಣವಾಗಿ ಎಲ್ಲಾ ವಿಧದಲ್ಲೂ ನಮಗಿಂತ ಹೆಚ್ಚು ಅನುಕೂಲಸ್ಥರಾಗಿ ಬಾಳುತ್ತಿದ್ದಾರೆ. ಶೇಷಾದ್ರಿ ರಿಪೋರ್ಟ್ ಎಷ್ಟರ ಮಟ್ಟಿಗೆ ಅಸಮರ್ಪಕವಾಗಿದೆ ಎನ್ನುವುದಕ್ಕೆ ಅವರ ರಿಪೋರ್ಟಿನಲ್ಲಿ South Canaraದಲ್ಲಿ ಏನೇನಿದೆ ಎಂದು ತಿಳಿದುಕೊಳ್ಳುವುದಕ್ಕೆ ಅವರಿಗೆ ಅವಕಾಶವಾಗಿಲ್ಲ. ಅಲ್ಲಿಯ ಬಡ್ಜೆಟರಿ position ಏನು, ಅಲ್ಲಿಯ ಆದಾಯವೇನು, ವ್ಯಯ ಏನು, ಅಲ್ಲಿರತಕ್ಕ ಸೌಕರ್ಯಗಳು ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಬರೆದಿರುವ ಇವರು ಎಷ್ಟರಮಟ್ಟಿಗೆ ಅಂಕಿ ಅಂಶಗಳನ್ನು ಸರಿಯಾಗಿ ಒದಗಿಸಿದ್ದಾರೆ ಎಂಬುದನ್ನು ಕೇಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಂಕಿ ಅಂಶಗಳನ್ನು ತಾವು ಹೇಳಿದ್ದೀರಿ. ಆ ಪುಸ್ತಕ ಇದ್ದರೆ ಬೇಕು.

Sri A. BHEEMAPPA NAIK.—I am prepared to place all that on the Table of this House tomorrow, if you so want it. ನನ್ನ ಹತ್ತಿರ ಈಗ ಇಲ್ಲ. ನನ್ನ ಮಿತ್ರರಾದ ಶ್ರೀ ವೀರಣ್ಣಗೌಡರು ತಮ್ಮ ಭಾಷಣದಲ್ಲಿ ಎರಡು ಕರ್ಣಾಟಕವಾಗಬೇಕೆಂದು ಹೇಳಿದರು. ಹೀಗಿದ್ದಾಗ್ಯೂ ಮತ್ತೆ ಅವರ ಭಾಷಣದಲ್ಲಿ ಒಂದು ವೇಳೆ ಹೈದರಾಬಾದ್ disintegrate ಆದರೆ, ಆಗ ಒಂದು ಕರ್ಣಾಟಕವಾದರೆ, ಏನೂ ತಪ್ಪಾಗುವುದಿಲ್ಲ, ಎಂದು ಹೇಳಿದರು. ಯಾವ ಮನುಷ್ಯನೇ ಆಗಲಿ, ಯಾವ ನಿಮಿಷದಲ್ಲಾದರೂ ಕೂಡ ತನ್ನ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳಬಹುದು. ಇನ್ನೊಂದು ಕಡೆ change is the progress of human being ಎಂದು ಹೇಳಿದ್ದಾರೆ. ಪ್ರತಿ ನಿಮಿಷಕ್ಕೂ ಬದಲಾವಣೆ ಮಾಡಬಹುದು. ಇದು ಮನುಷ್ಯನ ಏಳಿಗೆಯ ಲಕ್ಷಣ ಎಂದು ಹೇಳಿದ್ದಾರೆ. ಒಬ್ಬ ಮನುಷ್ಯನು ದಡ್ಡನಾಗಿದ್ದರೆ ನಾಳೆ ಬುದ್ಧಿವಂತನಾಗುವುದಿಲ್ಲ ಎಂದು ಇದೆಯೇ? ಆದ್ದರಿಂದ ಇವತ್ತು ಎರಡು ಕರ್ಣಾಟಕ ಆಗಬೇಕು ಎಂದು ನನ್ನ ಮಿತ್ರರು ತಿಳಿದುಕೊಂಡಿರುವವರು ನಾಳೆ ಬದಲಾವಣೆ ಮಾಡಿ ಒಂದೇ ಕರ್ಣಾಟಕ ಆಗಬೇಕು ಎಂದು ಹೇಳಿದರೆ ಅದು ತಪ್ಪಲ್ಲ. ನಾನು ಆ ದೃಷ್ಟಿಯಿಂದ ಹೇಳುವುದಾದರೆ, ಎರಡು ಕರ್ಣಾಟಕವಾದರೆ ಏನು ಒಂದು ಕರ್ಣಾಟಕವಾದರೆ ಏನು? ಮುಖ್ಯವಾಗಿ ಮೈಸೂರಿನ ಹಿತ ಮತ್ತು ಇಂಡಿಯಾ ಹಿತ, ಇವೆರಡನ್ನೂ ಬೆರೆಸಿ ಯೋಚನೆ ಮಾಡೋಣ. ಇವೆರಡನ್ನೂ ಬೆರೆಸಿ ಯೋಚನೆ ಮಾಡುವಾಗ ನಮಗೆ ಏನು ಅರ್ಥವಾಗುತ್ತದೆ ಎಂದರೆ ಒಂದು ಮನೆ ಮೇಲೆ ಕೂತುಕೊಂಡರೆ ಸುತ್ತುಮುತ್ತಲಿರುವ 10 ಮನೆಗಳು ಕಾಣುತ್ತವೆ. ಗುಡ್ಡದ ಮೇಲೆ ಕೂತುಕೊಂಡರೆ 100 ಮನೆಗಳು ಕಾಣುತ್ತವೆ. ಬೆಟ್ಟದ ಮೇಲೆ ಕೂತರೆ ಹತ್ತಾರು ಹಳ್ಳಿಗಳು ಕಾಣುತ್ತವೆ. ಈ ರೀತಿಯಾಗಿ ಫಸಲಾಲಿ ಕಮಿಷನರವರು ಇಂಡಿಯಾದ ಹಿತದೃಷ್ಟಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಇಂಡಿಯಾದ ಭೂಪಟವನ್ನು ಮತ್ತು ಇಂಡಿಯಾದ ಆಗುಹೋಗುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವರಿಗೆ ನಮ್ಮಷ್ಟೆ ಬುದ್ಧಿ ಇದ್ದರೂ ಕೂಡ ಬಾಕಿ areaಗಳ ವಿಷಯದಲ್ಲಿ ನಮಗಿಂತಲೂ ಹೆಚ್ಚು ವಿಷಯಗಳನ್ನು ತಿಳಿದುಕೊಂಡು ಒಂದು ಕರ್ಣಾಟಕ ಆಗುವುದರಿಂದ ಇಡೀ ಇಂಡಿಯಾದ ಹಿತರಕ್ಷಣೆ ಆದೀತು, ಒಂದು ಕರ್ಣಾಟಕದಿಂದ ಸಕಲ ಸೌಕರ್ಯಗಳು ಆದಾವು

(SRI A. BHEEMAPPA NAIK.)

ಎಂದು ಅವರು ಭಾವಿಸಿದ್ದಾರೆ. ಅದಕ್ಕೂ ಸ್ವಲ್ಪ ಬೆಲೆ ಕೊಡೋಣ. ನಾವು ಇನ್ನೂ ಎತ್ತರಕ್ಕೆ ಹೋದಾಗ ನಮ್ಮ ದೃಷ್ಟಿ ಬೇರೆಯಾಗುತ್ತದೆ, ನಾವು ಮೈಸೂರಿನಲ್ಲಿದ್ದು ಮಾತನಾಡುತ್ತಿದ್ದೇವೆ, ಅದು ಭಾರತದ ಹಿತದೃಷ್ಟಿಯಿಂದ ಸಂಕ್ಷೇಪವಾಗಿ ಕೊಟ್ಟ ವರದಿ. ಅದಕ್ಕೆ ಗೌರವ ಸಲ್ಲಿಸುವುದು ಅಗತ್ಯವೆಂದು ನನಗೆ ತೋರುತ್ತದೆ. ಎಲ್ಲರೂ ಆ ದೃಷ್ಟಿಯಿಂದ ಯೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಅನೇಕ ಮೈಸೂರಿನ ಮಹನೀಯರು ಮೈಸೂರು ಹೀಗೆಯೇ ಇರಬೇಕು. ಮೈಸೂರು ಹೀಗೆಯೇ ಇದ್ದರೆ ಒಳ್ಳೆಯದು ಎಂದು ಸರ್ ಎಂ. ವಿಶ್ವೇಶ್ವರಯ್ಯನವರೂ ಮತ್ತು ಸರ್ ಮಿರ್ಜಾ ಎಂ. ಇಸ್ಮೇಲ್‌ರವರೂ ಹೇಳಲಿಲ್ಲವೇ public statement ಕೊಟ್ಟಿಲ್ಲವೇ ಎಂದು ಹೇಳಿದರು. ಅವರು ಹಿಂದೆಲ್ಲಾ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಕೊಡುವಾಗ ಕೊಟ್ಟ statementನ್ನು ನೋಡಬೇಕು ಎಂದು ಪ್ರಾರ್ಥಿಸುತ್ತೇನೆ. ಮೈಸೂರಿನ ಹಿತಸಾಧಿಸಬೇಕಾದರೆ ಶ್ರೀಮನ್ಮಹಾರಾಜರೇ ರಾಜರಾಗಿ, ಅವರ ಕೈಕೆಳಗೆ ತಾವು ದಿವಾನರಾಗಿ ಅವರ ಕೈಕೆಳಗೆ ಕೌನ್ಸಿಲ್ ಇದ್ದು ಕೌನ್ಸಿಲ್ ಕೈಕೆಳಗೆ ಇಂತಿಂಥವರು ಇದ್ದು ತನ್ನ ಆಜ್ಞೆ, ಕಟ್ಟಾಜ್ಞೆ ಎಂದು ಭಾವಿಸತಕ್ಕದ್ದು, ಆ ರೀತಿ ಇದ್ದರೆ ದೇಶ ಉದ್ಧಾರ, ದೇಶದ ಪ್ರಗತಿಯಾಗುತ್ತದೆ, ಅದಿಲ್ಲದ ಹೊರತು ದೇಶ ಉದ್ಧಾರವಾಗುವುದಿಲ್ಲ ಎಂದು ಭಾವಿಸಿದ ಅವರ ಮನೋಭಾವ ಎಷ್ಟಿತ್ತು? ಇವತ್ತು ಅದಕ್ಕಿಂತ ಹೆಚ್ಚಿನ ಬೆಲೆ ಅವರ ಹೇಳಿಕೆಗೆ ಏತಕ್ಕೆ ಕೊಡಬೇಕೆಂದು ನಾನು ಕೇಳುತ್ತೇನೆ.

ನಮಗೂ ಅವರಿಗೆ ಕೊಟ್ಟಿರುವಹಾಗೆ ಯೋಚನೆ ಮಾಡುವ ಶಕ್ತಿಯನ್ನು ದೇವರು ಕೊಟ್ಟಿದ್ದಾನೆ. ಪ್ರಜಾಸರ್ಕಾರವನ್ನೂ ವೇದಿಕೆಯನ್ನೂ ಕೊಟ್ಟಿದ್ದಾನೆ. ಈ ವೇದಿಕೆಯಲ್ಲಿ ನಿಂತು ಅಭಿಪ್ರಾಯವನ್ನು ರೂಪಿಸೋಣ, ಇಲ್ಲಾದ ಮೇಲೆ ಇಡೀ ಭಾರತಕ್ಕೆ ಸಂಬಂಧಪಟ್ಟ ಸಭೆ ಇದೆ, ಅಲ್ಲಿ ಮೇಧಾವಿಗಳಿದ್ದಾರೆ. ಇದನ್ನು ಆ ಸಭೆಯ ಮುಂದೆಯೂ ಇಡುತ್ತಾರೆ. ಹಾಗಿಟ್ಟಾಗ ಅವರು ಇಡೀ ಭಾರತದ ಆಗುಹೋಗುಗಳನ್ನು ಯೋಚನೆ ಮಾಡುತ್ತಾರೆ. ಮೈಸೂರಿನ ಪ್ರತಿನಿಧಿಗಳೂ ಅಲ್ಲಿದ್ದಾರೆ, ಅವರೂ ಯೋಚನೆಮಾಡುತ್ತಾರೆ. ಆಗ ಮೈಸೂರಿನ ಹಿತ ಭಾರತದ ಹಿತ ಎರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ಅವರು ತೀರ್ಮಾನಕ್ಕೆ ಬಂದರೆ, ಅದಕ್ಕೆ ನಾವು ಬೆಲೆ ಕೊಡುವುದು ನ್ಯಾಯವೆಂದು ಹೇಳುತ್ತೇನೆ. ಒಂದು ವೇಳೆ ಕರ್ಣಾಟಕವಾದರೆ ಆ ಹೊತ್ತಿನಿಂದಲೇ ಅದನ್ನು ಒಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವುದಕ್ಕೆ ಬದಲು ಒಂದು clause ಸೇರಿಸಿ, ಮೈಸೂರು ಸೇರಿ ಒಂದು ಕರ್ಣಾಟಕವಾಗಿ ಅದರಿಂದ ಮೈಸೂರಿನ ಹಿತಕ್ಕೆ ಧಕ್ಕೆ ಬಂದರೆ ಮೈಸೂರು ಬೇರೆ ಉಳಿಯುವ ಹಾಗೆ ಮಾಡುತ್ತೇವೆ ಎಂದು ಹೇಳಿದರೆ, ಅದು ಬೇರೆ ಮಾತು. ಉಳುತ್ತೇವೆ, ಆಳುತ್ತೇವೆ' ಎಂದು ಹೇಳಿದರು. ಸದ್ಯ ಉಳುವುದಕ್ಕೂ ಆಳುವುದಕ್ಕೂ ಇನ್ನಾರಿಗೂ ಅಧಿಕಾರವಿಲ್ಲವೆಂದು ಹೇಳಲಿಲ್ಲ, ಅದಕ್ಕೆ ಸಂತೋಷಪಡಬೇಕು! ಉಳುತ್ತೇವೆ ಎನ್ನುವುದೇನೋ ಸರಿ, ಆದರೆ ಆಳುತ್ತೇವೆ ಎನ್ನುವುದು ಸರಿಯಲ್ಲ. 'ಆಳು' ಎನ್ನುವ ಶಬ್ದದ ಅರ್ಥವೇನು? ಆಳುವ ಕಾಲ ಬಹಳ ದಿವಸಗಳ ಹಿಂದೆಯೇ ಹೋಯಿತು. ಆಳುವ ಕಾಲ ಇದಲ್ಲ, ಪ್ರಜೆಗಳ ಸೇವೆಮಾಡುವುದಕ್ಕೆ ಈ ಸಭೆಗೆ ಅವರ ಪ್ರತಿನಿಧಿಗಳಾಗಿ ಬಂದು, ಆ ಜನರ ಕಷ್ಟಸುಖಗಳನ್ನು ನೋಡಿಕೊಳ್ಳುವ ಕಾಲ ಇದು: ಆಳು ಎನ್ನುವ ಶಬ್ದದ ಅರ್ಥ ಬದಲಾವಣೆಯಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದನ್ನು ಹೇಳಿದ context ಬೇರೆ.

ಶ್ರೀ ಎ. ಭೀಮಪ್ಪನಾಯಕ್.—ನಾನು ಹೇಳುತ್ತಿರುವ context ಕೂಡ ಬೇರೆ.

ಅಂತೂ ಆ ಧೋರಣೆ ನಮಗೆ ಸಲ್ಲದು, ಖಂಡಿತವಾಗಿ ಸಲ್ಲದು ಎಂದು ಹೇಳುತ್ತೇನೆ. ಹೀಗೆ ಹೇಳುವುದು ಜನರಿಗೆ ಅಪ್ಯಾಯಮಾನವಾಗುವುದಿಲ್ಲ. ಜನರ ಸೇವೆ ಮಾಡುವುದಕ್ಕಾಗಿ ನಾವಿಲ್ಲಿದ್ದೇವೆ. ಇನ್ನು ಉಳುವುದು ಯಾರಾ exclusive right ಅಲ್ಲ. ಮೈಸೂರು ದೇಶದ ಶೇಕಡ 85ರಷ್ಟು ಜನಕ್ಕೆ ಉಳುವುದೇ ಕಸುಬು. ಆದರೆ ಆಳುವುದು ಎನ್ನುವ ಕಾಲ ಹೋಯಿತು: ಹಿಂದಿರುಗದೆ ಹೋಯಿತು! ಯಾವ ಜನ ತಮ್ಮ ಪ್ರತಿನಿಧಿಯಾಗಿ ನಮ್ಮನ್ನು ಕಳುಹಿಸುತ್ತಾರೋ ಆ ಜನರಿಗಾಗಿ ಕೆಲಸ ಮಾಡುವ ಕಾಲ, ಅವರಿಗಾಗಿ ದುಡಿಯುವಕಾಲ ಇದು. ಆಳುವುದಕ್ಕೆ ಯಾರೂ ಈಗ ಪ್ರಾಮುಖ್ಯತೆ ಕೊಡುವುದಿಲ್ಲ. ಯಾವ ದಿವಸ ಆಳುತ್ತೇನೆಂದು ಹೇಳುತ್ತಾನೆಯೋ ಆ ದಿವಸ ಅಳಿಯುತ್ತಾನೆ. ಆದಕಾರಣ ಆಳು ಎಂಬ ಶಬ್ದವನ್ನುಪಯೋಗಿಸಿದುದು ಸರಿಯಲ್ಲ, ಚೆನ್ನಾಗಿಲ್ಲ.

ಶ್ರೀ ಎಸ್. ಗೋಪಾಲಗೌಡ.—'ಆಳು' ಎನ್ನುವುದು ಮನೆಯಲ್ಲಿರುವ servant ಅಥವಾ ಸೇವಕನಿಗೂ ಅನ್ವಯಿಸುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಆ ಅರ್ಥವನ್ನು ಕೊಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಕ್ರಿಯಾಪದವಾಗಿ ಉಪಯೋಗಿಸಿದ್ದಾರೆ, ಆದುದರಿಂದ ಕ್ರಿಯಾತ್ಮಕವಾದ ಅರ್ಥವನ್ನು ಕೊಡುವುದು ಸರಿ. ಆಳುವುದು ಎಂದರೆ ಆಡಳಿತ ನಡೆಸುವುದು ಎಂದು ನನಗೆ ಅರ್ಥ ತಿಳಿಯುವುದಿಲ್ಲವೆಂದು ನನ್ನ ಸ್ನೇಹಿತರೊಬ್ಬರು ಇಲ್ಲಿ ಹೇಳಿಕೊಡುತ್ತಿದ್ದಾರೆ. ಅವರಿಗೆ ನಾನು ಹೇಳುವುದಿಷ್ಟೆ; ಆಳು ಎನ್ನುವ ಶಬ್ದದ ಅರ್ಥವನ್ನು ನಾನು ತಿಳಿದುಕೊಂಡಿದ್ದೇನೆ, ಅದನ್ನು ಯಾರು ನನಗೆ ಹೇಳಿಕೊಡಬೇಕಾಗಿಲ್ಲ. ಅದೇ ಅವರು 'ಆಳು' ಎನ್ನುವ ಶಬ್ದವನ್ನುಪಯೋಗಿಸದೆ ಜನರ 'ಸೇವೆ' ಎಂದು ಹೇಳಿದ್ದರೆ ಚೆನ್ನಾಗಿತ್ತೋ ಏನೊ ಎನಿಸುತ್ತದೆ. ಹಾಗೆ ಮಾಡದೆ 'ಆಳು' ಎನ್ನುವುದನ್ನುಪಯೋಗಿಸಿದರಲ್ಲಾ ಎಂದು ನನಗೆ ವ್ಯಥೆ. ನನ್ನ ಅತ್ಯಂತ ವಿನಯಪೂರ್ವಕ ಬೇಡಿಕೆ ಇಷ್ಟೆ: ನಮ್ಮ ಅಭಿಪ್ರಾಯವನ್ನು ಪಡೆಯಲಿಲ್ಲ ಎಂದು ಹೇಳುವ ಮಿತ್ರರಿಗೆ ಹೇಳುತ್ತೇನೆ, ಅವರ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಬಂದ ಜನರೆದುರಿಗೆ ಹೋಗಿ ಅಭಿಪ್ರಾಯಕೊಡದೆಯಿದ್ದು, ಈಗ ಶ್ರೀಮಾನ್ ಹನುಮಂತಯ್ಯನವರನ್ನು ದೂಷಣೆ ಮಾಡುವುದು ನ್ಯಾಯವೇ? I am not the defender of Sri Hanumanthaiya, the Chief Minister. ಹನುಮಂತಯ್ಯನವರು ನನಗೆ ಕಟ್ಟಾಜ್ಞೆ ಕೊಟ್ಟರು ನನ್ನ ಅಭಿಪ್ರಾಯ ಹೇಳಬಾರದೆಂದು. ಆಮೇಲೆ ಎ.ಐ.ಸಿ.ಸಿ. ಯವರು ನಮ್ಮ ಅಭಿಪ್ರಾಯವನ್ನು ಹೇಳಬಹುದೆಂದು ಹೇಳಿದರು. ನಾನು ಹನುಮಂತಯ್ಯನವರ ಮಾತನ್ನು ಕೇಳದೆ, ಹೋಗಿ ನನ್ನ ಅಭಿಪ್ರಾಯವನ್ನು ತಿಳಿಸಿದೆ. ನಿಮಗಿಂತ ಹೆಚ್ಚಿನ ಸಂಸ್ಥೆ ನನ್ನ ಅಭಿಪ್ರಾಯ ಹೇಳಬಹುದೆಂದು ಹೇಳಿದೆ, ನಾನು ಹೋಗುತ್ತೇನೆ ಎಂದು ಹೇಳಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಇನ್ನೂ ಕೆಲವರೂ ಹಾಗೆಯೇ ಹೋಗಿ ತಿಳಿಸಿದರು. ನನ್ನ ಮಿತ್ರರಾದ ಶ್ರೀ ನಾಗಯ್ಯರೆಡ್ಡಿಯವರೂ ಕೋಲಾರದಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಸಭೆ ಮಾಡಿ ಅಲ್ಲಿ ಅವರ ಅಭಿಪ್ರಾಯವನ್ನು ತಿಳಿಸಿದರು. ಆದುದರಿಂದ ಸ್ವತಂತ್ರವಾಗಿ ಅಭಿಪ್ರಾಯ ಕೊಡಲು ಅವಕಾಶ ಕೊಡಲಿಲ್ಲ...

ಶ್ರೀ ಜೆ. ಮಹಮ್ಮದ್ ಇಮಾಂ.—ಶ್ರೀ ವೀರಣ್ಣಗೌಡರೂ ಅವರ ಅಭಿಪ್ರಾಯ ಕೊಟ್ಟರು.

ಶ್ರೀ ಎ. ಭೀಮಪ್ಪನಾಯಕ್.—ಆದರೆ ಅವರು, ಹೋಗಿದ್ದೆ, ನನ್ನ ಅಭಿಪ್ರಾಯ ಕೊಡಲಿಲ್ಲ, ಎಂದು ಹೇಳಿದರು. ಶ್ರೀ ವೀರಣ್ಣಗೌಡರಿಗೆ ಅವರ ಅಭಿಪ್ರಾಯ ತಿಳಿಸಲು ಎಷ್ಟೋ ಅವಕಾಶವಿತ್ತು. ಹಾಗೆ ಮಾಡದೆ ಯಾರನ್ನೋ convince ಮಾಡುವುದಕ್ಕೆ ಹೋದರು. ಇನ್ನೂ ಕಾಲ ಮೀರಿಲ್ಲ, ಇನ್ನೂ ಅವರ ಅಭಿಪ್ರಾಯ ಸೂಚಿಸಲು ಅವಕಾಶವಿತ್ತು ಸಂಸ್ಥೆಯವರು ಕೈಯನ್ನು ಕಟ್ಟಿದ್ದಾರೆಂದು ಹೇಳಿದರು, ಕೈಕಟ್ಟಿದ್ದರೆ ಬಾಯಿ ಬಿಟ್ಟುಕೊಂಡು ಹೋಗಬಹುದಾಗಿತ್ತು. ಕೈಬಿಟ್ಟಿದ್ದರೆ ಕೂಗುವುದಕ್ಕೇನು ಕಷ್ಟ?

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದರೆ ಆ ಕಮಿಷನ್ ಮುಂದೆ ಕೋಮುವಾರು ಸಮಸ್ಯೆಯನ್ನು ಯಾರು ತಿಳಿಸಿದರು?

ಶ್ರೀ ಎ. ಭೀಮಪ್ಪನಾಯಕ್.—ಕೋಮುವಾರು ವಿಷಯವನ್ನು ಹೇಳಿದ್ದರೆ, ಅದು ಖಂಡನೀಯ. ಯಾರು ಹಾಗೆ ಮಾಡಿದರೋ ಗೊತ್ತಿಲ್ಲ. ಇಲ್ಲಿನವರೇ ಕಾಂಗ್ರೆಸ್‌ನವರು ಮಾಡಿರಬಹುದು ಅಥವಾ ಬೇರೆಯವರು ಮಾಡಿರಬಹುದು. ಹೊರಗಿನವರ್ಯಾರು ಇದನ್ನು ಹೇಳುತ್ತಾರೆ? ಧಾರವಾಡದವರು ಬಂದು 'ನಾವು ಶೇಕಡ 30 ರಿಂದ 20ಕ್ಕೆ ಇಳಿಯುತ್ತೇವೆ, ಅದರಿಂದ ಕರ್ನಾಟಕ ಬೇಕು ಎಂದು ಹೇಳುತ್ತಾರೆಯೆ? ಕೋಮುವಾರು ಸಮಸ್ಯೆಯನ್ನು ಹೇಳಿದ್ದರೆ, ಜಾಸ್ತಿ ಇದ್ದವರು ಕಡಿಮೆಯಾಗುತ್ತೇವೆ ಎಂದು ಯಾರು ಹೇಳಿದರು ಎಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಯಾರೂ ಹೇಳಿಲ್ಲವೆಂದೇ ಭಾವಿಸೋಣ. ಮುಂದೆ ಯಾರೋ ಕೋಮುವಾರು ಭಾವನೆಯಿಂದ ಕೋಮುವಾರು ಮಾತನ್ನೆತ್ತಬಾರದೆಂಬ ಉದ್ದೇಶದಿಂದ ನಾನು ಒಂದು ಮಾತು ಹೇಳುತ್ತೇನೆ. ಕರ್ಣಾಟಕ ಪ್ರಾಂತ ಮಾಡಬೇಕೆಂಬ ಜನರು ಅವರು ಲಿಂಗಾಯಿತರಾಗಿರಲಿ ಯಾರೇ ಆಗಿರಲಿ ಅವರ ಕೋಮಿನ ಜನಸಂಖ್ಯೆ ಕೆಳಗಿಳಿಯುತ್ತವೆ, ಈಗಿಗಿಂತ ಕಡಿಮೆಯಾಗುತ್ತದೆ ಎಂದು ಹೇಳುವುದಾದರೆ, ಕರ್ಣಾಟಕವನ್ನು ಮಾಡದೆಯಿದ್ದರೆ ಇಲ್ಲಿ ಯಾವುದಾದರೂ ಕೋಮಿನ ಜನಸಂಖ್ಯೆ ಕಡಿಮೆಯಾಗುವುದಾದರೆ, ಅದಕ್ಕೆ ಯಾರೂ ಏನೂ ಮಾಡಬೇಡವೆ? ಆದುದರಿಂದ ಇತರ ಜನಾಂಗದವರು ಜಾಸ್ತಿಯಾದರೆ, ಅದರಲ್ಲಿ ತಪ್ಪೇನು ಎಂದು ಕೇಳುತ್ತೇನೆ. ಒಂದು ಮಾತು ಹೇಳುತ್ತೇನೆ. ಕೋಮುವಾರು ಭಾವನೆಯಿಂದ ಆಡಳಿತ ನಡೆಸುತ್ತೇವೆಂದು ಹೇಳಿದರೆ ಅದು ಸತ್ಯವಾಗಿ ಸಾಧ್ಯವಾಗುವುದಿಲ್ಲ. ಹೇಗೆಂದರೆ ಶ್ರೀ ಕೆ. ಸಿ. ರೆಡ್ಡಿಯವರು ನಾಯಕರಾಗಿ ಚುನಾಯಿತರಾದಾಗ ಬರೀ ಅವರ ಕೋಮಿನವರೇ ಅವರಿಗೆ ಓಟು ಕೊಟ್ಟರು ಎಂದು ನಂಬುವುದಕ್ಕಾಗುವುದಿಲ್ಲ. ಶ್ರೀ ಹನುಮಂತಯ್ಯನವರ ಹೆಸರನ್ನು ಸೂಚಿಸಿದವನು ನಾನು. ನಾನು ಒಕ್ಕಲಿಗನಲ್ಲ. ಆದುದರಿಂದ ಸತ್ಯವಾಗಿ ಅವರು ಕೋಮುವಾರು ಭಾವನೆಯಿಂದ ಹೇಳುತ್ತಿಲ್ಲ. ಲಿಂಗಾಯಿತರು ಮಾಡಿದರೆ, ಕೋಮುವಾರು ಅವರ ಜನಸಂಖ್ಯೆ ಹೆಚ್ಚುತ್ತದೆಂಬ ಉದ್ದೇಶದಿಂದಲ್ಲ. ಮೈಸೂರಿನಲ್ಲಿ ಆಡಳಿತ ಚೆನ್ನಾಗಿದೆ, ಪ್ರಗತಿ ಚೆನ್ನಾಗಿದೆ, ಆಡಳಿತದ ಅನುಭವ ಚೆನ್ನಾಗಿದೆ ಎಂಬ ಭಾವನೆಯಿಂದ ಹೇಳುತ್ತಾರೆ. ಹತ್ತು ವರ್ಷ ಮೈಸೂರಿನವರಿಗೇ ನಾಯಕತ್ವದ ಭರವಸೆ ಕೊಡುತ್ತಾರೆಂದು ಕೆಲವರು ಹೇಳಿದರು. ಮೈಸೂರಿನಲ್ಲಿ ಒಳ್ಳೆಯ ಮುಖಂಡತ್ವವಿದೆ, ಅವರಿಗೆ ಅನುಭವವಿದೆ, ಆಡಳಿತ ಜೆನ್ನಾಗಿ ನಡೆಯುತ್ತಿದೆ ಎಂಬ ಭಾವನೆಯಿಂದ ಇನ್ನೂ ಹತ್ತು ವರ್ಷ ಮುಖಂಡತ್ವ ಇಲ್ಲೇ ಇದ್ದು ದೇಶವನ್ನು ಚೆನ್ನಾಗಿ ಕಟ್ಟಲಿ ಎಂದು ಮಾತ್ರಕ್ಕೇ, ಮುಖಂಡರೆಂದರೆ, ಚೀಫ್ ಮಿನಿಸ್ಟರ್ ಎಂದು ಅರ್ಥವೇ? ಮುಖಂಡತ್ವವೆಂದರೆ, in your leadership we will work to build Karnataka ಎಂದು ಅರ್ಥವೇ ಹೊರತು ಹೆಚ್ಚೇನೂ ಅಲ್ಲ. ಹಾಗೆ ಅವರು ಹೇಳಿದ್ದರಿಂದ ಅವರು ತಮ್ಮ ಮಟ್ಟವನ್ನು ಇಳಿಸಿಕೊಂಡರೆಂದಾಗಲೀ ಅಥವಾ ಅವರು ನಮ್ಮ ಹಿತಕ್ಕೆ ಧಕ್ಕೆ ತರುತ್ತಾರೆಂದಾಗಲೀ ಭಾವನೆ ಬರುವುದಿಲ್ಲ. ಅಲ್ಲದೆ ನಮಗಿರತಕ್ಕ ವೈಶಿಷ್ಟ್ಯಗಳಾದ ರಸ್ತೆಗಳನ್ನೂ, ಆಸ್ಪತ್ರೆಗಳನ್ನೂ ನೋಡಿ ಅವರೇನಾದರೂ ಇಲ್ಲಿರುವ ಆಸ್ಪತ್ರೆಯನ್ನು ಅಲ್ಲಿಗೆ ಹಾಕಿ ಇಲ್ಲಿರುವ ಸ್ಕೂಲನ್ನು ಕೆಡವಿಸಿ ಎಂದೇನಾದರೂ ಹೇಳುತ್ತಾರೆಯೆ? ಅಥವಾ ಹತ್ತು ಸ್ಕೂಲುಗಳು ಕೊಡುವಾಗ ಇಲ್ಲಿ ಒಂದು ಕೋಟಿ ಜನ ಇದ್ದಾರೆ, ಇವರಿಗೆ ಐದು ಸ್ಕೂಲುಗಳನ್ನು ಕೊಡಿ, ಅಲ್ಲಿ ಒಂದು ಕೋಟಿ ಜನ ಇದ್ದಾರೆ, ಅಲ್ಲಿಗೆ ಐದು ಸ್ಕೂಲು ಕೊಡಿಯೆಂದರೆ, ಅವರೇನಾದರೂ ನಾವು ಹಿಂದೆ ಬಿದ್ದಿದ್ದೇವೆ ಎಲ್ಲವನ್ನೂ ನಮಗೆ ಕೊಡಿಯೆಂದೇನಾದರೂ ವಾದ ಮಾಡುತ್ತಾರೆಯೇ? ಅಲ್ಲದೆ ಈಗ ಎರಡನೆಯ ಪಂಚವಾರ್ಷಿಕ ಯೋಜನೆ ಮೂರನೆಯ ಪಂಚವಾರ್ಷಿಕ ಯೋಜನೆಗಳೆಂದು ನಾನಾ ಬೃಹತ್ ಯೋಜನೆಗಳನ್ನು ಸಾಧಿಸುವಾಗ ಕೇಂದ್ರದ ಸಹಾಯವಿಲ್ಲದೆ ನಾವೇನೇ ಸಾಧನೆ ಮಾಡುತ್ತಿಲ್ಲ. ಅಂದಮೇಲೆ ಮೈಸೂರನ್ನು ಕಟ್ಟುವುದಕ್ಕೆ ನಾವೇ ಕಾರಣರೆಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತಿಗೂ ನಮಗೆ ಎರಡುಮುಕ್ಕಾಲು ಕೋಟಿ ಡಿಫಿಸಿಟ್ ಇದ್ದು ನಾವು ಇನ್ನೂ ಮುಂದಿದ್ದೇವೆಂದು ಹೇಳಿಕೊಳ್ಳುತ್ತೀರಲ್ಲಾ! ಈಗ ಎರಡು ಮೂರು ವರ್ಷಗಳಿಂದ ಎಷ್ಟು ಸ್ಕೂಲುಗಳನ್ನು ಕೊಟ್ಟಿದ್ದೀರಿ, ಎಷ್ಟು ಸ್ಕೂಲು ಕಟ್ಟಡ ಕಟ್ಟಿಸಿದ್ದೀರಿ ಎಂದು ಕೇಳಿದರೆ ಶ್ರೀ ರಾಮಚಂದ್ರರಾಯರು ಮುಂದಕ್ಕೆ ಹಣ ಒದಗಿಸಿದಾಗ ಕೊಡುತ್ತೇವೆ ಎನ್ನುತ್ತಾರೆ. ಅತ್ತ ವ್ಯವಸಾಯದಲ್ಲಿ ಏನೇನುಮಾಡಿದ್ದೀರೆಂದರೆ ಶ್ರೀ ನಾಗನಗೌಡರು 'ಏನೂ ಮಾಡಿಲ್ಲ, ಮುಂದಕ್ಕೆ ದುಡ್ಡು ಬಂದ ಹಾಗೆ ಮಾಡೋಣ್ರಿ' ಎಂದು ಹೇಳುತ್ತಾರೆ. ಹೀಗೆ ಏನು ಮಾಡುವುದಕ್ಕೂ ನಮಗೆ ಏನೂ ಶಕ್ತಿಯಿಲ್ಲದಿರುವಾಗ ನಾವೇಕೆ ಏನೂ ಕಾಣದೆ ಇತರರನ್ನು ಅಣಕಿಸುವುದಕ್ಕೆ ಹೋಗಬೇಕು? ಹೈದರಾಬಾದಿನವರು ಡಿಫಿಸಿಟ್ ಬಡ್ಜೆಟ್ ಇಲ್ಲದೆ ಮಾಡುತ್ತಿದ್ದರೆ, ಬೊಂಬಾಯಿನವರು ಡಿಫಿಸಿಟ್ ಬಡ್ಜೆಟ್ ಇಲ್ಲದೆ ಮಾಡುತ್ತಿದ್ದರೆ ಇವರು ನಮಗೆ ಬರುವಾಗ ನಿಮ್ಮ ಡಿಫಿಸಿಟ್ಟನ್ನೂ ಹೊತ್ತುಕೊಂಡು ಹೋಗಿ ಎಂದು ಹೇಳಿ ಕಳುಹಿಸುತ್ತಾರೇನು? ಅಲ್ಲದೆ, ನಮಗೆ ಅಷ್ಟೊಂದು ಹೆಚ್ಚಿಗೆ ಡಿಫಿಸಿಟ್ ಬಂದರೆ ಕೇಂದ್ರಕ್ಕೆ ಹೇಳಿಕೊಳ್ಳೋಣ. ಹೊರಲಾರದಷ್ಟು ಹೊರೆಯಾಗುತ್ತದೆಂದು ನಾವು ಹೇಳಿಕೊಂಡರೂ ಕೇಳದೆ ನಮ್ಮ ಮೇಲೆ ಹೇರಿದಿರಿ. ಆದ್ದರಿಂದ ಹೆಚ್ಚಿಗೆ ಸಹಾಯವನ್ನು ನೀವೇ ಕೊಡಬೇಕು ಎಂದು ಹೇಳೋಣ. ಅದೊಂದನ್ನೂ ಯೋಚನೆಮಾಡದೆ ನಾವು ಮುಂದಿದ್ದೇವೆ, ನಾವು ಮುಂದಿದ್ದೇವೆಂದು ಹೇಳುವುದೇ? ನಾವು ವಾಸ್ತವವಾಗಿ ನೋಡಿ ಹೇಳುತ್ತಿದ್ದೇವೆಯೇ?

Mr. SPEAKER.—The Hon'ble Member can continue his speech and finish it today alone.

Sri A. BHEEMAPPA NAIK.—I will not be able to finish my speech within the time stipulated. At least I would require another half an hour.

Mr. SPEAKER.—The Hon'ble Member is an experienced Parliamentarian; he can cut short his speech.

Sri A. BHEEMAPPA NAIK.—I want to quote some figures from the Seshadri Committee Report and I want to tell my other friends about the view they had taken earlier.

Mr. SPEAKER.—Thre are very many Hon'ble Members to speak tomorrow. Therefore the Hon'ble Member can conclude today.

ಶ್ರೀ ಎ. ಭೀಮಪ್ಪನಾಯಕ್.—ಸಂದರ್ಭಗಳು ಬದಲಾವಣೆಯಾದ ಹಾಗೆ ಹೇಗೆ ಇಲ್ಲಿ ಅಭಿಪ್ರಾಯಗಳು ಬದಲಾವಣೆಯಾಗುತ್ತಿವೆಯೆಂಬುದನ್ನು ಈ ಸಭೆಗೆ ತಿಳಿಸಬೇಕೆಂದಿದ್ದೇನೆ. ಹಿಂದೆ ಈ ಸಭೆಯಲ್ಲಿ ಮಾತನಾಡಿದ ಕೆಲವು ಜನರ ಅಭಿಪ್ರಾಯ ಹೇಗಿತ್ತು ಎಂಬುದನ್ನು ವಿಶದಪಡಿಸಬೇಕೆಂದಿದ್ದೇನೆ. ಆ ಬಗ್ಗೆ ಅಂಕಿಅಂಶಗಳನ್ನೂ ಕೊಡಬೇಕೆಂದು ಮಾಡಿಕೊಂಡು ಪುಸ್ತಕದಲ್ಲಿ ಗುರುತುಮಾಡಿಕೊಂಡೂ ಇದ್ದೇನೆ.

Sri H. SIDDAVEERAPPA.—Even if Sri Bheemappa Naik closes his speech today, it may as well happen that all the members may not have any time tomorrow. All the members cannot catch the eye of the Speaker.

Mr. SPEAKER.—Still let him continue his speech and finish it. I want to continue the sitting till 8 o' clock today.

ಶ್ರೀ ಎ. ಭೀಮಪ್ಪನಾಯಕ್.—ಹಾಗೆ ತಾವು ಬೇಡವೆಂದರೆ ಈಗಲೇ ಕುಳಿತುಕೊಳ್ಳುವುದಕ್ಕೂ ನಾನು ಸಿದ್ಧನಾಗಿದ್ದೇನೆ. ನನ್ನ ಮಿತ್ರರೆಲ್ಲರಿಗೂ ನನ್ನ ಮನವಿಯೊಂದು. ನಾನೇನು ನನ್ನ ಮಿತ್ರರುಗಳು ಕೆಲವರು ಹೇಳಿದ ಹಾಗೆ ಹಿಂದೊಂದು ವಾದ ಈಗೊಂದು ವಾದ ಮಾಡುತ್ತಿಲ್ಲ. ನಾನೂ ಶ್ರೀ ದೇವರಾಜ ಅರಸ್‌ರವರು ಹೇಳಿದ ಹಾಗೆ ಯಾವ ಮತದ ಪರವಾಗಿಯೂ ಹೇಳುತ್ತಿಲ್ಲ. ನಾನೇನೂ ಒಕ್ಕಲಿಗನಲ್ಲ. ಲಿಂಗಾಯಿತನೂ ಅಲ್ಲ. ಆದರೂ ಇದನ್ನು ಹೇಳುತ್ತೇನೆ. ಮೈನಾರಟಿ ಮತಗಳು ಎಲ್ಲಿಯೇ ಇರಲಿ, ಅವರುಗಳಿಗೆ ಇಲ್ಲಿದ್ದರೆ ತೊಂದರೆಯಾಗುವುದಿಲ್ಲ, ಅಲ್ಲಿದ್ದರೆ ತೊಂದರೆಯಾಗುತ್ತದೆಂಬ ಭಾವನೆ ಇರಬಹುದು. ಅದಕ್ಕೆ ಕಾರಣವಿಲ್ಲ ಒಂದು ವೇಳೆ ಹಾಗಾಗುವುದಾದರೆ ಇವೊತ್ತಿಗೂ ಇಲ್ಲಿ ಸಂಖ್ಯಾಬಲದ ಮೇಲೆ ಪರೀಕ್ಷೆಮಾಡಿದರೆ ಇಲ್ಲಿಯೂ ಕಷ್ಟವಿದ್ದೇಯಿದೆ, ಅಲ್ಲಿಯೂ ಅದೇ ಕಷ್ಟವಿರಬಹುದು. ಅಂದಮೇಲೆ ಆ ದೃಷ್ಟಿಯಿಂದಲಾದರೂ ಇದನ್ನೇಕೆ ನಾನು ಸ್ವಾಗತಿಸಬಾರದು ಎಂದು ಹೇಳುತ್ತೇನೆ. ಅಲ್ಲದೆ ಅಲ್ಪಸಂಖ್ಯಾತರ ಭಯನಿವಾರಣೆಯಾಗುವಂತೆ ರಕ್ಷಣೆಗಳನ್ನೇರ್ಪಡಿಸುತ್ತಿದ್ದಾರೆ. ಇಷ್ಟೆಲ್ಲಾ ಇರುವಾಗ ಅಲ್ಪಸಂಖ್ಯಾತರನ್ನು ಶೋಷಣೆಮಾಡುವಂಥ ರಾಷ್ಟ್ರಘಾತುಕತನ ಯಾರಲ್ಲೇ ಇರುತ್ತದೆಂದು ಭಾವಿಸಕೂಡದು. ಕುತ್ತಿಗೆ ಕುಯ್ಯುವ ಕೆಲಸವನ್ನು ಯಾರೂ ಮಾಡುವುದಿಲ್ಲ. ಹಾಗೆ ಕುಯ್ಯುವುದಿದ್ದರೆ ಅದು ಮೈಸೂರಿನಲ್ಲಿ ಮಾತ್ರ ಆಗುತ್ತದೆಂದೂ ಹೇಳುತ್ತೀರಾ? ಇಡೀ ಭಾರತಕ್ಕೆ ಅದನ್ನು ಅನ್ವಹಿಸಬಹುದು.

ನಮ್ಮ ಮಾನ್ಯ ಮಿತ್ರರು ಭಾಷೆಯ ಆಧಾರದಮೇಲೆ ಮಾಡಿಲ್ಲವೆಂದು ಹೇಳುವುದು ಸರಿಯಲ್ಲವೆಂದು ಹೇಳಿದರು. ಅವರು ಹೇಳಿದಂತೆ ಭಾಷೆಯೂ ಒಂದು ಆಧಾರವೇ ಆಗಿರಬಹುದು. ಇಂಡಿಯಾ ದೇಶದಲ್ಲೆಲ್ಲಾ ಪ್ರಾಂತ ಭಾಷೆಯೆಂದು ಒಂದು, ರಾಷ್ಟ್ರ ಭಾಷೆಯೆಂದು ಒಂದು, ಈ ಪ್ರಕಾರ ಈ ಎರಡು ದೃಷ್ಟಿಯನ್ನು ಇಟ್ಟುಕೊಂಡಿದ್ದರೂ, ಅದೊಂದುಮಹಾಪಾಪವೆಂದು ನಾನು ಹೇಳುವುದಿಲ್ಲ. ಇನ್ನೊಂದು ವಾದ ಹಿಡಿದು ಎಲ್ಲ ಭಾಷೆಯವರೂ ಸಮಭಾಗದಷ್ಟಿರಬೇಕೆಂದರೆ ಹೇಗೆ? ಇನ್ನೊಂದು ರಾಷ್ಟ್ರದಲ್ಲಿ ಆರು ಕೋಟಿ ಜನ ಒಟ್ಟಾಗಿದ್ದಾರೆಂದರೆ ನಾವು ಕನ್ನಡಿಗಿರು ಆರು ಕೋಟಿಯೇ ಇರಬೇಕೆಂದು ಹೇಳುವುದೇ? ಆರು ಕೋಟಿ ಆಗುವುದಕ್ಕೆ ಆರು ಕೋಟಿ ಕನ್ನಡಿಗರು ಇನ್ನೂ ಹುಟ್ಟಿಲ್ಲ. ಆದ್ದರಿಂದ ಈ ವಾದವನ್ನು ಹಿಡಿದು ಎರಡು ಕೋಟಿಯಿರುವಲ್ಲಿ ಒಂದೊಂದು ಕೋಟಿಗೂ ಒಂದು ಸಂಸ್ಥಾನವಾಗಲಿ ಎನ್ನುವುದು ಸರಿಯೇ? ಭಾಷೆಯ ಪ್ರಭಾವವನ್ನು ಪ್ರಸ್ತಾಪಿಸುವಾಗ ಶ್ರೀ ಗರಳಪುರಿ ಶಾಸ್ತ್ರಿಯವರು ಇಂಗ್ಲೆಂಡಿಗೆ ಹೋಗಿದ್ದಾಗ ಪಡೆದ ಒಂದು ಅನುಭವವನ್ನು ತಿಳಿಸಬಯಸುತ್ತೇನೆ. ಶ್ರೀ ಗರಳಪುರಿ ಶಾಸ್ತ್ರಿಯವರು ಇಂಗ್ಲೆಂಡಿನಲ್ಲಿ ಎಗ್ಜಿಬಿಷನ್‌ನಲ್ಲಿ ಓಡಾಡುತ್ತಿದ್ದಾಗ, ಇವರೂ ಇನ್ನೊಬ್ಬ ಸ್ನೇಹಿತರೂ ಕನ್ನಡ ಮಾತನಾಡಿಕೊಂಡು ಹೋಗುತ್ತಿರುವುದನ್ನು ಕೇಳಿ ಅಲ್ಲಿದ್ದ ಕನ್ನಡ ನಾಡಿನವರೊಬ್ಬರು ಅವರನ್ನು ತಬ್ಬಿಕೊಂಡು ಕನ್ನಡ ಶಬ್ದ ಕೇಳಿ ಎಷ್ಟು ದಿವಸವಾಯಿತೆಂದು ಹೇಳಿ ಅಪ್ಪಿಕೊಂಡು, 8 ದಿವಸ ಕನ್ನಡ ವಿಚಾರವೇ ಹೊರತು ಇನ್ನೇನೂ ಮಾತನಾಡಲಿಲ್ಲ. ಹೀಗೆ ಒಂದು ಭಾಷೆಯೆಂದರೆ ಒಂದು ಅಭಿಮಾನ ತಾನಾಗಿಯೇ ಬೆಳೆಯುತ್ತಿದೆ. ನಾನು ಒಮ್ಮೆ ಅಲಹಾಬಾದಿಗೆ ಹೋಗಿದ್ದಾಗ ಅಲ್ಲಿ ಮೈಸೂರಿನವರಾಗಿ ಬಾಳೆಹಣ್ಣಿನ ಶಿವಣ್ಣ ಎಂಬುವರನ್ನು ಭೇಟಿ ಮಾಡಿದೆ. ಅಲ್ಲಿಯವರೆಗೂ ಕ್ಯಾದೇನ ಕ್ಯಾಹೋನ ಎಂದು ಮಾತ್ರ ಮಾತನಾಡಿಕೊಂಡು ಹೋಗುತ್ತಿದ್ದ ನನಗೆ ಅವರನ್ನು ನೋಡಿ ಎಷ್ಟು ಆನಂದವಾಯಿತು, ಅವರಿಗೂ ಎಷ್ಟು ಆನಂದವಾಯಿತು! ಅವರೇ ತಮ್ಮ ಮನೆಗೆ ಊಟಕ್ಕೆ ಕರೆದುಕೊಂಡುಹೋದರು. ಈ ರೀತಿಯಾಗಿ ಭಾಷೆ ಪರಸ್ಪರವಾಗಿ ಒಂದು ಸದ್ಭಾವನೆಯನ್ನು ಬೆಳೆಸುತ್ತದೆ. ಆದ್ದರಿಂದ ಕನ್ನಡಿಗರೆಲ್ಲರೂ ಒಂದಾಗುವುದಾದರೆ ಒಂದು ರೀತಿಯ ಬಾಂಧವ್ಯ ಬೆಳೆಯುತ್ತದೆ. ಅಂದ ಮಾತ್ರಕ್ಕೇ ಕನ್ನಡಿಗರಲ್ಲದವರು ನಮ್ಮೊಡನೆ ಸೇರಕೂಡದೆಂದಲ್ಲ, ಏಕೆಂದರೆ, ಆ ರೀತಿ ಯೋಚನೆಮಾಡುತ್ತಾ ಹೋದರೆ ಈ ಪ್ರಾಂತ್ಯವಿಂಗಡಣೆಯಲ್ಲಿ ಜನರನ್ನೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಬೇಕಾಗಿ ಬರುತ್ತದೆ. ಅಂಥ ಪಾಕಿಸ್ಥಾನವನ್ನು ಮಾಡಿದಾಗಲೂ ಮುಸ್ಲಿಮರನ್ನೆಲ್ಲಾ ಇನ್ನೊಂದು ಕಡೆಗೆ ಹೋಗಿ ಎಂದು ಹೇಳಲಿಲ್ಲ. ಅವರು ಇಲ್ಲಿದ್ದರೆ ಅವರಿಗೆ ಸೌಕರ್ಯ ಕೊಡಬಾರದು ಎಂದು ಹೇಳಿಲ್ಲ. ಈಗಾಗಲೇ ಮಾತನಾಡಿದಂಥ ಶ್ರೀಯುತ ಕೆ. ಪಟ್ಟಾಭಿರಾಮನ್‌ರವರು ಈ ಅಲ್ಪಸಂಖ್ಯಾತ ಕೋಮಿನವರ ಹಿತರಕ್ಷಣೆಯ ಬಗ್ಗೆ ಏನೇನು ಭರವಸೆಯನ್ನು ಕೊಡಬೇಕೆಂಬ ವಿಚಾರವನ್ನು ಪ್ರಸ್ಥಾಪಿಸಿದ್ದಾರೆ. ಈ ಮೈನಾರಿಟೀಸ್‌ಗಳಿಗೆ ಏನೇನು ಭರವಸೆಗಳು ಭೇಕಾಗಿವೆಯೋ ಅವುಗಳನ್ನು ರಾಜ್ಯಾಂಗದಲ್ಲಿ ಅಳವಡಿಸಿ ಎಂದು ಹೇಳಿದ್ದಾರೆ. ಬೇಕಾದ ಅನುಕೂಲತೆಗಳೇನೆಂಬುದನ್ನೂ ಸಹ ತಿಳಿಸಿರುತ್ತಾರೆ. ಅವುಗಳೆಲ್ಲಾ ಆಗೇ ಆಗುತ್ತವೆ. ಈ S. R. C. ವರದಿಯಲ್ಲೂ ಕೂಡ ಈ ಅಂಶಗಳನ್ನು ಖಚಿತವಾಗಿ ಉಲ್ಲೇಖಿಸಿದ್ದಾರೆ. ಈ ದಿವಸ ಶ್ರೀ ಮುಲ್ಕಾ ಗೋವಿಂದರೆಡ್ಡಿಯವರಿಗೆ ಒಂದು ಅಂಶ ತಿಳಿಸಬೇಕಾಗಿದೆ. ಈ ದಿವಸ ಶ್ರೀ ಮುಲ್ಕಾರವರನ್ನು ಅವರ ಚುನಾವಣೆ ಕ್ಷೇತ್ರದಿಂದ ಇಲ್ಲಿಗೆ ಆರಿಸಿ ಕಳುಹಿಸಿರತಕ್ಕವರೆಲ್ಲಾ ಅಚ್ಚಕನ್ನಡಿಗರು. ಅಲ್ಲಿ ಚುನಾವಣೆಗೆ ನಿಂತಿದ್ದಂಥ ಅಚ್ಚಕನ್ನಡಿಗರನ್ನು ಸೋಲಿಸಿ ಇವರಿಗೆ ವೋಟುಗಳನ್ನು ಕೊಟ್ಟು ಕಳುಹಿಸಿ

ರುತ್ತಾರೆ. ಇವರಿಗೆ ಗೆಲವನ್ನು ಗಳಿಸಿಕೊಟ್ಟಿರತಕ್ಕವರು ಈ ದಿವಸ ಆ ಕನ್ನಡಿಗರು, ಆದಕಾರಣ ಅವರು ಹೇಳತಕ್ಕಂಥ ಜಾತೀಭಾವನೆ ನಮ್ಮಲ್ಲಿ ಎಲ್ಲಿಯೂ ಇಲ್ಲ. ಆ ಭಾವನೆ ಮೇಲೆ ಇಲ್ಲಿಯವರೆಗೂ ಯಾವಕಾರ್ಯಗಳೂ ನಡೆದಿರುವುದಿಲ್ಲ. ಉದಾಹರಣೆಗೆ ನಾನೀದಿವಸ ಆರಿಸಿ ಬಂದಿರತಕ್ಕಂಥ ಚುನಾವಣಾ ಕ್ಷೇತ್ರ ಯಾವುದಿದೆಯೋ ಅದು ಪೂರ್ತಿ ಲಿಂಗಾಯಿತ ಜನಾಂಗ ಇರತಕ್ಕಂಥ ಕ್ಷೇತ್ರ. ಅವರ ಮೆಜಾರಿಟಿ ಪೂರ್ತಿಯಿದೆ. ಅವರೇ ನನ್ನನ್ನು ಆರಿಸಿ ದೇಶಸೇವೆ ಮಾಡಿ ಎಂದು ವೋಟು ಕೊಟ್ಟು ಕಳುಹಿಸಿದ್ದಾರೆ. ಅಂದಮೇಲೆ ಆ ಲಿಂಗಾಯಿತ ಕೋಮಿನವರಿಗೆ ಯಾವ ವಿಧವಾದ ಜಾತೀಯ ಮನೋಭಾವವಿಲ್ಲ ಎನ್ನುವುದಕ್ಕೆ ಇದೊಂದೇ ಉದಾಹರಣೆಯಲ್ಲ. ಹೀಗೆ ಇನ್ನೂ ಬೇಕಾದಷ್ಟು ಉದಾಹರಣೆಗಳಿವೆ. ದೇಶ ಸೇವೆಯನ್ನು ನಿಸ್ವಾರ್ಥತೆಯಿಂದ ಸಲ್ಲಿಸತಕ್ಕಂಥಾ ಜನರಿಗೆ ಎಲ್ಲಿಯೂ ಅವಕಾಶವಿದ್ದೇ ಇದೆ. ಇದು ಯಾವತ್ತಿಗೂ ಇದ್ದೇ ಇರುತ್ತದೆ. ಈ ದಿವಸ ಎಲ್ಲಿ ಆ ಲಿಂಗಾಯಿತ ಕೋಮಿನವರ ಮೆಜಾರಿಟಿ ಇದೆಯೋ ಅಂಥ ಕಡೆಯಿಂದಲೇ ಅವರು ಬೇರೆಯವರನ್ನು ಚುನಾವಣೆ ಮಾಡಿ ಕಳುಹಿಸಿದ್ದಾರೆ. ಅವರಲ್ಲಿ ಎಂದೂ ಈ ಪಕ್ಷಪಾತ ಭಾವನೆ ಅಥವಾ ಕೋಮುವಾರು ಭಾವನೆಗಳು ಇರುವುದಾಗಿ ಕಂಡುಬಂದಿಲ್ಲ. ಅನೇಕ ವರ್ಷಗಳಿಂದ ನನ್ನನ್ನೇ ಅವರು ಒಂದೇ ಸಮನಾಗಿ ಆರಿಸಿ ಈ ಸಭೆಗೆ ಕಳುಹಿಸಿಕೊಡುತ್ತಿದ್ದಾರೆ. ತಮಗೆ ಉದಾಹರಣೆಗಾಗಿ ಹೇಳಬೇಕೆಂದರೆ ಶ್ರೀಯುತ ಮಹಮ್ಮದ್ ಇಮಾಂರವರು ಬಂದಿರುವ ಚುನಾವಣೆ ಕ್ಷೇತ್ರ ತೆಗೆದುಕೊಳ್ಳಿ. ಅಲ್ಲಿಯೂ ಲಿಂಗಾಯಿತ ಕೋಮಿನ ಮೆಜಾರಿಟಿಯಿದೆ. ಲೀಡರುಗಳಿದ್ದಾರೆ. ಆದಾಗ್ಯೂ ಶ್ರೀ ಇಮಾಂರವರನ್ನೇ ಆರಿಸುತ್ತಿದ್ದಾರೆ. ವಾಸ್ತವಾಂಶ ಈ ರೀತಿ ಇರುವಾಗ ಈ ಪ್ರಶ್ನೆಗಾಗಿ ಒಂದು ಕೋಮುವಾರು ಬಣ್ಣಹಚ್ಚಿ ಮಾತನಾಡುವುದು ಸರ್ವಥಾ ಯಾರಿಗೂ ಸರಿಯಾದ್ದಲ್ಲ, ನ್ಯಾಯವಾದ್ದಲ್ಲ. ಮೇಲಾಗಿ ಆರೀತಿ ವಾದಿಸತಕ್ಕದ್ದು ತೀರಾ ಖಂಡನೀಯವಾದದ್ದು ಎಂದು ಹೇಳುತ್ತೇನೆ. ಈ ದಿವಸ ಯಾರು ಈ ಮೈಸೂರು ಮೈಸೂರಾಗೇ ಉಳಿಯಲಿ ಎಂದು ಹೇಳುತ್ತಿದ್ದಾರೋ ಅವರು ಇನ್ನು ಹೀಗೆ ಹೇಳಲು ಉಪಕ್ರಮಿಸಿದರೆ ಕೊನೆಗೆ ಇವರು ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲದಂತೆ ಆಗುತ್ತಾರೆಂದು ನಾನು ಖಚಿತವಾಗಿ ತಿಳಿಸಬೇಕಾಗಿದೆ. ಒಂದು ವೇಳೆ ಇವರು ಹೇಳತಕ್ಕ ರೀತಿಯಲ್ಲಿ ಮೈಸೂರಿನ ಅಭಿವೃದ್ಧಿಗೇನಾದರೂ ಧಕ್ಕೆ ಬರುವುದಾಗಿ ಕಂಡುಬಂದರೆ ಆಗ ನಾವು ಆ ಕೇಂದ್ರ ಸರ್ಕಾರದವರನ್ನು ಕೇಳಿಕೊಂಡು ಆ ತೊಂದರೆಗಳನ್ನು ನಿವಾರಣೆ ಮಾಡಿಕೊಳ್ಳೋಣ. ನಾವುಗಳೆಲ್ಲರೂ ಮೊದಲನಿಂದಲೂ ದೇಶದಲ್ಲಿ ಒಂದು ವಿಧವಾದ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿಕೊಂಡು ಬಂದಿದ್ದೇವೆ. ಈ ಜಾತಿಯ ಭಾವನೆಯನ್ನು ಯಾರೂ ಯಾರ ತಲೆಯ ಮೇಲೂ ಹೊರಿಸಬೇಕಾಗಿಲ್ಲ. ನಮಗೆ ಇಷ್ಟು ವರ್ಷಗಳ ಕಾಲ ಒಂದು ಗ್ಯಾರಂಟಿ ಕೊಡಿ ಎಂದು ನಾವು ಕೇಂದ್ರದವರನ್ನು ಕೇಳಿಕೊಳ್ಳೋಣ. ನಮಗೆ ಕೊಡತಕ್ಕ ಕಾಂಟ್ರಿಬ್ಯೂಷನ್ ಮೊಬಲಗನ್ನು ಜಾಸ್ತಿಮಾಡಿ ಎಂದು ಕೇಳಿಕೊಳ್ಳೋಣ. ನಾವೆಲ್ಲರೂ ಸೇರಿ ಒಗ್ಗಟ್ಟಾಗಿ ನಮ್ಮ ಬೇಡಿಕೆಗಳನ್ನು ಕೇಂದ್ರ ಸರ್ಕಾರದವರ ಮುಂದಿಟ್ಟು ಇಷ್ಟು ಅನುಕೂಲ ಪಡೆಯಲು ಪ್ರಯತ್ನ ಮಾಡೋಣ. ಈಗಾಗಲೇ ನಮ್ಮ ಕೇಂದ್ರ ಸರ್ಕಾರದ ನಾಯಕರು ಸಮಗ್ರ ಭಾರತದಲ್ಲೆಲ್ಲಾ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ಜಾರಿಗೆ ತರಬೇಕೆಂಬ ತತ್ವವನ್ನಾಗಲೇ ಸಾರಿದ್ದಾರೆ. ಅಂಥ ಸಮಾಜ ಕಟ್ಟಬೇಕೆಂದು ಕಂಕಣ ತೊಟ್ಟಿದ್ದಾರೆ. ನಮ್ಮ ಭಾರತ ದೇಶವನ್ನು ಇಡೀ ಪ್ರಪಂಚದಲ್ಲಿರತಕ್ಕ ರಾಷ್ಟ್ರಗಳ ಜೊತೆಯಲ್ಲಿ ಒಂದು ಸರಿಸಮಾನವಾದ ಸ್ಥಾನಮಾನವನ್ನು ಎಲ್ಲಾ ವಿಚಾರಗಳಲ್ಲೂ ಗಳಿಸಿಕೊಂಡಿರುವಂತೆ ಮಾಡತಕ್ಕ ಬಗ್ಗೆ, ಅವರು ಅಂಥ ಒಂದು ರಾಷ್ಟ್ರವನ್ನು ಕಟ್ಟತಕ್ಕ ಬಗ್ಗೆ, ನಮ್ಮ ದೇಶಾದ್ಯಂತವೂ ಅಭಿವೃದ್ಧಿ ಕಾರ್ಯಗಳಿಗಾಗಿ ಐದು ಸಹಸ್ರ ಕೋಟಿ ರೂಪಾಯಿಗಳನ್ನು ಹಾಕಲು ಸಿದ್ಧವಾಗಿದ್ದೇವೆಂದು ಸಾರಿದ್ದಾರೆ. ಆ ಟ್ರೈಬಲ್ ಏರಿಯಾದಲ್ಲಿರತಕ್ಕಂಥ ಜನಾಂಗವನ್ನೂ ಸಹ ಇತರೇ ಜನಾಂಗಗಳ ಮಟ್ಟಕ್ಕೆ ಎತ್ತಲೇಬೇಕೆಂದು ಹೇಳಿದ್ದಾರೆ.' ಈ ದಿವಸ ನಮ್ಮ ತೋಳುಗಳಲ್ಲಿ ನಮಗೆ ಬಲವಿಲ್ಲ. ಇಂಥ ಕಷ್ಟ ಕಾಲದಲ್ಲಿ ಆ ಕೇಂದ್ರ ಸರ್ಕಾರ ನಮಗೆ ಒಬ್ಬ ಧನ ದೇವತೆಯಾಗಿ-ಧರ್ಮದೇವತೆಯಾಗಿ ಹುಟ್ಟಿ ಬಂದಿರುವುದು ನಮ್ಮಗಳ ಒಂದು ದೊಡ್ಡ ಸುದೈವ. ಇದೇ ವೇಳೆಯಲ್ಲಿ ನಮ್ಮ ಭಾರತಕ್ಕೆ ಭೇಟಿ ಕೊಟ್ಟಿದ್ದಂಥ ಜಗತ್ತಿನ ಶ್ರೇಷ್ಠ ರಾಷ್ಟ್ರನಾಯಕರಾದ ರಷ್ಯಾ ದೇಶದ ನಾಯಕರು ನಮಗೆ ಏನೇನು ಟೆಕ್ನಿಕಲ್ ಸಹಾಯ-ಸಹಕಾರ ಬೇಕಾಗಿದ್ದರೂ ಅದೆಲ್ಲವನ್ನೂ ಭಾರತಕ್ಕೆ ನೀಡಲು ತಯಾರಿದ್ದೇವೆಂದು ಸಾರಿರುತ್ತಾರೆ. ಅವರಲ್ಲಿ ಒಂದು ಚೂರು ರೊಟ್ಟಿಯಿದ್ದರೆ ಅದನ್ನು ಎರಡು ಭಾಗಮಾಡಿ, ಇದರಲ್ಲಿ ಒಂದು ಭಾಗವನ್ನು ಭಾರತದವರಿಗೆ ಹಂಚಿ ಕೊಡುತ್ತೇವೆ ಎಂದು ಹೇಳಿದ್ದಾರೆ. ನಮಗೆ ಸಹಾಯ ಮಾಡುತ್ತೇವೆಂದು ತುಂಬಾ ಭರವಸೆ ನೀಡಿದ್ದಾರೆ. ಹೀಗೆ ನಮ್ಮ ರಾಷ್ಟ್ರನಾಯಕರುಗಳು ದೇಶವನ್ನು ಮುಂದುವರಿಸಲು ಹಗಲಿರುಳು ಶ್ರಮಿಸುತ್ತಿರುವಾಗ ನಾವಿಲ್ಲಿ ಕುಳಿತುಕೊಂಡು ಇಂಥಾ ಸಣ್ಣತನದಿಂದ ವಾದ ಮಾಡುವುದು ಸರ್ವಥಾ ಸರಿಯಲ್ಲ. ಇನ್ನಾದರೂ ಇವುಗಳನ್ನೆಲ್ಲಾ ಬಿಟ್ಟುಬಿಡೋಣ. ನಮ್ಮ ಭಾರತದ ಹಿರೀ ನಾಯಕರು ಹೇಳಿರತಕ್ಕಂಥ ದೊಡ್ಡ ಮಾರ್ಗದಲ್ಲಿ ಹೋಗೋಣ. ಅವರಿಗೆ ನಮ್ಮೆಲ್ಲರ ಸಂಪೂರ್ಣ ಸಹಕಾರ ನೀಡೋಣ. ದೊಡ್ಡ ರಾಜ್ಯವನ್ನು ಕಟ್ಟೋಣ. ಇಂಥ ದೊಡ್ಡ ಉದಾತ್ತ ಧ್ಯೇಯಗಳಿಗೆ ತಾವೆಲ್ಲರೂ ಈ ದಿವಸ ಒಮ್ಮನಸ್ಸಿನಿಂದ ಸಹಾಯ ನೀಡಬೇಕೆಂದು ಕೇಳಿಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Tomorrow we will be hard put to and therefore if any Hon'ble Members desire to speak I request them to speak now alone (*After a pause*) I request the Hon'ble Members at least to help me tomorrow by taking less time and allowing me to close the session tomorrow.

Sri K. PATTABHIRAMAN.—What are the hours of meeting in the morning and the hours of meeting in the afternoon tomorrow ?

Mr. SPEAKER.—From 8-30 to 12-30 and in the afternoon from Three of the Clock. We do not know when it wil close.

The House rose for the day at Ten Minutes past Six of the Clock to meet again at Thirty Minutes past Eight of the Clock on Thursday, the 1st December 1955.

WD 1451—GPB—550—2-3-56